# ವಿಧಾನಸಭೆ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ, ಗಾಯಕಿ ಅರ್ಚನ ಉಡುಪರವರಿಗೆ ಸನ್ಮಾನ

• ಉದಯವಾಹಿನಿ, ಬೆಂಗಳೂರು

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಗಾಯಿತ್ರಿ ಭವನದಲ್ಲಿ ಎರಡು ದಿನಗಳ ಕಾಲ ಶ್ರೀ ವಿದ್ಯಾಗಣಪತಿ ಮಹೋತ್ಸವ ಕಾರ್ಯಕ್ರಮ ಮಹಾಮಂಗಳರತಿ, ವಿಶೇಷಪೂಜೆ ವಿಪ್ರ ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರಾದ ಎಸ್.ರಘುನಾಥ್ ರವರು, ವಿಶೇಷ ಪೂಜೆ ಸಲ್ಲಿಸಿ ವಿಪ್ರ ಸಾಧಕರಿಗೆ ಸನ್ಮಾನಿಸಿದರು.

ಹಿರಿಯ ಉಪಾಧ್ಯಕ್ಷರಾದ ಆರ್.ಲಕ್ಷ್ಮೀಕಾಂತ್, ಖಜಾಂಚಿ ಸುಬ್ಬಣ್ಣ, ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷರಾದ ಅಸಗೋಡು ಜಯಸಿಂಹ, ಬಿಜೆಪಿ ಮುಖಂಡ ಪ್ರಹ್ಲಾದ್ ಬಾಬು, ದತ್ತಾತ್ರಿರವರು ಮತ್ತು ರಾಮ್ ಪ್ರಸಾದ್‌ರವರು ಉಪಸ್ಥಿತರಿದ್ದರು. ಗಣೇಶ


ಉದಯವಾಹಿನಿ ಚಿತ್ರ

ಮಹೋತ್ಸವ ಸಂದರ್ಭದಲ್ಲಿ ಈ ಕೆಳಕಂಡ ಸಾಧಕರಿಗೆ ಸನ್ಮಾನಿಸಿ ಗೌರವಿಸಲಾಯಿತು ವಿದುಷಿ ಡಾ. ಹೆಚ್.ಜಿ. ಅಮೃತವರ್ಷಿಣಿರವರು ವೇದಾಂತರತ್ನ, ವೇದಶ್ರೀ ಡಾ. ಬಿ.ಎನ್. ನಾಗರಾಜ್ ರವರು ವೇದ ವಿದ್ವಾನ್ ಪಂ.ಡಾ. ಭೀಮಸೇನಾಚಾರ್ಯ ಅತನೂರುರವರು ವೇದ ವಿದ್ವಾನ್ ಆಗಮಶಾಸ್ತ್ರಪ್ರವೀಣ ಶ್ರೀ ಬಿ.ಎಸ್. ಅನಂತಕೃಷ್ಣ ಭಟ್, ವಿದ್ವಾನ್ ಡಾ. ಕೆ.ಎಸ್. ಅರುಣ್ ಕುಮಾರ್‌ಆಚಾರ್ಯರವರು ಫಾಲಚಂದ್ರ ಶಾಸ್ತ್ರೀರವರು ವೇದ ವಿದ್ವಾನ್ ಡಾ. ವೆಂಕಟೇಶಾಚಾರ್ ಬಿ.ಆರ್. ಅಡ್ಡಗದ್ದೆ ಕೃಷ್ಣಮೂರ್ತಿ ಭಟ್ಟರು, ಪ್ರಭಾಕರ್ ಶಾಸ್ತ್ರೀರವರು ಶ್ರೀಮತಿ ಅರ್ಚನ ಉಡುಪರವರು ಶ್ರೀಮತಿ ಎಂ.ಕೆ. ವಿಶಾಲಾಕ್ಷಿರವರು ಡಾ. ಶ್ರೀಕಾಂತಮ್ ನಾಗೇಂದ್ರ ಶಾಸ್ತ್ರೀರವರು ರೈಸ್ ಗ್ರೈನ್ ವೆಂಕಟೇಶ್ ರವರು ವಿದುಷಿ ಶ್ರೀಮತಿ ಸುಮಾ ಕೃಷ್ಣಮೂರ್ತಿರವರು ವಿದ್ವಾನ್ ಶ್ರೀ ಎನ್. ರಾಜ್ ಕಮಲ್ ರವರು ವಿದ್ವಾನ್ ಗಾನಕಲಾ ಶ್ರೀ ಎಸ್.ಎನ್. ಸ್ವಾಮಿರವರು ವಿದೂಷಿ ಡಾ. ಲಕ್ಷ್ಮೀ ರೇಖಾ ಅರುಣ್‌ರವರು ಇದ್ದರು.

# ಅ.4ರಂದು 'ತರ್ಪಣ ವಿಧಿ ವಿವೇಕ' ಗ್ರಂಥ ಲೋಕಾರ್ಪಣೆ

• ಉದಯವಾಹಿನಿ, ಬೆಂಗಳೂರು

ತರ್ಪಣ ವಿಧಿಯ ಶಾಸ್ತ್ರೀಯ ಮಹತ್ವ, ಆಚರಣಾ ಕ್ರಮ ಪಿತೃಕಾರ್ಯಗಳ ಕುರಿತು ಸರಳವಾಗಿ ಮಾರ್ಗದರ್ಶನ ನೀಡುವ 'ತರ್ಪಣ ವಿಧಿ ವಿವೇಕ' ಗ್ರಂಥದ ಲೋಕಾರ್ಪಣಾ ಸಮಾರಂಭವು ಅಕ್ಟೋಬರ್ 4ರಂದು ಭಾನುವಾರ ಸಂಜೆ 6.30ಕ್ಕೆ ಬೆಂಗಳೂರಿನ ಮಲ್ಲೇಶ್ವರಂ 6ನೇ ಮುಖ್ಯ ರಸ್ತೆಯ ಶ್ರೀ ಶೃಂಗೇರಿ ಶಂಕರ ಮಠದಲ್ಲಿ ನಡೆಯಲಿದೆ. ರಾಮಕೃಷ್ಣವಿವೇಕಾನಂದ ಆಶ್ರಮ, ತುಮಕೂರಿನ ಅಧ್ಯಕ್ಷರಾದ ಶ್ರೀ ವೀರೇಶಾನಂದ ಸರಸ್ವತಿ ಸ್ವಾಮಿಗಳು ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಡಾ. ಎಸ್. ಅಹಲ್ಯಾ ಶರ್ಮ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಶಿಕ್ಷಣ ಇಲಾಖೆಯ ನಿವೃತ್ತ ಹಿರಿಯ ಅಧಿಕಾರಿ ವೇ.ಬ್ರ. ಶ್ರೀವೆಂಕಟರಾಮ ಶಾಸ್ತ್ರಿಗಳು ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವೇದಾಂತ ವಿಭಾಗದ ಮುಖ್ಯಸ್ಥರಾದ ಡಾ. ವಿನಯಾಚಾರ್ಯ ಪಿ. ಜ್ಯೋತಿಷಿ ವೇ.ಬ್ರ. ಶ್ರೀ ತುಮಕೂರು ಕರಣೀಕ ನರಹರಿ ಶರ್ಮ ಉಪಸ್ಥಿತರಿರುವರು. ಅನಂತರಾಮ ಪ್ರಕಾಶನ ವತಿಯಿಂದ ಪ್ರಕಟವಾಗಿರುವ ಈ ಗ್ರಂಥವು ತರ್ಪಣ ವಿಧಿಯ ಉದ್ದೇಶ, ಅದರ ಹಿಂದಿರುವ ಧಾರ್ಮಿಕತಾತ್ತ್ವಿಕ ಆಶಯ, ಪಿತೃಕಾರ್ಯದ ಮಹತ್ವ ಹಾಗೂ ಶಾಸ್ತ್ರೋಕ್ತ ಆಚರಣಾ ವಿಧಾನಗಳನ್ನು ಸರಳವಾಗಿ ಪರಿಚಯಿಸುವ ಉದ್ದೇಶದಿಂದ ರೂಪಿಸಲಾಗಿದೆ ಎಂದು ಗ್ರಂಥಕರ್ತ ಡಾ. ಅಜಿತ್ ನಿರಂಜನ್ ವೈ.ಎ. ತಿಳಿಸಿದ್ದಾರೆ. ಪಿತೃಕಾರ್ಯಗಳ ಆಚರಣೆಯಲ್ಲಿ ಕಂಡುಬರುವ ಹಲವು ಸಂದೇಹಗಳಿಗೆ ಶಾಸ್ತ್ರೀಯ ನೆಲೆಯಲ್ಲಿ ಸ್ಪಷ್ಟತೆ ನೀಡುವ ಪರಂಪರೆಯ ಆಚರಣೆಗಳನ್ನು ಅರ್ಥಪೂರ್ಣವಾಗಿ ಅನುಸರಿಸಲು ಸಹಕಾರಿಯಾಗುವ ಉದ್ದೇಶವನ್ನು ಗ್ರಂಥ ಹೊಂದಿದೆ. ಕಾರ್ಯಕ್ರಮಕ್ಕೆ ಎಸ್.ಎಲ್.ಎನ್. ಟ್ರಸ್ಟ್, ರಾಜಾಜಿನಗರ, ಬೆಂಗಳೂರು ಸಹಕಾರ ನೀಡುತ್ತಿದೆ. ಹೆಚ್ಚಿನ ಮಾಹಿತಿಗಾಗಿ ಡಾ. ಅಮೃತ್ ಯಾದಾಟಿ 8971421376 ಅವರನ್ನು ಸಂಪರ್ಕಿಸಬಹುದು.

# ಕರ್ನಾಟಕದ ಬರ ಪರಿಸ್ಥಿತಿಗೆ 3,705 ಕೋಟಿ ರೂ. ಕೇಂದ್ರ ನೆರವು ಕೋರಿದ ಹೆಚ್‌ಡಿಕೆ

• ಉದಯವಾಹಿನಿ, ಬೆಂಗಳೂರು

ರಾಜ್ಯಾದ್ಯಂತ ತೀವ್ರ ಬರ ಪರಿಸ್ಥಿತಿ ಮತ್ತು ಅಂದಾಜು 18,748.23 ಕೋಟಿ ರೂ. ಮೌಲ್ಯದ ಬೆಳೆ ನಷ್ಟವನ್ನು ಉಲ್ಲೇಖಿಸಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಕರ್ನಾಟಕಕ್ಕೆ ಕೇಂದ್ರದ ನೆರವು ಕೋರಿದ್ದಾರೆ. ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಸೆಪ್ಟೆಂಬರ್ 24ರಂದು ಬರೆದ ಪತ್ರದಲ್ಲಿ, ಕುಮಾರಸ್ವಾಮಿ ಅವರು ಸೆಪ್ಟೆಂಬರ್ 9ರ ವೇಳೆಗೆ ಕರ್ನಾಟಕದಲ್ಲಿ ಶೇ. 34 ರಷ್ಟು ಮಳೆ ಕೊರತೆ ದಾಖಲಾಗಿದೆ ಎಂದು ತಿಳಿಸಿದ್ದಾರೆ. ರಾಜ್ಯದ


ಉದಯವಾಹಿನಿ ಚಿತ್ರ

31 ಜಿಲ್ಲೆಗಳ ಪೈಕಿ 30 ಜಿಲ್ಲೆಗಳು ಮತ್ತು 240 ತಾಲ್ಲೂಕುಗಳ ಪೈಕಿ 182 ತಾಲ್ಲೂಕುಗಳು ಮಳೆ ಕೊರತೆಯನ್ನು ಎದುರಿಸುತ್ತಿವೆ ಎಂದು ಅವರು ವಿವರಿಸಿದ್ದಾರೆ. ಕರ್ನಾಟಕ ಸರ್ಕಾರದ ಮೌಲ್ಯಮಾಪನದ ಅಂಕಿ-ಅಂಶಗಳನ್ನು ಉಲ್ಲೇಖಿಸಿದ ಕೇಂದ್ರ ಸಚಿವರು 101 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದೆ ಮತ್ತು ಅದರಲ್ಲಿ 89 ತಾಲ್ಲೂಕುಗಳನ್ನು ತೀವ್ರವಾಗಿ ಬಾಧಿತವಾದವು ಎಂದು ವರ್ಗೀಕರಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ. ಬರಗಾಲವು ಕೃಷಿ ವಲಯಕ್ಕೆ ಅಪಾರ ಹಾನಿಯನ್ನುಂಟುಮಾಡಿದ್ದು, 19.52 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ನಷ್ಟ ಸಂಭವಿಸಿದೆ ಎಂದು ಕೇಂದ್ರ ಸಚಿವರು ಹೇಳಿದ್ದಾರೆ. ಬೆಳೆ ನಷ್ಟದ ಅಂದಾಜು ಮೌಲ್ಯ 18,748.23 ಕೋಟಿ ರೂ. ಎಂದು ಅವರು ತಿಳಿಸಿದ್ದಾರೆ.

# ಕಾಂಗ್ರೆಸ್‌ನವರು ಶಿಕಾರಿಪುರದ ಅಭಿವೃದ್ಧಿಯೊಂದಿಗೆ ಹೋಲಿಕೆ ಮಾಡಿಕೊಳ್ಳಲಿ

## ರೈತರು ಸಂಕಷ್ಟಕ್ಕೆ ಸಿಲುಕಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಸಂದರ್ಭದಲ್ಲಿ ಕಾಂಗ್ರೆಸ್ ಸರ್ಕಾರ ರೈತರ ನೆರವಿಗೆ ಧಾವಿಸುವ ಬದಲು ಉಡಾಫೆಯಾಗಿ ವರ್ತಿಸುತ್ತಿದೆ.

• ಉದಯವಾಹಿನಿ, ಬೆಂಗಳೂರು

ಮುಖ್ಯಮಂತ್ರಿಗಳು ಹಾಗೂ ಕಾಂಗ್ರೆಸ್ ನಾಯಕರ ಸ್ವಕ್ಷೇತ್ರಗಳ ಅಭಿವೃದ್ಧಿಯನ್ನು ಶಿಕಾರಿಪುರದ ಅಭಿವೃದ್ಧಿಯೊಂದಿಗೆ ಹೋಲಿಕೆ ಮಾಡಿಕೊಳ್ಳಲಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ, ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್‌ಗೆ ತಿರುಗೇಟು ನೀಡಿದರು.

**1** ಕಾಂಗ್ರೆಸ್ ಉಡಾಫೆ ವರ್ತನೆ
**2** 50 ಸಾವಿರ ಪರಿಹಾರ ನೀಡಲಿ
**3** ಪರಿಸ್ಥಿತಿ ಕುರಿತು ಶ್ವೇತಪತ್ರ ಹೊರಡಿಸಿ

ಮಲ್ಲೇಶ್ವರಂ ಬಿಜೆಪಿ ಕಚೇರಿಯಲ್ಲಿ ಮಂಗಳವಾರ ಸುದ್ದಿಗೋಷ್ಠಿ ನಡೆಸಿದ ಅವರು, ಶಿಕಾರಿಪುರದಿಂದ ಕಾಂಗ್ರೆಸ್ ಪಾದಯಾತ್ರೆ ನಡೆಸುವುದಾಗಿ ಬಿ ಕೆ ಹರಿಪ್ರಸಾದ್ ನೀಡಿರುವ ಹೇಳಿಕೆಗೆ ಪ್ರತಿಕ್ರಿಯಿಸುತ್ತಾ, ಅವರು ನಮ್ಮ ಬಳ್ಳಾರಿ ಚಲೋ ಪಾದಯಾತ್ರೆಯಿಂದ ಪ್ರೇರಣೆ ಪಡೆದಿರಬಹುದು. ನಮ್ಮ ಪಾದಯಾತ್ರೆ ರಾಜ್ಯ ಸರ್ಕಾರದ ಸೊಕ್ಕನ್ನು ಅಡಗಿಸುವಲ್ಲಿ ಕಾರಣವಾಗಿದೆ. ಅವರು ಪಾದಯಾತ್ರೆ ಮಾಡುವುದಾದರೆ ಸ್ವಾಗತ ಎಂದರು.

ಶಿಕಾರಿಪುರ ನನ್ನ ರಾಜಕೀಯ ಬದುಕಿಗೆ ಜನ್ಮ ನೀಡಿದ ನೆಲ. ಯಡಿಯೂರಪ್ಪ ಅವರ ಹೋರಾಟದ ಪರಂಪರೆಯನ್ನು ಹೊಂದಿರುವ ಈ ನೆಲಕ್ಕೆ ಬಂದು ಪಾದಯಾತ್ರೆ ಮಾಡುವುದಾದರೆ ಬರಲಿ. ಶಿಕಾರಿಪುರವನ್ನು ಗೆಲ್ಲಬೇಕು ಎಂಬ ಬಿ.ಕೆ. ಹರಿಪ್ರಸಾದ್ ಅವರ ಹೇಳಿಕೆಯನ್ನು ತಾವು ಸವಾಲಾಗಿ ಸ್ವೀಕರಿಸುತ್ತೇನೆ. ಅವರು ಶಿಕಾರಿಪುರಕ್ಕೆ ಬರಲಿ, ಪಾದಯಾತ್ರೆ ಮಾಡಲಿ. ಸರ್ಕಾರಕ್ಕೆ ಬರುವ ಮೊದಲು ಕಾಂಗ್ರೆಸ್ ನೀಡಿದ್ದ ಭರವಸೆಗಳನ್ನು ಜನರಿಗೆ ನೆನಪಿಸಿ, ಜನರು ಕೇಳುವ ಪ್ರಶ್ನೆಗಳಿಗೆ ಉತ್ತರ ನೀಡಿ ಹೋಗಲಿ ಎಂದರು.

**ಕಾಂಗ್ರೆಸ್ ಸರ್ಕಾರದಿಂದ ಉಡಾಫೆ ವರ್ತನೆ:** ರಾಜ್ಯದಲ್ಲಿ ಬರದ ಪರಿಸ್ಥಿತಿ ತೀವ್ರವಾಗಿದ್ದು, ರೈತರು ಸಂಕಷ್ಟಕ್ಕೆ ಸಿಲುಕಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ


ಉದಯವಾಹಿನಿ ಚಿತ್ರ

ಸಂದರ್ಭದಲ್ಲಿ ಕಾಂಗ್ರೆಸ್ ಸರ್ಕಾರ ರೈತರ ನೆರವಿಗೆ ಧಾವಿಸುವ ಬದಲು ಉಡಾಫೆಯಾಗಿ ವರ್ತಿಸುತ್ತಿದೆ. ಮುಖ್ಯಮಂತ್ರಿಗಳು ವಿಶೇಷ ಅಧಿವೇಶನ ಕರೆದು ಬರ ಪರಿಸ್ಥಿತಿ ಕುರಿತು ಚರ್ಚೆ ನಡೆಸುತ್ತಾರೆ ಎಂಬ ನಿರೀಕ್ಷೆ ಇತ್ತು. ಆದರೆ, ರೈತರಿಗೆ ನೇರ ಪರಿಹಾರ ನೀಡುವ ವಿಚಾರದಲ್ಲಿ ಸರ್ಕಾರ ಯಾವುದೇ ಗಂಭೀರ ಕ್ರಮ ಕೈಗೊಂಡಿಲ್ಲ ಎಂದು ಟೀಕಿಸಿದರು. ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದ ವೇಳೆ ಹಾಗೂ ಇತರ ರಾಜ್ಯಗಳ ಸರ್ಕಾರಗಳು ಬರ ಮತ್ತು ಸಂಕಷ್ಟದ ಸಂದರ್ಭದಲ್ಲಿ ರೈತರಿಗೆ ನೀಡಿದ ನೆರವಿನ ಕುರಿತು ವಿಧಾನಮಂಡಲದಲ್ಲಿ

**ಎಕರೆಗೆ 50 ಸಾವಿರ ಪರಿಹಾರ ನೀಡಲಿ**

ಎರಡೂ ಸದನಗಳಲ್ಲಿ ಬಿಜೆಪಿ ರೈತರಿಗೆ ಎಕರೆಗೆ ಕನಿಷ್ಠ 50 ಸಾವಿರ ಪರಿಹಾರ ನೀಡಬೇಕು ಎಂದು ಆಗ್ರಹಿಸಿದೆ. ಆದರೆ, ರಾಜ್ಯ ಸರ್ಕಾರ ರೈತರಿಗೆ ಕೇವಲ 2,500 ಪರಿಹಾರ ನೀಡಿ ಕೈತೊಳೆದುಕೊಂಡಿದೆ. ಇದು ರೈತರ ಸಂಕಷ್ಟಕ್ಕೆ ತಕ್ಕ ಪರಿಹಾರವಲ್ಲ. ಬರಗಾಲದಲ್ಲಿ ರೈತರ ಬೆನ್ನಿಗೆ ನಿಲ್ಲಬೇಕಿದ್ದ ಸರ್ಕಾರ ಅವರ ನೋವನ್ನು ಅರ್ಥಮಾಡಿಕೊಳ್ಳುವಲ್ಲಿ ವಿಫಲವಾಗಿದೆ ಎಂದರು.

> ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಸಂದರ್ಭದಲ್ಲಿ ಸರ್ಕಾರ ಸೂಕ್ತ ಪರಿಹಾರ, ಸಾಲದ ಒತ್ತಡದಿಂದ ಮುಕ್ತಿ ಹಾಗೂ ಸಮರ್ಪಕ ವಿದ್ಯುತ್ ಸೇರಿದಂತೆ ಅಗತ್ಯ ನೆರವು ಒದಗಿಸಬೇಕಿತ್ತು. ಆದರೆ, ಸರ್ಕಾರ ಈ ವಿಚಾರದಲ್ಲಿ ನಿರ್ಲಕ್ಷ್ಯ ತೋರುತ್ತಿರುವುದನ್ನು ಬಿಜೆಪಿ ಖಂಡಿಸುತ್ತದೆ ಎಂದರು.

### ರಾಜ್ಯದ ಹಣಕಾಸು ಪರಿಸ್ಥಿತಿ ಕುರಿತು ಶ್ವೇತಪತ್ರ ಹೊರಡಿಸಿ

ಅಧಿಕಾರಕ್ಕೆ ಬರುವ ಮುನ್ನ ಕಾಂಗ್ರೆಸ್ ನಾಯಕರು ಗ್ಯಾರಂಟಿಗಳ ಮೂಲಕ ಜನರಿಗೆ ಹಲವು ಭರವಸೆಗಳನ್ನು ನೀಡಿದ್ದರು. ಆದರೆ, ಈಗ ಅದೇ ಗ್ಯಾರಂಟಿಗಳನ್ನು ಜಾರಿಗೊಳಿಸುವುದು ಸರ್ಕಾರಕ್ಕೆ ಕಷ್ಟವಾಗುತ್ತಿದೆ. ಆರ್ಥಿಕ ಇಲಾಖೆ ನೀಡಿರುವ ಪತ್ರ ರಾಜ್ಯದ ಹಣಕಾಸು ಪರಿಸ್ಥಿತಿ ಕುರಿತು ಗಂಭೀರ ಪ್ರಶ್ನೆಗಳನ್ನು ಎತ್ತಿದೆ. ಆದ್ದರಿಂದ ಹಣಕಾಸು ಸಚಿವರೂ ಆಗಿರುವ ಸಿಎಂ ಡಿ.ಕೆ. ಶಿವಕುಮಾರ್ ಅವರು ರಾಜ್ಯದ ನೈಜ ಹಣಕಾಸು ಪರಿಸ್ಥಿತಿ ಕುರಿತು ತಕ್ಷಣ ಶ್ವೇತಪತ್ರ ಹೊರಡಿಸಬೇಕು ಎಂದು ಆಗ್ರಹಿಸಿದರು.

ಚರ್ಚೆಯಾಗಿದೆ. ನೆರೆಯ ಮಹಾರಾಷ್ಟ್ರದಲ್ಲಿಯೂ ರೈತರ ಸಂಕಷ್ಟಕ್ಕೆ ಸ್ಪಂದಿಸುವ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಆದರೆ, ಕರ್ನಾಟಕ ಸರ್ಕಾರ ಮಾತ್ರ ರೈತರಿಗೆ ಸಮರ್ಪಕ ಪರಿಹಾರ ನೀಡದೆ ನಿರ್ಲಕ್ಷ್ಯ ಮಾಡುತ್ತಿದೆ ಎಂದು ಹೇಳಿದರು. ವಿಕಲಚೇತನರ ಪಿಂಚಣಿ, ವೃದ್ಧಾಪ್ಯ ವೇತನ ಸೇರಿದಂತೆ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳ ಫಲಾನುಭವಿಗಳಿಗೆ ಹಣ ತಲುಪುತ್ತಿಲ್ಲ.

# ಪಶುವೈದ್ಯಾಧಿಕಾರಿಗಳ ನೇಮಕಾತಿ ಪರೀಕ್ಷೆಗೂ ಮೊದಲು ಉತ್ತರ ಸಹಿತ ಪ್ರಶ್ನೆ ಪತ್ರಿಕೆ ಸೋರಿಕೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಕೆಪಿಎಸ್‌ಸಿ ಪಶು ವೈದ್ಯಾಧಿಕಾರಿಗಳ ನೇಮಕಾತಿ ಪರೀಕ್ಷೆಗೆ ಒಂದು ದಿನ ಮುನ್ನ ಉತ್ತರ ಸಹಿತ ಪ್ರಶ್ನೆ ಪತ್ರಿಕೆ ಸೋರಿಕೆ ಮಾಡಲಾಗಿತ್ತು ಎಂಬ ಮಾಹಿತಿ ತನಿಖೆ ವೇಳೆ ಬೆಳಕಿಗೆ ಬಂದಿದೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಪ್ರಕಟಣೆಯಲ್ಲಿ ಮಾಹಿತಿ ನೀಡಿದೆ. ನ್ಯಾಯಾಂಗ ಬಂಧನದಲ್ಲಿದ್ದ ಬಸವರಾಜ್ ಕನ್ನಾಳೆ ಹಾಗೂ ಐಎಎಸ್ ಅಧಿಕಾರಿ ಜ್ಞಾನೇಂದ್ರ ಕುಮಾರ್ ಗಂಗ್ವಾರ್ ಅವರನ್ನು ಬಂಧಿಸಿದ್ದ ಇ.ಡಿ, 14 ದಿನಗಳ ಕಾಲ ಕಸ್ಟಡಿಗೆ ಪಡೆದುಕೊಂಡಿತ್ತು. ಸದ್ಯ ಇಬ್ಬರನ್ನು ವಿಚಾರಣೆ ನಡೆಸುತ್ತಿರುವ ಇ.ಡಿ ಅಧಿಕಾರಿಗಳು ಮಹತ್ವದ ಮಾಹಿತಿಯನ್ನು ಹಂಚಿಕೊಂಡಿದ್ದಾರೆ.

ಪರೀಕ್ಷೆ ನಡೆದ ಸಂದರ್ಭದಲ್ಲಿ ನಿಯಂತ್ರಕರಾಗಿದ್ದ ಐಎಎಸ್ ಅಧಿಕಾರಿ ಜ್ಞಾನೇಂದ್ರ ಕುಮಾರ್ ಗಂಗ್ವಾರ್ ಅವರು ತಮಗೆ ವಹಿಸಲಾಗಿದ್ದ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು, ಗೌಪ್ಯವಾಗಿರಬೇಕಿದ್ದ ಪ್ರಶ್ನೆ ಪತ್ರಿಕೆಗಳನ್ನು ಉತ್ತರ ಸಹಿತವಾಗಿ ಪ್ರಮುಖ ಆರೋಪಿ ಬಸವರಾಜ್ ಕನ್ನಾಳೆಗೆ ತಲುಪಿಸಿದ್ದರು. ಆ ಬಳಿಕ ಬಸವರಾಜ್ ಕನ್ನಾಳೆ ಹಾಗೂ ಆತನ ಸಹಚರರು ಅಭ್ಯರ್ಥಿಗಳನ್ನು ಬೆಂಗಳೂರಿನ ಹೊರವಲಯದ ರೆಸಾರ್ಟ್‌ವೊಂದಕ್ಕೆ ಕರೆದೊಯ್ದು, ಪ್ರಶ್ನೆ ಪತ್ರಿಕೆ ಮತ್ತು ಉತ್ತರಗಳನ್ನು ನೋಡಿಕೊಳ್ಳಲು ಅವಕಾಶ ಕಲ್ಪಿಸಿದ್ದರು.

ಮರುದಿನ ಪರೀಕ್ಷಾ ಕೇಂದ್ರಗಳಿಗೆ ಅಭ್ಯರ್ಥಿಗಳನ್ನು ತಲುಪಿಸಲು ಸ್ವತಃ ವಾಹನ ವ್ಯವಸ್ಥೆಯನ್ನೂ ಮಾಡಿಕೊಟ್ಟಿದ್ದರು ಎಂಬ ಮಾಹಿತಿಯನ್ನು ಇ.ಡಿ ಅಧಿಕಾರಿಗಳು ತಿಳಿಸಿದ್ದಾರೆ. ಈ ಬೃಹತ್ ಅಕ್ರಮ ನೇಮಕಾತಿಗಾಗಿ ಆರಂಭದಲ್ಲಿ ಪ್ರತಿಯೊಬ್ಬ ಅಭ್ಯರ್ಥಿಯಿಂದ ಸುಮಾರು 80 ಲಕ್ಷ ರೂಪಾಯಿಗೆ ಬೇಡಿಕೆ ಇಡಲಾಗಿತ್ತು. ನಂತರ ಚೌಕಾಸಿ ನಡೆಸಿ 30 ಲಕ್ಷದಿಂದ 40 ಲಕ್ಷ ರೂಪಾಯಿ ಮೊತ್ತವನ್ನು ನಿಗದಿಪಡಿಸಲಾಗಿತ್ತು. ಮುಂಗಡ ಹಣವನ್ನು ನಗದು ಹಾಗೂ ಬ್ಯಾಂಕ್ ಖಾತೆಗಳ ಮೂಲಕ ಪಡೆಯಲಾಗಿದ್ದರೆ, ಬಾಕಿ ಹಣಕ್ಕಾಗಿ ಅಭ್ಯರ್ಥಿಗಳಿಂದ ಸಹಿ ಮಾಡಿದ ಖಾಲಿ ಚೆಕ್ ಮತ್ತು ಪ್ರಾಮಿಸರಿ ನೋಟ್‌ಗಳನ್ನು ಪಡೆಯಲಾಗಿತ್ತು.

# ಅವಧಿ ಮುಗಿದ ಹಾಲು, ಮೊಸರು, ಹಣ್ಣು, ಬ್ರೆಡ್ ಕಡಿಮೆ ಬೆಲೆಗೆ ಮಾರಾಟ

• ಉದಯವಾಹಿನಿ, ಬೆಂಗಳೂರು

ಕಸದ ಲಾರಿಗೆ ಸೇರಬೇಕಾದ ಅವಧಿ ಮುಗಿದ ಪದಾರ್ಥಗಳು ಜನರ ದೇಹ ಸೇರುತ್ತಿವೆ. ಇದ್ಯಾವುದರ ಅರಿವಿಲ್ಲದೇ ಜನ ಕಡಿಮೆ ಹಣಕ್ಕೆ ಸಿಗುತ್ತಿದೆ ಅಂತ ಮುಗಿಬಿದ್ದು ಖರೀದಿ ಮಾಡುತ್ತಿದ್ದಾರೆ.

ಮಾಲ್, ಮಾರ್ಟ್, ಬ್ಲಿಂಕಿಟ್, ಜೆಪ್ಟೋ ಇತರೆ ಅಂಗಡಿಗಳಲ್ಲಿ ಅವಧಿ ಮುಗಿದ ಪದಾರ್ಥಗಳನ್ನ ಕಸದ ಲಾರಿಗೆ ಎಸೆಯೋದಕ್ಕೆ ಕೊಟ್ಟರೆ, ಖದೀಮರು ಇದನ್ನೇ ಮಾರಾಟ ಮಾಡಿ ಕಿಸೆ ತುಂಬಿಸಿಕೊಳ್ಳುತ್ತಿದ್ದಾರೆ. ಕಸದ ಲಾರಿಗೆ ಹೋಗಬೇಕಿದ್ದ ಅವಧಿ ಮುಗಿದ, ಕೊಳೆತ ಪದಾರ್ಥಗಳನ್ನು ಜನರು ಅರಿವಿಲ್ಲದೇ ಕೊಂಡುಕೊಂಡಿದ್ದಾರೆ. ಡಿಮಾರ್ಟ್, ಮಾಲ್‌ಗಳಿಂದ ಅವಧಿ ಮುಗಿದ ಹಾಲು, ಮೊಸರು ಮಾರಾಟ ಮಾಡಲಾಗುತ್ತಿದೆ. ಇದನ್ನ ಖರೀದಿಸಲು ಜನ ಮುಗಿಬಿದ್ದಿದ್ದಾರೆ. 20 ರೂಪಾಯಿ ಹಾಲು, ಮೊಸರು ಪ್ಯಾಕೆಟ್‌ನ್ನು 10 ರೂಪಾಯಿಗೆ ಮಾರಾಟ ಮಾಡಲಾಗಿದೆ. ಕೆಎ 01, ಎಹೆಚ್ 2936 ವಾಹನದಲ್ಲಿ ವಿಲೇವಾರಿ ಪದಾರ್ಥಗಳನ್ನ ಕುಡ್ಲು ಗೇಟ್‌ನ ಡಿಮಾರ್ಟ್‌ನಿಂದ ಎಸೆಯೋದಕ್ಕೆ ತಂದ ವಾಹನವನ್ನು ದುರ್ಬಳಕೆ ಮಾಡಿಕೊಂಡು, ಅಫ್ಸರ್ ಎಂಬ ವ್ಯಾಪಾರಿ ತನ್ನ ಅಂಗಡಿಗೆ ತಂದು ಮಾರಾಟ ಮಾಡುತ್ತಿದ್ದಾನೆ. ನೀಲಸಂದ್ರದ ಅಶೋಕ ನಗರದಲ್ಲಿ ಅಫ್ಸರ್ ಎಂಬಾತ ತನ್ನ ಅಂಗಡಿಯೊಂದರಲ್ಲಿ ಮಾಲ್, ಮಾರ್ಟ್‌ನಿಂದ ಅವಧಿ ಮುಗಿದ ಬ್ರೆಡ್, ಬನ್, ಚಿಕನ್, ಪರೋಟ, ತರಕಾರಿ, ಹಣ್ಣುಗಳು, ಹಾಲು, ಮೊಸರು ತಂದು ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದ್ದಾನೆ. ಮಗುವಿಗೆ ಧರಿಸುವ ಪ್ಯಾಂಪರ್ಸ್ ಕೂಡ ಅವಧಿ ಮುಗಿದಿದೆ. ಅದನ್ನೇ ಮಾರಾಟ ಮಾಡಿ ಕಾಸು ಮಾಡಿದ್ದಾನೆ. ಮಾಲ್, ಮಾರ್ಟ್‌ಗಳ ಸಿಬ್ಬಂದಿ ಪರಿಚಯ ಮಾಡಿಕೊಂಡು ಅವಧಿ ಮುಗಿದ, ಕೊಳೆತ ಪದಾರ್ಥಗಳನ್ನು ತಂದು ಜನರಿಗೆ ತಿನ್ನಿಸಿ ಕಾಸು ಮಾಡುತ್ತಿದ್ದ ಈ ಆಸಾಮಿಯನ್ನು ಚಾಲಕರ ಒಕ್ಕೂಟದವರು ರೆಡ್‌ಹ್ಯಾಂಡ್ ಆಗಿ ಹಿಡಿದಿದ್ದಾರೆ.

# ಉದ್ಯೋಗ ಖಾತ್ರಿ ನಕಲಿ ಜಿಪಿಎಸ್ ಫೋಟೋ ತನಿಖೆಗೆ ಈಶ್ವರ ಖಂಡ್ರೆ ಸೂಚನೆ

• ಉದಯವಾಹಿನಿ, ಬೆಂಗಳೂರು

ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಕೂಲಿ ಕಾರ್ಮಿಕರ ನಕಲಿ ಜಿಪಿಎಸ್ ಫೋಟೋ ತೆಗೆದು ವಂಚಿಸಲಾಗುತ್ತಿದೆ ಎಂಬ ವರದಿ ಹಿನ್ನೆಲೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ ತನಿಖೆಗೆ ಆದೇಶ ನೀಡಿದ್ದಾರೆ.

ಇಲಾಖೆಯ ಕಾರ್ಯದರ್ಶಿಗಳಿಗೆ ಈ ಸಂಬಂಧ ಲಿಖಿತ ಸೂಚನೆ ನೀಡಿರುವ ಅವರು, ಕೊಪ್ಪಳ ಜಿಲ್ಲೆಯಲ್ಲಿ ಮೇಟಿಗಳು ಕಾಮಗಾರಿ ನಡೆಯುತ್ತಿರುವ ಸ್ಥಳಕ್ಕೆ ಕೆಲಸಗಾರರು ಹೋಗದಿದ್ದರೂ ವೀಡಿಯೋ ಚಿತ್ರೀಕರಣ ಮಾಡಿಸಿ ಆ ವೀಡಿಯೋ ಪ್ಲೇ ಆಗುತ್ತಿರುವಾಗ ಮತ್ತೊಂದು ಮೊಬೈಲ್‌ನಲ್ಲಿ ಜಿಪಿಎಸ್ ಫೋಟೋ ತೆಗೆಸಿ ವಂಚಿಸುತ್ತಿದ್ದಾರೆ ಎಂದು ಮಾಧ್ಯಮದಲ್ಲಿ ವರದಿಯಾಗಿದ್ದು, ಈ ಬಗ್ಗೆ ಜಂಟಿ ನಿರ್ದೇಶಕರ ದರ್ಜೆಯ ಅಧಿಕಾರಿಯಿಂದ ತನಿಖೆ ನಡೆಸಿ 4 ದಿನಗಳ ಒಳಗಾಗಿ ವರದಿ ಸಲ್ಲಿಸಲು ಸೂಚಿಸಿದ್ದಾರೆ.

ಈ ರೀತಿ ನಕಲಿ ಜಿಪಿಎಸ್ ಫೋಟೋ ತೆಗೆದು ಪ್ರತಿನಿತ್ಯ 20-30 ಸಾವಿರ ರೂ. ವಂಚನೆ ಮಾಡುತ್ತಿದ್ದಾರೆ, ಕೆಲಸ ಮಾಡದೆಯೇ ಹಾಜರಾತಿ ಹಾಕಿಸುತ್ತಿದ್ದಾರೆ ಎಂದು ಮಾಧ್ಯಮದಲ್ಲಿ ವರದಿಯಾಗಿತ್ತು. ಇದನ್ನು ಗಂಭೀರವಾಗಿ ಪರಿಗಣಿಸಿರುವ ಈಶ್ವರ ಖಂಡ್ರೆ, ವರದಿಯಲ್ಲಿ ಅಂಶ


ಉದಯವಾಹಿನಿ ಚಿತ್ರ

ಸತ್ಯವಾಗಿದ್ದಲ್ಲಿ, ತಪ್ಪಿತಸ್ಥರ ವಿರುದ್ಧ ಕೈಗೊಳ್ಳಬೇಕಾದ ಶಿಫಾರಸಿನೊಂದಿಗೆ ವಾಸ್ತವಾಂಶದ ವರದಿಯನ್ನು ಸಲ್ಲಿಸುವಂತೆ ಮತ್ತು ಈ ರೀತಿ ತಂತ್ರಜ್ಞಾನವನ್ನೇ ವಂಚಿಸಿ ಹಾಜರಾತಿ ಹಾಕದಂತೆ ತಡೆಯಲು ಏನು ಕ್ರಮ ಕೈಗೊಳ್ಳಬಹುದು ಎಂಬ ಬಗ್ಗೆ ತಜ್ಞರೊಂದಿಗೆ ಸಮಾಲೋಚಿಸಿ ಉಪಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿದ್ದಾರೆ. ಯಂತ್ರಗಳ ಮೂಲಕ ಕಾಮಗಾರಿ ನಡೆಸಿ, ಕೂಲಿ ಕಾರ್ಮಿಕರ ಅಕ್ರಮ ಹಾಜರಾತಿ ಹಾಕಿಸುವುದನ್ನು ತಪ್ಪಿಸಲು ವಿಬಿಜಿ ರಾಮ್ ಜಿಯಡಿ ಕೂಲಿಗೆ ಬರುವವರು ಕಾಮಗಾರಿ ನಡೆಯುವ ಸ್ಥಳದಲ್ಲಿ ಕೆಲಸ ಮಾಡುತ್ತಿರುವ ಜಿಪಿಎಸ್ ಫೋಟೋ ತೆಗೆದು ಎನ್‌ಎಂಎಂಎಸ್ ಆ್ಯಪ್‌ನಲ್ಲಿ ಅಪ್ಲೋಡ್ ಮಾಡುವುದನ್ನು ಕಡ್ಡಾಯ ಮಾಡಲಾಗಿದೆ. ಆದರೆ ಕೆಲವರು ಈ ತಂತ್ರಜ್ಞಾನಕ್ಕೆ ಸವಾಲು ಹಾಕಿದ್ದು, ಸರ್ಕಾರ ಈ ಬಗ್ಗೆ ಕ್ರಮಕ್ಕೆ ಮುಂದಾಗಿದೆ.

# ಪ್ರಯಾಣಿಕರ ಪರದಾಟ, ಬಿಎಂಟಿಸಿ ಹಾಗೂ ಬಿಬಿಎಂಪಿ ವಿರುದ್ಧ ಸಾರ್ವಜನಿಕರ ಆಕ್ರೋಶ

• ಉದಯವಾಹಿನಿ, ಕೆಂಗೇರಿ


ಉದಯವಾಹಿನಿ ಚಿತ್ರ

ರಾಜಧಾನಿಯ ಪ್ರಮುಖ ಸಾರಿಗೆ ಸಂಪರ್ಕ ಕೊಂಡಿಯಾಗಿರುವ ಕೆಂಗೇರಿ ಉಪನಗರ ಬಿಎಂಟಿಸಿ ಬಸ್ ನಿಲ್ದಾಣದ ಆವರಣ ಸಂಪೂರ್ಣವಾಗಿ ಹದಗೆಟ್ಟಿದ್ದು, ಪ್ರಯಾಣಿಕರು ಮತ್ತು ಚಾಲಕರು ನಿತ್ಯ ನರಕಯಾತನೆ ಅನುಭವಿಸುತ್ತಿದ್ದಾರೆ. ಮಳೆಯಾಗುತ್ತಿದ್ದಂತೆ ಬಸ್ ನಿಲ್ದಾಣದ ಪ್ರಮುಖ ರಸ್ತೆ ಹಾಗೂ ಆವರಣದಲ್ಲೆಲ್ಲಾ ಮಳೆನೀರು ನಿಂತು ದೊಡ್ಡ ಕೆರೆಯಂತಾಗುತ್ತಿದ್ದು, ರಸ್ತೆಯ ತುಂಬಾ ಬೃಹತ್ ಗಾತ್ರದ ಗುಂಡಿಗಳು ಬಿದ್ದಿವೆ. ನಿಲ್ದಾಣದಲ್ಲಿ ರಸ್ತೆ ಡಾಂಬರೀಕರಣ ಸಂಪೂರ್ಣವಾಗಿ ಕಿತ್ತುಹೋಗಿದ್ದು, ಮೆಟ್ರೋ ಹಾಗೂ ಪ್ರಮುಖ ಮಾರ್ಗಗಳಿಗೆ ತೆರಳುವ ಸಾವಿರಾರು ಪ್ರಯಾಣಿಕರು ಕೆಸರು ನೀರಿನಲ್ಲೇ ಸಂಚರಿಸಬೇಕಾದ ದುಸ್ಥಿತಿ ನಿರ್ಮಾಣವಾಗಿದೆ. **ಪ್ರಮುಖ ಸಮಸ್ಯೆಗಳು:** ನೀರು ನಿಲ್ಲುವ ಸಮಸ್ಯೆ ಸರಿಯಾದ ಒಳಚರಂಡಿ ವ್ಯವಸ್ಥೆ ಇಲ್ಲದಿರುವುದರಿಂದ ಸಣ್ಣ ಮಳೆ ಬಂದರೂ ಬಸ್ ನಿಲ್ದಾಣದ ಆವರಣದಲ್ಲೇ ಕಲುಷಿತ ನೀರು ನಿಲ್ಲುತ್ತಿದೆ.

**ಅಪಾಯಕಾರಿ ಗುಂಡಿಗಳು:** ಬಸ್‌ಗಳು ನಿಲ್ಲುವ ಮತ್ತು ತಿರುಗುವ ಜಾಗದಲ್ಲೇ ದೊಡ್ಡ ಗುಂಡಿಗಳಿದ್ದು, ಬಸ್ ಇಳಿಯುವಾಗ ಹಾಗೂ ಹತ್ತುವಾಗ ಪ್ರಯಾಣಿಕರು ಜಾರಿ ಬೀಳುವ ಭೀತಿ ಎದುರಾಗಿದೆ. **ಚಾಲಕರಿಗೂ ಸಂಕಷ್ಟ:** ಹೊಂಡ-ಗುಂಡಿಗಳಿಂದಾಗಿ ಬಿಎಂಟಿಸಿ ಬಸ್‌ಗಳ ಬಿಡಿಭಾಗಗಳು ಹಾಳಾಗುತ್ತಿದ್ದು, ಚಾಲಕರು ವಾಹನ ಚಾಲನೆ ಮಾಡಲು ಹರಸಾಹಸ ಪಡುತ್ತಿದ್ದಾರೆ. ಸ್ಥಳೀಯರ ಮನವಿ: ಪ್ರತಿದಿನ ಸಾವಿರಾರು ವಿದ್ಯಾರ್ಥಿಗಳು, ಉದ್ಯೋಗಿಗಳು ಈ ಬಸ್ ನಿಲ್ದಾಣವನ್ನು ಬಳಸುತ್ತಾರೆ. ಆದರೂ ಬಿಎಂಟಿಸಿ ಮತ್ತು ಸ್ಥಳೀಯ ಸಂಸ್ಥೆಗಳು ರಸ್ತೆ ದುರಸ್ತಿಗೆ ಮುಂದಾಗದಿರುವುದು ಖಂಡನೀಯ. ತಕ್ಷಣವೇ ಈ ಗುಂಡಿಗಳನ್ನು ಮುಚ್ಚಿ, ಡಾಂಬರೀಕರಣ ಮಾಡಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

# ನಕ್ಸಲ್ ಅಂದ್ರೆ ದೇಶಪ್ರೇಮಿಗಳು, ಸಮಾನತೆಗಾಗಿ ಹೋರಾಟ

• ಉದಯವಾಹಿನಿ, ಬೆಂಗಳೂರು

ನಕ್ಸಲ್ ಅಂದ್ರೆ ದೇಶಪ್ರೇಮಿಗಳು, ಸಮಾನತೆಗಾಗಿ ಹೋರಾಟ ಮಾಡ್ತಿರೋರು ಎಂದು ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಗೋಪಾಲಗೌಡ ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ. ನಕ್ಸಲೀಯರು ಅಂದರೆ ಯಾರು?, ಅವರೆಲ್ಲಾ ಸಾಹಿತಿಗಳು, ಡಾಕ್ಟರ್‌ಗಳು. ಜೆನ್ ಝೀ ಹೋರಾಟದಿಂದ ಭಯ ಬಂದಿದೆಯಲ್ಲಾ, ಅವರನ್ನೆಲ್ಲಾ ನಕ್ಸಲ್ ಅಂತೀರಿ ಎಂದು ಅವರು ಹೇಳಿದ್ದಾರೆ. ಚುನಾವಣಾ ಆಯೋಗದ ವಿರುದ್ಧವೂ ಗೋಪಾಲಗೌಡ ಇದೇ ವೇಳೆ ವಾಗ್ದಾಳಿ ನಡೆಸಿದ್ದಾರೆ. ತಾನೊಬ್ಬ ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ. ನನಗೂ ಚುನಾವಣಾ ಆಯೋಗ ನೊಟೀಸ್ ಕೊಟ್ಟಿದೆ. ಹೆಸರಿನ ಮುಂದೆ ನ್ಯಾ. ಹೇಗೆ ಬಂತು ಎಂದು ಸಂವಿಧಾನಬದ್ಧ ಹುದ್ದೆಯಲ್ಲಿ ಇದ್ದವನಿಗೆ ನೊಟೀಸ್ ಕೊಟ್ಟಿದ್ದಾರೆ. ಮುಖ್ಯ ಚುನಾವಣಾ ಆಯುಕ್ತನನ್ನು ಕೇವಲ ರಾಜೀನಾಮೆ ಕೊಡಿಸುವುದಲ್ಲ. ಸಂವಿಧಾನದ ಕಗ್ಗೊಲೆ ಮಾಡಿದ ಆತನನ್ನು ಜೈಲಿಗೆ ಹಾಕಬೇಕು. ಇಬ್ಬರು ಚುನಾವಣಾ ಆಯುಕ್ತರು 10 ತಿಂಗಳಲ್ಲಿ 14 ಸಲ ಆಕ್ಷೇಪಣೆ ಸಲ್ಲಿಸಿದ್ದರು. ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಒಬ್ಬ ಫ್ರಾಡ್, ಫ್ರಾಡೆಸ್ಟ್. ಹೊಸದಾಗಿ ಮತದಾರರ ಪಟ್ಟಿಯಲ್ಲಿ ಸೇರಲು ಅನಗತ್ಯ ಅಂಶ ಸೇರಿಸಲಾಗಿದೆ. ಆ ಮೂಲಕ ಹೊಸದಾಗಿ ಮತಪಟ್ಟಿಗೆ ಸೇರಲು ಸಾಧ್ಯವಾಗದಂತೆ ಮಾಡಿದ್ದಾರೆ.

# ಸರ್ಕಾರಿ ಶಾಲೆ ಮುಚ್ಚಲು ಸಂಚು: ಆರೋಪ

• ಉದಯವಾಹಿನಿ, ಬೆಂಗಳೂರು

ಸರ್ಕಾರಿ ಶಾಲೆಗಳನ್ನು ಮುಚ್ಚಲು ರಾಜ್ಯ ಸರ್ಕಾರವು ಹೊಸ ಸಂಚು ಹೂಡಿದೆ ಎಂದು ಆರೋಪಿಸಿರುವ ಸಾಹಿತಿಗಳು, ಸರ್ಕಾರದ ನಡೆಯನ್ನು ಖಂಡಿಸಿದ್ದಾರೆ. ಯಾವುದೇ ಸರ್ಕಾರಿ ಶಾಲೆಯನ್ನು ಮುಚ್ಚುವುದಿಲ್ಲ ಎಂದು ಸರ್ಕಾರದ ಪ್ರತಿನಿಧಿಗಳು ಭರವಸೆ ನೀಡುತ್ತಲೇ ಕಡಿಮೆ ದಾಖಲಾತಿ ಇರುವ ಶಾಲೆಯ ಮಕ್ಕಳನ್ನು ಕೆಪಿಎಸ್ ಶಾಲೆಗಳಿಗೆ ವರ್ಗಾವಣೆ ಮಾಡಲಾಗುವುದು ಎಂದೂ ಹೇಳಿದ್ದಾರೆ. ಬಡ, ರೈತ, ಕೂಲಿಕಾರರ ಮತ್ತು ಶೋಷಿತ ವರ್ಗಗಳ ಮಕ್ಕಳ ಶಿಕ್ಷಣದ ಹಕ್ಕನ್ನು ಕಸಿದುಕೊಳ್ಳುವ ಸರ್ಕಾರದ ಜನವಿರೋಧಿ ಧೋರಣೆಯಿದು ಎಂದು ಆರೋಪಿಸಿದ್ದಾರೆ. ಕೆಪಿಎಸ್ ಶಾಲೆಗಳ ಆರಂಭವನ್ನು ನೆಪ ಮಾಡಿಕೊಂಡು ನೆರೆಹೊರೆಯ ಶಾಲೆಗಳನ್ನು


ಉದಯವಾಹಿನಿ ಚಿತ್ರ

ದುರ್ಬಲಗೊಳಿಸಬಾರದು ಎಂದು ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಯ ರಾಜ್ಯ ಘಟಕದ ಅಧ್ಯಕ್ಷ ಎ.ಮುರಿಗೆಪ್ಪ, ಸಾಹಿತಿಗಳಾದ ಕೆ.ಮರುಳಸಿದ್ದಪ್ಪ, ಎಸ್.ಜಿ.ಸಿದ್ದರಾಮಯ್ಯ ಸೇರಿ ಹಲವರು ಆಗ್ರಹಿಸಿದ್ದಾರೆ.

# ಸೌಜನ್ಯ ಕೇಸ್: SITಯಿಂದ ನನ್ನ ಕೈಬಿಡಿ ಅಂತ ಎಎಸ್‌ಪಿ ಪತ್ರ

• ಉದಯವಾಹಿನಿ, ಬೆಂಗಳೂರು

ಸೌಜನ್ಯ ಕೊಲೆ ಪ್ರಕರಣದ ಮರುತನಿಖೆಗೂ ಮುನ್ನ ಹಿನ್ನಡೆಯಾಗಿದೆ. ಪ್ರಕರಣದ ತನಿಖೆಗೆ ರಚನೆಯಾದ ಎಸ್‌ಐಟಿ ತಂಡದಿಂದ ನನ್ನ ಹೆಸರು ಕೈಬಿಡುವಂತೆ ಎಎಸ್‌ಪಿ ವೆಂಕಟೇಶ್ ಪ್ರಸನ್ನ ಪತ್ರ ಬರೆದಿದ್ದಾರೆ. ಸೌಜನ್ಯ ಪ್ರಕರಣ ಮರುತನಿಖೆಗೆ ಎಸ್‌ಐಟಿ ನೇಮಕ ಮಾಡಲಾಗಿದೆ. ಎಸ್‌ಐಟಿ ತಂಡಕ್ಕೆ ಮತ್ತಷ್ಟು ಅಧಿಕಾರಿ, ಸಿಬ್ಬಂದಿ ನಿಯೋಜಿಸಲಾಗಿದೆ. ತನಿಖಾ ಸಹಾಯಕರಾಗಿ 16 ಮಂದಿ ನೇಮಕಗೊಂಡಿದ್ದಾರೆ. ಮಂಗಳೂರು ನಗರ ಸಿಸಿಬಿ ಎಸಿಪಿ ಮನೋಜ್ ಕುಮಾರ್ ನಾಯಕ್, ಬೆಂಗಳೂರು ಸಿಸಿಬಿ ಎಸಿಪಿ ರಾಮಚಂದ್ರ.ಬಿ, ಐಡಿ ಇನ್ಸ್‌ಪೆಕ್ಟರ್ ದೀಪಕ್, ಇನ್ಸ್‌ಪೆಕ್ಟರ್ ಮೋಹನ್ ಡಿ ಪಾಟೀಲ್, ಮಡಿವಾಳ ಸಂಚಾರ ಠಾಣೆಯ ಇನ್ಸ್‌ಪೆಕ್ಟರ್ ಈಶ್ವರಿ, ಕೋಣಾಜೆ ಠಾಣೆಯ ಪಿಎಸ್‌ಐ ಪುನೀತ್ ಗಾವಂಕರ್, ದಕ್ಷಿಣ ಸಂಚಾರಿ ಠಾಣೆಯ ಪಿಎಸ್‌ಐ ಪ್ರದೀಪ್, ಕಂಕನಾಡಿ ಠಾಣೆಯ ಪಿಎಸ್‌ಐ ಅನಿತಾ ನಿಕಂ ಸೇರಿದಂತೆ 16 ಸಿಬ್ಬಂದಿ ನೇಮಕವಾಗಿದೆ. ಸೌಜನ್ಯ ಪ್ರಕರಣದ ಮರುತನಿಖೆಗೆ ಎಸ್‌ಐಟಿ ರಚಿಸಲು ಸುಪ್ರೀಂ ಕೋರ್ಟ್ ಆದೇಶಿಸಿತ್ತು. ಸುಪ್ರೀಂ ಆದೇಶದ ಬಳಿಕ ಸರ್ಕಾರ ಎಸ್‌ಐಟಿ ರಚಿಸಿದೆ. ಐಜಿಪಿ ಎನ್.ಶಶಿಕುಮಾರ್ ನೇತೃತ್ವದಲ್ಲಿ ಎಸ್‌ಐಟಿ ರಚನೆಯಾಗಿದೆ.


ಉದಯವಾಹಿನಿ ಚಿತ್ರ

ಐಪಿಎಸ್ ಅಧಿಕಾರಿಗಳಾದ ಸಿ.ಹೆಚ್.ಸುಧೀರ್ ಕುಮಾರ್ ರೆಡ್ಡಿ, ನಿಶಾ ಜೇಮ್ಸ್, ಲೋಕೇಶ್ ಜಗಲಸಾರ್ ಹಾಗೂ ಎಎಸ್‌ಪಿ ವೆಂಕಟೇಶ್ ಪ್ರಸನ್ನ ಅವರನ್ನೊಳಗೊಂಡ ಎಸ್‌ಐಟಿ ರಚಿಸಲಾಗಿದೆ.

# ರಂಗನಾಥ್ ಪರ ಬಿಜೆಪಿ-ಜೆಡಿಎಸ್ ಪ್ರಚಾರ

• ಉದಯವಾಹಿನಿ, ದೊಡ್ಡಬಳ್ಳಾಪುರ

ಬೆಂಗಳೂರು ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆಯಲ್ಲಿ ಜೆಡಿಎಸ್, ಬಿಜೆಪಿ ಮೈತ್ರಿ ಕೂಟದ ಅಭ್ಯರ್ಥಿ ಎ.ಪಿ.ರಂಗನಾಥ್ ಅವರ ಗೆಲುವಿಗಾಗಿ ಎರಡೂ ಪಕ್ಷದ ಮುಖಂಡರು ಒಗ್ಗೂಡಿ ಕೆಲಸ ಮಾಡಲಿದ್ದಾರೆ' ಎಂದು ಶಾಸಕ ಧೀರಜ್ ಮುನಿರಾಜು ಹೇಳಿದರು. ನಗರದ ಅರ್ಕಾವತಿ ಬಡಾವಣೆಯಲ್ಲಿನ ಶಾಸಕ ಗೃಹ ಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 'ರಂಗನಾಥ್ ಅವರು ಮೂರನೇ ಬಾರಿಗೆ ಚುನಾವಣೆಗೆ ಸ್ಪರ್ಧಿಸುತ್ತಿದ್ದಾರೆ. ಈ ಹಿಂದೆ ಸೋತಿದ್ದರೂ ಶಿಕ್ಷಕರ ಪರವಾಗಿ ನಿರಂತರವಾಗಿ ಕೆಲಸ ಮಾಡಿದ್ದಾರೆ. ದೊಡ್ಡಬಳ್ಳಾಪುರ ಕ್ಷೇತ್ರದಲ್ಲಿ 750 ಶಿಕ್ಷಕ ಮತದಾರರಿದ್ದು, ಬಿಜೆಪಿ ನಗರ ಮತ್ತು ಗ್ರಾಮಾಂತರ ಮಂಡಲಗಳ ಕಾರ್ಯಕರ್ತರು ಹಾಗೂ ಜೆಡಿಎಸ್ ಮುಖಂಡರು ಚುನಾವಣೆ ಜವಾಬ್ದಾರಿ ವಹಿಸಿಕೊಂಡು ಕೆಲಸ ಮಾಡಲಿದ್ದಾರೆ' ಎಂದರು. 'ಶಿಕ್ಷಕರ ಪರವಾಗಿ ಹೋರಾಟ ನಡೆಸುತ್ತಿದ್ದು, ನನಗೆ ಶಕ್ತಿ ತುಂಬಲು ರಂಗನಾಥ್ ಅವರನ್ನು ಆಯ್ಕೆ ಮಾಡಬೇಕು. ಅ.23ರಂದು ನಡೆಯುವ ಚುನಾವಣೆಯಲ್ಲಿ ಎಲ್ಲಾ ಶಿಕ್ಷಕರು ತಪ್ಪದೇ ಮತದಾನ ಮಾಡುವ ಮೂಲಕ ಮತದಾನದ ಹಕ್ಕು ಚಲಾಯಿಸಬೇಕು' ಎಂದು ಮನವಿ ಮಾಡಿದರು.

# RTI ಕಾಯಿದೆ ಸಂಬಂಧಿತ ಮಾಹಿತಿಯನ್ನು ಡಿಜಿಟಲ್ ನಮೂನೆ ಜಾರಿ ಮಾಡುವಂತೆ ಹೈಕೋರ್ಟ್ ನಿರ್ದೇಶನ

## ಮಾಹಿತಿ ಹಕ್ಕು ಕಾಯಿದೆಯಡಿ ಸಾರ್ವಜನಿಕರು ಕೇಳಿದ ಮಾಹಿತಿಯನ್ನು ಒದಗಿಸದ ಅಧಿಕಾರಿಗಳ ವಿರುದ್ಧ ಕೈಗೊಂಡಿರುವ ಕ್ರಮಗಳ ಕುರಿತು ಮಾಹಿತಿ

• ಉದಯವಾಹಿನಿ, ಬೆಂಗಳೂರು

ರಾಜ್ಯದ ವಿವಿಧ ಇಲಾಖೆಗಳು ಮತ್ತು ಸಾರ್ವಜನಿಕ ಪ್ರಾಧಿಕಾರಗಳಲ್ಲಿ ಮಾಹಿತಿ ಹಕ್ಕು ಕಾಯ್ದೆ ಅನುಷ್ಠಾನಕ್ಕೆ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸುವುದು, ನಿರ್ವಹಿಸುವುದು ಬಹಿರಂಗಪಡಿಸುವುದಕ್ಕೆ ಏಕರೂಪದ ಡಿಜಿಟಲ್ ನಮೂನೆ ಜಾರಿ ಮಾಡುವಂತೆ ಹೈಕೋರ್ಟ್, ಕರ್ನಾಟಕ ಮಾಹಿತಿ ಆಯೋಗಕ್ಕೆ (ಕೆಐಸಿ) ನಿರ್ದೇಶನ ನೀಡಿದೆ. ಮಾಹಿತಿ ಹಕ್ಕು ಕಾಯಿದೆಯಡಿ ಸಾರ್ವಜನಿಕರು ಕೇಳಿದ ಮಾಹಿತಿಯನ್ನು ಒದಗಿಸದ ಅಧಿಕಾರಿಗಳ ವಿರುದ್ಧ ಕೈಗೊಂಡಿರುವ ಕ್ರಮಗಳ ಕುರಿತು ಮಾಹಿತಿ ಒದಗಿಸದ ಆಯೋಗದ ಕ್ರಮ ಪ್ರಶ್ನಿಸಿ ಬೆಂಗಳೂರಿನ ಎನ್. ರಮೇಶ್ ಬಾಬು ಎಂಬುವರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ನ್ಯಾಯಪೀಠ,

**1** ಎಲೆಕ್ಟ್ರಾನಿಕ್ ಸೂಚ್ಯಂಕ ರಚನೆ
**2** ಪ್ರಾಧಿಕಾರಗಳ ಬಹಿರಂಗಪಡಿಸುವಿಕೆ
**3** ಕಾಯ್ದೆಯ ಸೆಕ್ಷನ್ 25ರಡಿ ಅಗತ್ಯ


ಉದಯವಾಹಿನಿ ಚಿತ್ರ

ಈ ಆದೇಶ ನೀಡಿದ್ದು, ಅರ್ಜಿಯನ್ನು ಭಾಗಶಃ ಪುರಸ್ಕರಿಸಿ ಈ ನಿರ್ದೇಶನಗಳನ್ನು ನೀಡಿದೆ. ಅಲ್ಲದೇ, ಸಂಬಂಧಿಸಿದ ಮಾಹಿತಿಯನ್ನು ನಾಗರಿಕರಿಗೆ ಸುಲಭವಾಗಿ ಪಡೆಯುವಂತಾಗಬೇಕು. ಇದಕ್ಕಾಗಿ ಕೆಐಸಿ ತನ್ನ ಅಧಿಕೃತ ವೆಬ್‌ಸೈಟ್‌ನಲ್ಲಿ ಕೇಂದ್ರೀಕೃತ ಎಲೆಕ್ಟ್ರಾನಿಕ್ ಸೂಚ್ಯಂಕ ರಚನೆ ಮಾಡಬೇಕು. ಇದರಿಂದ ವಿವಿಧ ಇಲಾಖೆಗಳು ಮತ್ತು ಸಾರ್ವಜನಿಕ ಪ್ರಾಧಿಕಾರಗಳ RTI ಬಹಿರಂಗಪಡಿಸುವಿಕೆಗಳನ್ನು ಪ್ರತ್ಯೇಕ ವೆಬ್‌ಸೈಟ್‌ಗಳಲ್ಲಿ ಹುಡುಕುವ ಅಗತ್ಯ ಇರುವುದಿಲ್ಲ ಎಂದು ಪೀಠ ಹೇಳಿದೆ. ಏಕರೂಪದ ಸ್ವರೂಪದಲ್ಲಿ ವರ್ಷವಾರು ಸ್ವೀಕರಿಸಲಾದ, ವಿಲೇವಾರಿ ಮಾಡಿದ ಹಾಗೂ ತಿರಸ್ಕರಿಸಿದ RTI ಅರ್ಜಿಗಳ ವಿವರ, ಮೊದಲ ಮತ್ತು ಎರಡನೇ ಮೇಲ್ಮನವಿಗಳ ಮಾಹಿತಿ, ವಿಧಿಸಲಾದ ದಂಡದ ವಿವರ ಹಾಗೂ ಮಾಹಿತಿ ಒದಗಿಸಲು ವಿಫಲವಾದ ಅಥವಾ ನಿರಾಕರಿಸಿದ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ವಿರುದ್ಧ RTI ಕಾಯ್ದೆಯ ಸೆಕ್ಷನ್ 20ರಡಿ ಶಿಫಾರಸು ಮಾಡಲಾದ ಶಿಸ್ತು ಕ್ರಮಗಳ ಮಾಹಿತಿಯನ್ನು ಇದರಲ್ಲಿ ಒಳಗೊಂಡಿರಬೇಕು ಎಂದು ಪೀಠ ಹೇಳಿದೆ. ಬೆಂಗಳೂರಿನ ವಿಲ್ಸನ್ ಗಾರ್ಡನ್ ನಿವಾಸಿ ಎನ್. ರಮೇಶ್ ಬಾಬು ಎಂಬುವರು RTI ಕಾಯ್ದೆಯ ನಿಯಮಗಳನ್ನು ಉಲ್ಲಂಘಿಸಿದ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ವಿರುದ್ಧ ಕೈಗೊಂಡ ಕ್ರಮಗಳು, ವಿಧಿಸಲಾದ ದಂಡ, ವಸೂಲಿ ಮಾಡಿದ ಮೊತ್ತ ಹಾಗೂ ಶಿಸ್ತುಕ್ರಮದ ಶಿಫಾರಸುಗಳ ವಿವರಗಳನ್ನು ಒದಗಿಸುವಂತೆ ಕೋರಿ ಮಾಹಿತಿ ಕೋರಿದ್ದರು. ಆದರೆ, ಈ ಮಾಹಿತಿಯು ಕ್ರೋಢೀಕೃತ ರೂಪದಲ್ಲಿ ಲಭ್ಯವಿಲ್ಲ ಎಂಬ ಕಾರಣ ನೀಡಿ ಸಾರ್ವಜನಿಕ ಮಾಹಿತಿ ಅಧಿಕಾರಿ, ಪ್ರಥಮ ಮೇಲ್ಮನವಿ ಪ್ರಾಧಿಕಾರ ಹಾಗೂ ರಾಜ್ಯ ಮಾಹಿತಿ ಆಯೋಗವು ಮಾಹಿತಿಯನ್ನು ನೀಡಲು ನಿರಾಕರಿಸಿದ್ದವು. ಇದನ್ನು ಪ್ರಶ್ನಿಸಿ ರಮೇಶ್ ಬಾಬು ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು. ಪ್ರತಿ ಇಲಾಖೆಯು ತನ್ನ ವ್ಯಾಪ್ತಿಯಲ್ಲಿರುವ ಸಾರ್ವಜನಿಕ ಪ್ರಾಧಿಕಾರಗಳನ್ನು ಗುರುತಿಸಿ, RTI ಕಾಯ್ದೆಯ ಸೆಕ್ಷನ್ 25ರಡಿ ಅಗತ್ಯ ಮಾಹಿತಿಯನ್ನು ಸಂಗ್ರಹಿಸಬೇಕು. ದಾಖಲೆಗಳನ್ನು ನಿರಂತರವಾಗಿ ನವೀಕರಿಸುವ ಹೊಣೆಗಾರಿಕೆಯನ್ನು ನಿರ್ದಿಷ್ಟ ಅಧಿಕಾರಿಗೆ ವಹಿಸಬೇಕು.

### ಯಾವುದೇ ಮಾಹಿತಿಗೆ ವಿನಾಯಿತಿ ಸೃಷ್ಟಿಸುವ ಉದ್ದೇಶವೂ ಇರುವುದಿಲ್ಲ

ಈ ನಿರ್ದೇಶನಗಳು RTI ಯ್ದಿಯಡಿ ಬಹಿರಂಗಪಡಿಸುವಿಕೆಯಿಂದ ವಿನಾಯಿತಿ ಪಡೆದಿರುವ ಅಂಶಗಳಿಗೆ ಅನ್ವಯಿಸುವುದಿಲ್ಲ. ಅಲ್ಲದೇ, ಹೊಸದಾಗಿ ಯಾವುದೇ ಮಾಹಿತಿಗೆ ವಿನಾಯಿತಿ ಸೃಷ್ಟಿಸುವ ಉದ್ದೇಶವೂ ಇರುವುದಿಲ್ಲ ಎಂದು ಪೀಠ ತಿಳಿಸಿದೆ. ಅಲ್ಲದೇ, ಅರ್ಜಿದಾರರು ಕೋರಿರುವ ಮಾಹಿತಿಯನ್ನು ಅವರ ಬಳಿ ಇರುವ ದಾಖಲೆಗಳು ಹಾಗೂ ವಾರ್ಷಿಕ ವರದಿಗಳ ಆಧಾರದ ಮೇಲೆ ಪರಿಶೀಲಿಸಿ ಮುಂದಿನ 8 ವಾರಗಳ ಒಳಗಾಗಿ ಒದಗಿಸುವಂತೆ ಮಾಹಿತಿ ಆಯೋಗಕ್ಕೆ ನಿರ್ದೇಶಿಸಿತು.

# ಬೆಂಕಿ ಹಚ್ಚಿಕೊಂಡು ಪ್ರೇಮ ನಿರಾಕರಿಸಿದ ಯುವತಿಯ ತಬ್ಬಿಕೊಂಡ ಪಾಗಲ್!

• ಉದಯವಾಹಿನಿ, ಮೈಸೂರು

ಪ್ರೀತಿ ನಿರಾಕರಿಸಿದ ಯುವತಿ ಮೇಲೆ ಪೆಟ್ರೋಲ್ ಸುರಿದು, ಆಕೆಯನ್ನು ತಬ್ಬಿಕೊಂಡು ಬೆಂಕಿ ಹಚ್ಚಿಕೊಳ್ಳುವ ಮೂಲಕ ಯುವಕನೊಬ್ಬ ಆತ್ಮಹತ್ಯೆ ಮಾಡಿಕೊಳ್ಳಲು ಹಾಗೂ ಈ ಮೂಲಕ ಆಕೆಯನ್ನು ಕೊಲ್ಲಲು ಯತ್ನಿಸಿದ ಆಘಾತಕಾರಿ ಘಟನೆ ಮೈಸೂರಿನ ವಿಜಯನಗರ ಬಡಾವಣೆಯಲ್ಲಿ ನಡೆದಿದೆ. ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನ ಹಲಗೂರು ಗ್ರಾಮದ ಚಂದನ್ (27) ಈ ಕೃತ್ಯ ಎಸಗಿದ್ದು, ಈತನಿಗೆ ಶೇ. 80ರಷ್ಟು ಸುಟ್ಟ ಗಾಯಗಳಾಗಿದ್ದರೆ, ಈತನಿಂದ ತಪ್ಪಿಸಿಕೊಂಡ ಯುವತಿಗೂ ಶೇ. 20ರಷ್ಟು ಸುಟ್ಟ ಗಾಯಗಳಾಗಿವೆ.ತನ್ನ ಪ್ರೀತಿಯನ್ನು ಒಪ್ಪಿಕೊಳ್ಳುವಂತೆ ಒತ್ತಾಯಿಸುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ. ಚಂದನ್ ಆಕೆಯನ್ನು ತಡೆದು ನಿಲ್ಲಿಸಿ, ತನ್ನ ಪ್ರೀತಿಯನ್ನು ಒಪ್ಪಿಕೊಳ್ಳುವಂತೆ ಪಟ್ಟು ಹಿಡಿದಿದ್ದ ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ.

ಆಕೆ ನಿರಾಕರಿಸಿದಾಗ, ಆತ ಆಕೆಯ ಹಾಗೂ ತನ್ನ ಮೇಲೆ ಪೆಟ್ರೋಲ್ ಸುರಿದು, ಆಕೆಯನ್ನು ಬಿಗಿಯಾಗಿ ಹಿಡಿದುಕೊಂಡು ಇಬ್ಬರಿಗೂ ಬೆಂಕಿ ಹಚ್ಚಿಕೊಂಡಿದ್ದಾನೆ. ಯುವತಿ ತೀವ್ರ ಸುಟ್ಟಗಾಯಗಳಿಗೆ ಒಳಗಾಗಿದ್ದು, ಸದ್ಯ ಚಿಕಿತ್ಸೆ ಪಡೆಯುತ್ತಿದ್ದಾಳೆ. ಆರೋಪಿ ಚಂದನ್ ಗ್ರಾಮದವಳಾದ ಆಕೆ ಇಂಜಿನಿಯರಿಂಗ್ ಡಿಪ್ಲೊಮಾ ವ್ಯಾಸಂಗ ಮಾಡುತ್ತಿದ್ದು, ವಿದ್ಯಾಭ್ಯಾಸಕ್ಕಾಗಿ ವಿಜಯನಗರದ ಹಾಸ್ಟೆಲ್‌ನಲ್ಲಿ ಉಳಿದುಕೊಂಡಿದ್ದಳು. ಹಾಸ್ಟೆಲ್‌ನಿಂದ ಕಾಲೇಜಿಗೆ ಹೋಗುತ್ತಿದ್ದಾಗ ಚಂದನ್ ಆಕೆಯನ್ನು ಅಡ್ಡಗಟ್ಟಿದ್ದ ಎಂದು ತಿಳಿದುಬಂದಿದೆ.ಈ ಭಯಾನಕ ಘಟನೆಯು ವಿಡಿಯೋದಲ್ಲಿ ಸೆರೆಯಾಗಿದ್ದು, ದೃಶ್ಯಾವಳಿಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ. ಬೆಂಕಿಯ ಜ್ವಾಲೆಗಳು ಇಬ್ಬರನ್ನೂ ಆವರಿಸಿಕೊಳ್ಳುತ್ತಿದ್ದಂತೆಯೇ ಚಂದನ್ ಆಕೆಯನ್ನು ಹಿಡಿದುಕೊಂಡಿರುವುದನ್ನು ವಿಡಿಯೋದಲ್ಲಿ ಕಾಣಬಹುದು.

# ಜ್ಞಾನೇಶ್ ಕುಮಾರ್ ವಜಾಕ್ಕೆ ಕಾಂಗ್ರೆಸ್ ಆಗ್ರಹ

• ಉದಯವಾಹಿನಿ, ಚಿಕ್ಕಬಳ್ಳಾಪುರ

ಕೇಂದ್ರ, ಬಿಜೆಪಿ ಸರ್ಕಾರವು ಕೇಂದ್ರ, ಚುನಾವಣಾ ಆಯೋಗದ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರನ್ನು ಬಳಸಿಕೊಂಡು ಮತಗಳ್ಳತನಕ್ಕೆ ಮುಂದಾಗಿದೆ ಎಂದು ಆರೋಪಿಸಿ, ಅವರನ್ನು ಕೂಡಲೇ ವಜಾಗೊಳಿಸಿ ಬಂಧಿಸುವುದಲ್ಲದೆ ಗಡಿಪಾರು ಮಾಡಬೇಕು ಎಂದು ಒತ್ತಾಯಿಸಿ, ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಸೋಮವಾರ ನಗರದಲ್ಲಿ ಬೃಹತ್ ಪ್ರತಿಭಟನೆಯು ನಡೆಯಿತು. ಜಿಲ್ಲಾಧ್ಯಕ್ಷ ಕೇಶವ ರೆಡ್ಡಿ ಅವರ ನೇತೃತ್ವದಲ್ಲಿ ನೂರಾರು ಕಾಂಗ್ರೆಸ್ ಕಾರ್ಯಕರ್ತರು ಜಿಲ್ಲಾ ಕಾಂಗ್ರೆಸ್ ಕಚೇರಿಯಿಂದ ಮೆರವಣಿಗೆ ನಡೆಸಿ ಅಂಬೇಡ್ಕರ್ ವೃತ್ತದಲ್ಲಿ ಜಮಾಯಿಸಿದರು. ಈ ವೇಳೆ ಕೇಂದ್ರ, ಬಿಜೆಪಿ ಸರ್ಕಾರ ಹಾಗೂ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ನಂತರ ಮಾತನಾಡಿದ ಜಿಲ್ಲಾಧ್ಯಕ್ಷ ಕೇಶವ ರೆಡ್ಡಿ, ಕೇಂದ್ರ ಬಿಜೆಪಿ ಸರ್ಕಾರ ದೇಶದ ಜನರ ವಿಶ್ವಾಸ ಕಳೆದುಕೊಂಡಿದೆ. ಚುನಾವಣೆಯಲ್ಲಿ ಗೆಲ್ಲುವ ಉದ್ದೇಶದಿಂದ ಚುನಾವಣಾ ಆಯೋಗವನ್ನು ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂದು ಆರೋಪಿಸಿದರು. ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆ ಸೇರಿದಂತೆ ಚುನಾವಣಾ ಆಯೋಗದ ಕಾರ್ಯವೈಖರಿ ಕುರಿತು ಹಲವು ಆಕ್ಷೇಪಗಳು ವ್ಯಕ್ತವಾಗಿವೆ. ಈ ಹಿನ್ನೆಲೆಯಲ್ಲಿ ಆಯುಕ್ತ ಜ್ಞಾನೇಶ್ ಕುಮಾರ್ ಅವರನ್ನು ವಜಾಗೊಳಿಸಿ, ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಕಾಂಗ್ರೆಸ್ ಒತ್ತಾಯಿಸುತ್ತಿದೆ.

## ಮಿನಿ ನ್ಯೂಸ್

### ದೇವಾಲಯ ಪ್ರವೇಶಕ್ಕೆ ಪರಿಶಿಷ್ಟರಿಗೆ ನಿರ್ಬಂಧವಿಲ್ಲ: ಸುದರ್ಶನ ಯಾದವ್



ಉದಯವಾಹಿನಿ ಚಿತ್ರ

• ಉದಯವಾಹಿನಿ, ಚಿಂತಾಮಣಿ

ತಾಲ್ಲೂಕಿನ ಊಲವಾಡಿ ಗ್ರಾಮದ ವೇಣುಗೋಪಾಲಸ್ವಾಮಿ ದೇವಾಲಯಕ್ಕೆ ಪ್ರವೇಶಿಸಲು ಪರಿಶಿಷ್ಟರಿಗೆ ಯಾವುದೇ ನಿರ್ಬಂಧ ವಿಧಿಸಿಲ್ಲ ಎಂದು ತಹಶೀಲ್ದಾರ್ ಸುದರ್ಶನ ಯಾದವ್ ತಿಳಿಸಿದರು. ಊಲವಾಡಿಯ ವೇಣುಗೋಪಾಲಸ್ವಾಮಿ ದೇವಾಲಯಕ್ಕೆ ಪರಿಶಿಷ್ಟ ಜಾತಿಯವರಿಗೆ ಪ್ರವೇಶ ನೀಡುತ್ತಿಲ್ಲ ಎಂದು ಜಿಲ್ಲಾಧಿಕಾರಿ ಜಿ.ಪ್ರಭು ಅವರಿಗೆ ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್ ಪತ್ರದ ಮೂಲಕ ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ತಹಶೀಲ್ದಾರರು ಗ್ರಾಮಸ್ಥರ ಜೊತೆ ಸಭೆ ನಡೆಸಿದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ತಹಶೀಲ್ದಾರರು, ಗ್ರಾಮಸ್ಥರು ಮತ್ತು ಅರ್ಚಕರೊಂದಿಗೆ ಸಭೆ ನಡೆಸಲಾಗಿದೆ. ಯಾವುದೇ ಜನಾಂಗದವರ ಪ್ರವೇಶಕ್ಕೆ ಯಾವುದೇ ನಿರ್ಬಂಧ ಹೇರಿಲ್ಲ. ಕೆಲವರು ಬರುತ್ತಿದ್ದಾರೆ. ಕೆಲವರು ಅವರಾಗಿಯೇ ಹಳೆಯ ಸಂಪ್ರದಾಯದಂತೆ ಬರುತ್ತಿಲ್ಲ ಎಂದು ತಿಳಿಸಿದರು. ಗ್ರಾಮದಲ್ಲಿ ಎಲ್ಲರೂ ಸಾಮರಸ್ಯದಿಂದ ಶಾಂತಿಯುತವಾಗಿ ನಡೆದುಕೊಳ್ಳುತ್ತಿದ್ದಾರೆ. ಯಾವುದೇ ಭಿನ್ನಾಭಿಪ್ರಾಯಗಳಿಲ್ಲ. ಪೂರ್ವಿಕರು ಹೋಗುತ್ತಿಲ್ಲ ಎಂದು ಹಳೆಯ ಸಂಪ್ರದಾಯದಂತೆ ಕೆಲವರು ಅವರಾಗಿಯೇ ಬರುತ್ತಿಲ್ಲ. ಎಲ್ಲರೊಂದಿಗೂ ಸಭೆ ನಡೆಸಿ, ದೇವಸ್ಥಾನ ಪ್ರವೇಶಕ್ಕೆ ಎಲ್ಲರಿಗೂ ಅವಕಾಶವಿದೆ ಎಂದು ತಿಳಿವಳಿಕೆ ನೀಡಲಾಗಿದೆ. ವೈಯುಕ್ತಿಕವಾಗಿ ಕೆಲವರು ಪ್ರವೇಶ ಮಾಡುವುದಿಲ್ಲ, ಕೆಲವರು ಬರುವುದಾಗಿ ತಿಳಿಸಿದರು. ಇದುವರೆಗೂ ಗ್ರಾಮದಲ್ಲಿ ಶಾಂತಿಗೆ ಭಂಗ ತರುವ ಯಾವುದೇ ಪ್ರಕರಣಗಳು ನಡೆದಿಲ್ಲ. ಎಲ್ಲ ಸಮುದಾಯದವರು ಅನ್ಯೋನ್ಯವಾಗಿ ಬದುಕುತ್ತಿದ್ದಾರೆ ಎಂದು ತಹಶೀಲ್ದಾರ್ ತಿಳಿಸಿದರು.

# ದರ್ಶನ್ ಪುಟ್ಟಣ್ಣಯ್ಯ ಪದೇ ಪದೇ ಅಮೆರಿಕಕ್ಕೆ ತೆರಳುವ ಆರೋಪ

## ಶಾಸಕರ ಭೇಟಿಯಾಗಲು ಉಚಿತ ವೀಸಾಗೆ ಆಗ್ರಹಿಸಿ ಡಿಸಿಗೆ ಕ್ಷೇತ್ರದ ಜನರಿಂದ ಮನವಿ

• ಉದಯವಾಹಿನಿ, ಮಂಡ್ಯ



ಉದಯವಾಹಿನಿ ಚಿತ್ರ

ತೀವ್ರ ಬರಗಾಲದ ಪರಿಣಾಮ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಕೆರೆ-ಕಟ್ಟೆಗಳಲ್ಲಿ ನೀರಿಲ್ಲದೆ ಪರದಾಟ ನಡೆಸುತ್ತಿದ್ದಾರೆ. -ಇಂತಹ ಸಂದರ್ಭದಲ್ಲಿಯೂ ಜನ ಕಷ್ಟ ಆಲಿಸುವ ಬದಲು ಮೇಲುಕೋಟೆ ಕ್ಷೇತ್ರದ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅಮೆರಿಕಗೆ ತೆರಳಿದ್ದಾರೆ. ಹೀಗಾಗಿ ಶಾಸಕರನ್ನು ಭೇಟಿಯಾಗಲು ತೆರಳಬೇಕಿರುವ ಕಾರಣ ನಮಗೆ ಉಚಿತ ವೀಸಾ ಮಾಡಿಕೊಡಿ ಎಂದು ಜನರು ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿರುವ ಪ್ರಸಂಗ ನಡೆದಿದೆ. ಶಾಸಕರು ಪದೇ ಪದೇ ವಿದೇಶಕ್ಕೆ ಹೋಗುತ್ತಾರೆ. ಎಂಎಲ್ ಎ ಆದಾಗಿನಿಂದ 18 ಬಾರಿ ಅಮೆರಿಕಕ್ಕೆ ತೆರಳಿದ್ದಾರೆ ಎಂದೂ ದೂರಲಾಗಿದೆ. ಮೇಲುಕೋಟೆ ವಿಧಾನಸಭಾ ಕ್ಷೇತ್ರದ ಶಾಸಕ ದರ್ಶನ್ ಪುಟ್ಟಣ್ಣಯ್ಯ ವಿದೇಶದಲ್ಲಿರುವ ಕಾರಣ ಅವರನ್ನು ವಿದೇಶದಲ್ಲಿ ಭೇಟಿ ಯಾಗಲು ಅನುಕೂಲವಾಗುವಂತೆ ಕ್ಷೇತ್ರದ ಎಲ್ಲಾ ಜನರಿಗೆ ಉಚಿತ ವೀಸಾ ಮಾಡಿಕೊಡುವಂತೆ ಮನವಿ ಮಾಡುತ್ತೇವೆ. ದರ್ಶನ್ ಪುಟ್ಟಣ್ಣಯ್ಯರವರ ಕುಟುಂಬ ವಿದೇಶದಲ್ಲಿ ನೆಲೆಸಿರುವ ಹಿನ್ನೆಲೆಯಲ್ಲಿ ಅವರು ಹೆಚ್ಚಿನ ಸಮಯವನ್ನು ವಿದೇಶದಲ್ಲಿ ಕಳೆಯುತ್ತಿರುವುದರಿಂದ ಕ್ಷೇತ್ರದ ಜನರ ಸಮಸ್ಯೆ ಆಲಿಸಲು ಶಾಸಕರು ಇಲ್ಲದಂತಾಗಿದೆ. ಕ್ಷೇತ್ರಕ್ಕೆ ಬಂದಾಗ ನಾಲ್ಕೈದು ಹಳ್ಳಿಗೆ ತೆರಳಿ ಕಾಮಗಾರಿ ಗುದ್ದಲಿ ಪೂಜೆ ನಡೆಸಿ ಅದನ್ನೇ ವೈಭವೀಕರಿಸಿಕೊಂಡು ಕಾಲ ಕಳೆಯುತ್ತಿದ್ದಾರೆ.

1. ಜನರು ಜಿಲ್ಲಾಧಿಕಾರಿಗೆ ಮನವಿ
2. ವಿದೇಶದಲ್ಲಿರುವ ಕಾರಣ ಅವರನ್ನು ವಿದೇಶದಲ್ಲಿ ಭೇಟಿ
3. ಕಾಮಗಾರಿ ಗುದ್ದಲಿ ಪೂಜೆ

ಬರಗಾಲ ಎದುರಾಗಿ ರೈತರು ಸಂಕಷ್ಟ ಸ್ಥಿತಿಯಲ್ಲಿದ್ದಾರೆ. ಕೆರೆ ಕಟ್ಟೆಗಳಲ್ಲಿ ನೀರಿಲ್ಲ, ಜಾನುವಾರುಗಳು ಕುಡಿಯಲು ನೀರಿಲ್ಲದೆ ಪರಿತಪಿಸುತ್ತಿದೆ. ಹೇಮಾವತಿ ನಾಲೆಗಳಿಗೆ ನೀರು ಹರಿಸಿ ಕೆರೆ ಕಟ್ಟೆ ತುಂಬಿಸಲು ಒತ್ತಡ ಹಾಕಬೇಕಾದ ಶಾಸಕರು ನೀರೆಲ್ಲ ತಮಿಳುನಾಡಿಗೆ ಹರಿದು ಹೋಗುತ್ತಿದ್ದರೂ ಕಂಡು ಕಾಣದಂತಿದ್ದಾರೆ. ಸರ್ಕಾರ ಪಾಂಡವಪುರ ತಾಲ್ಲೂಕನ್ನು ಬರಪೀಡಿತ ಎಂದು ಘೋಷಿಸಲು ಮೀನಾ ಮೇಷ ಮಾಡಿದ್ದು, ಸರ್ಕಾರದ ವಿರುದ್ಧ ರೈತರು ಆಕ್ರೋಶ ವ್ಯಕ್ತಪಡಿಸಿದ್ದರಿಂದ ಎರಡನೇ ಪಟ್ಟಿಯಲ್ಲಿ ಬರಪೀಡಿತ ತಾಲ್ಲೂಕು ಎಂದು ಘೋಷಿಸಿರುವುದು ಶಾಸಕರ ವೈಫಲ್ಯತೆಯನ್ನು ತೋರ್ಪಡಿಸಿದೆ.

ವೃದ್ಧಾಪ್ಯ ವೇತನ ಸೇರಿದಂತೆ ಸಾಮಾಜಿಕ ಪಿಂಚಣಿ ಯೋಜನೆ ಫಲಾನುಭವಿಗಳು ಸರ್ಕಾರಿ ಕಚೇರಿಗೆ ಅಲೆದಾಡುತ್ತಿದ್ದಾರೆ. ವಿದ್ಯಾರ್ಥಿಗಳು ಜಾತಿ, ಆದಾಯ ಪ್ರಮಾಣ ಪತ್ರಕ್ಕೆ ವಾರಗಟ್ಟಲೆ ಕಾಯಬೇಕಿದೆ. ಹೀಗಿದ್ದರೂ ಜನಸಾಮಾನ್ಯರ ಸಂಕಷ್ಟವನ್ನು ಪರಿಹರಿಸಲು ಶಾಸಕರು ಮುಂದಾಗುತ್ತಿಲ್ಲ.

ಇವರ ತಂದೆ ಕೆ.ಎಸ್. ಪುಟ್ಟಣ್ಣಯ್ಯ ಬೀದಿಯಲ್ಲಿ ನಿಂತು ಹೋರಾಟ ಮಾಡಿದ್ದಾರೆ.

ಅದೇ ರೀತಿ ಸದನದಲ್ಲಿಯೂ ಜನರಿಗಾಗಿ ಧ್ವನಿ ಎತ್ತುತ್ತಿದ್ದರು. ಆದರೆ ಅವರ ಮಗ ದರ್ಶನ್ ಪಟ್ಟಣ್ಣಯ್ಯ ಏಕೆ ಕ್ಷೇತ್ರದ ಜನರನ್ನು ನಿರ್ಲಕ್ಷಿಸುತ್ತಿದ್ದಾರೆ ರೈತ ಸಂಘದ ಹೋರಾಟದಿಂದ ಶಾಸಕರಾದ ಇವರು ಇದೀಗ ರೈತರ ಕಷ್ಟಕ್ಕೆ ಸ್ಪಂದಿಸದಿರುವುದು ರೈತರಲ್ಲಿಯೂ ಅಸಮಾಧಾನ ಮೂಡಿಸಿದೆ. ಬರಗಾಲದ ಸಂಕಷ್ಟ ಪರಿಸ್ಥಿತಿಯಲ್ಲಿ ರೈತರ ಜೊತೆ ನಿಲ್ಲದ ಮೇಲೆ ಇಂತವರು ಏಕೆ ಶಾಸಕರಾಗಬೇಕು? ಎಂದು ಪ್ರಶ್ನಿಸಲಾಗಿದೆ.

### ಜಿಲ್ಲಾಧಿಕಾರಿಗಳಿಗೆ ವಿಶೇಷ ಮನವಿ

ಇದರೊಂದಿಗೆ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ವಿಚಿತ್ರ ಮನವಿ ಪತ್ರ ಸಲ್ಲಿಸಿದ್ದಾರೆ. ಕ್ಷೇತ್ರದಲ್ಲಿ ತೀವ್ರ ಬರಗಾಲವಿದೆ, ರೈತರು ಸಂಕಷ್ಟದಲ್ಲಿದ್ದಾರೆ.

ಕೆರೆ-ಕಟ್ಟೆಗಳಲ್ಲಿ ನೀರಿಲ್ಲ, ಹೇಮಾವತಿ ನೀರು ಹರಿಸುವಲ್ಲಿ ಶಾಸಕರು ಒತ್ತಡ ಹಾಕುತ್ತಿಲ್ಲ.ಕೆಆರ್‌ಎಸ್ ನೀರು ತಮಿಳುನಾಡಿಗೆ ಹರಿದರೂ ಮೌನವಹಿಸಿದ್ದಾರೆ. ರೈತರ ಕಷ್ಟವನ್ನೆ ಆಲಿಸುತ್ತಿಲ್ಲ, ಸದನದಲ್ಲೂ ಚರ್ಚೆ ಮಾಡಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

### ವಿದೇಶಕ್ಕೆ ಹೋಗಿ ನಾವು ಮನವಿ ಕೊಡುತ್ತೇವೆ!:

**ರೈತ ಪ್ರತಿನಿಧಿಯಾಗಿ ಶಾಸಕರಾಗಿರುವ ದರ್ಶನ್ ಪುಟ್ಟಣ್ಣಯ್ಯ ಅವರು ವಿಧಾನಸಭೆಯ ಕಲಾಪದಲ್ಲಿ ಭಾಗಿಯಾಗಿ, ಸಮರ್ಪಕ ಕಾರ್ಯನಿರ್ವಹಣೆ ಇಲ್ಲ ಎಂಬ ಆರೋಪಿಸಿದ್ದಾರೆ. ಪಾಂಡವಪುರ ತಾಲ್ಲೂಕು ಬರಪೀಡಿತ ಘೋಷಣೆ ವಿಳಂಬವಾಗಿದೆ. ರೈತ ಸಂಘದಿಂದ ಬಂದ ಶಾಸಕ ರೈತರ ಸಮಸ್ಯೆಗೆ ಸ್ಪಂದಿಸುತ್ತಿಲ್ಲ. ಬರಗಾಲದ ಸಂಧರ್ಭದಲ್ಲಿ ಪದೇ ಪದೇ ವಿದೇಶಕ್ಕೆ ಹೋಗುತ್ತಿದ್ದಾರೆ. ಇದರಿಂದ ಶಾಸಕರಿಗೆ ಮನವಿ ಕೊಡಲು, ಪ್ರಶ್ನೆ ಮಾಡಲು ಸಾಧ್ಯವಾಗುತ್ತಿಲ್ಲ.**

### ಹುಳ ಬಿದ್ದ ಪಡಿತರ ವಿತರಣೆ, ಆರೋಪ

• ಉದಯವಾಹಿನಿ, ಮಹದೇಶ್ವರ ಬೆಟ್ಟ

ಮಹದೇಶ್ವರ ಬೆಟ್ಟ ವ್ಯಾಪ್ತಿಯ ಗ್ರಾಮಗಳಿಗೆ ಸರ್ಕಾರದ ಅನ್ನಭಾಗ್ಯ ಯೋಜನೆಯಡಿ ಈಚೆಗೆ ವಿತರಿಸುವ ಪಡಿತರ ತೀರಾ ಕಳಪೆಯಾಗಿವೆ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.ಪಡಿತರ ಫಲಾನುಭವಿಗಳಿಗೆ ಮುಗ್ಗಲು ಹಿಡಿದಿರುವ ಹಾಗೂ ಹುಳು ಬಿದ್ದಿರುವ ಅಕ್ಕಿಯನ್ನು ವಿತರಣೆ ಮಾಡಲಾಗಿದ್ದು ಸೇವನೆಗೆ ಯೋಗ್ಯವಾಗಿಲ್ಲ. ಪಡಿತರ ವಿತರಕರನ್ನು ಪ್ರಶ್ನಿಸಿದರೆ ಅಧಿಕಾರಿಗಳತ್ತ ಬೊಟ್ಟುಮಾಡುತ್ತಿದ್ದಾರೆ ಎಂದು ಗ್ರಾಮಸ್ಥರು ದೂರಿದ್ದಾರೆ. 'ಈ ಬಾರಿ ತೀವ್ರ ಬರಗಾಲ ಆವರಿಸಿದ್ದು ಕೂಲಿ ಕೆಲಸ ಸಿಗದೆ ಸಂಕಷ್ಟಕ್ಕೆ ಸಿಲುಕಿದ್ದೇವೆ. ಇಂತಹ ಸ್ಥಿತಿಯಲ್ಲಿ ಕಳಪೆ ಪಡಿತರ ವಿತರಿಸಲಾಗಿದ್ದು, ಎಸೆಯಲಾಗದೆ, ಸೇವಿಸಲೂ ಸಾಧ್ಯವಾಗದೆ ದಿಕ್ಕು ತೋಚದಂ ತಾಗಿದೆ. ಪ್ರಾಣಿಗಳು ತಿನ್ನಲೂ ಪಡಿತರ ಯೋಗ್ಯವಾಗಿಲ್ಲ' ಎಂದು ಬೆಟ್ಟದ ನಿವಾಸಿ ಮಹದೇವಸ್ವಾಮಿ ಅಸಮಾಧಾನ ವ್ಯಕ್ತಪಡಿಸಿದರು. 'ಮುಗ್ಗುಲು ಬಿದ್ದ, ಹುಳ ಹಿಡಿದ ಅಕ್ಕಿಯನ್ನು ಪೂರೈಕೆ ಮಾಡಿರುವ ಬಗ್ಗೆ ವಿತರಕರನ್ನು ಪ್ರಶ್ನಿಸಿದರೆ ಗೋದಾಮಿನಿಂದ ವಿತರಿಸಿದ ಆಹಾರ ಧಾನ್ಯಗಳನ್ನು ವಿತರಿಸಿದ್ದೇವೆ. ಪಡಿತರ ಹಾಳಾಗಿದ್ದರೆ, ಬಳಲು ಯೋಗ್ಯವಾಗಿಲ್ಲದಿದ್ದರೆ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಅಧಿಕಾರಿಗಳನ್ನು ಪ್ರಶ್ನಿಸಿ ಎನ್ನುತ್ತಿದ್ದಾರೆ' ಎಂದು ಗ್ರಾಮಸ್ಥರು ಅಸಹಾಯಕತೆ ತೋಡಿಕೊಂಡಿದ್ದಾರೆ.'ಪಡಿತರದಲ್ಲಿ ಹುಳಗಳು ತುಂಬಿಕೊಂಡಿದ್ದು, ಸೇವಿಸಿದರೆ ಆರೋಗ್ಯ ಹದಗೆಡಲಿದೆ. ಸರ್ಕಾರದ ಪಡಿತರ ನಂಬಿಕೊಂಡಿದ್ದ ಬಡವರ ಹೊಟ್ಟೆಯ ಮೇಲೆ ಬರೆ ಎಳೆದಂತಾಗಿದೆ. ವೃದ್ಧರು, ಕಡುಬಡವರು ಹುಳ ಇರುವ ಪಡಿತರವನ್ನೇ ಅನಿವಾರ್ಯವಾಗಿ ಕೊಂಡೊಯ್ಯುತ್ತಿದ್ದು, ಆರೋಗ್ಯ ಹದಗೆಟ್ಟರೆ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಹೊಣೆ ಹೊರಬೇಕು.

# ತಾಲ್ಲೂಕು ಕಚೇರಿಯಿಂದ ಗ್ರಾಮ ಪಂಚಾಯಿತಿವರೆಗೆ ಭ್ರಷ್ಟಾಚಾರದ ಆರೋಪ

• ಉದಯವಾಹಿನಿ, ಕೆಜಿಎಫ್

ಕೆಜಿಎಫ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ತಾಲ್ಲೂಕು ಕಚೇರಿಯಿಂದ ಹಿಡಿದು ಗ್ರಾಮ ಪಂಚಾಯಿತಿವರೆಗೂ ವಿವಿಧ ಸರ್ಕಾರಿ ಕಚೇರಿಗಳಲ್ಲಿ ಅವ್ಯವಹಾರ ಹಾಗೂ ಭ್ರಷ್ಟಾಚಾರ ನಡೆಯುತ್ತಿದೆ ಎಂದು ದಲಿತ ಸಂಘರ್ಷ ಸಮಿತಿ ಮುಖಂಡರು ಆರೋಪಿಸಿದ್ದು, ಈ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ನಗರಸಭೆ ಮುಂಭಾಗದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ದಲಿತ ಸಂಘರ್ಷ ಸಮಿತಿ ತಾಲ್ಲೂಕು ಅಧ್ಯಕ್ಷ ರಾಮಪ್ಪ, ತಾಲ್ಲೂಕು ಕಚೇರಿ, ಗ್ರಾಮ ಪಂಚಾಯಿತಿ, ನಗರಸಭೆ ಸೇರಿದಂತೆ ವಿವಿಧ ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕರ ಕೆಲಸಗಳು ಹಣ ನೀಡಿದರೆ ಮಾತ್ರ ನಡೆಯುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಆರೋಪಿಸಿದರು. ಹಣ ನೀಡಿದರೆ ಒಬ್ಬರ ಜಮೀನನ್ನು ಮತ್ತೊಬ್ಬರ ಹೆಸರಿಗೆ ಖಾತೆ ಮಾಡಿಕೊಡುವಂತಹ ಘಟನೆಗಳು ನಡೆಯುತ್ತಿವೆ ಎಂಬ ಆರೋಪಗಳಿದ್ದು, ಬಡವರು ಹಾಗೂ ಸಾಮಾನ್ಯ ಜನರು ತಮ್ಮ ಕೆಲಸಗಳಿಗಾಗಿ ಕಚೇರಿಗಳಿಗೆ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಹೇಳಿದರು.ತಾಲ್ಲೂಕಿನಲ್ಲಿ ಇಂದಿಗೂ ಹಲವಾರು ಭೂರಹಿತ ದಲಿತ ಕುಟುಂಬಗಳು ಸ್ವಂತ ಜಮೀನು ಇಲ್ಲದೆ ಜೀವನ ನಡೆಸುತ್ತಿವೆ. ಸರ್ಕಾರದ ವ್ಯಾಪ್ತಿಯಲ್ಲಿರುವ ಜಮೀನುಗಳನ್ನು ಸಮರ್ಪಕವಾಗಿ ಗುರುತಿಸಿ, ಅರ್ಹ ಭೂರಹಿತ ದಲಿತ ಕುಟುಂಬಗಳಿಗೆ ನಿಯಮಾನುಸಾರ ಭೂಮಿ ಹಂಚಿಕೆ ಮಾಡಬೇಕು ಎಂದು ಅವರು ಒತ್ತಾಯಿಸಿದರು. ಸರ್ಕಾರಿ ಜಮೀನುಗಳ ಲಭ್ಯತೆ, ಹಂಚಿಕೆ ಹಾಗೂ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಬೇಕು. ಅರ್ಹ ಬಡ ಕುಟುಂಬಗಳಿಗೆ ಅನ್ಯಾಯವಾಗದಂತೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.



ಉದಯವಾಹಿನಿ ಚಿತ್ರ

# ಎರಡು ಬಣಗಳಾಗಿದ್ದ ಗ್ರಾಮ ಒಂದಾಯಿತು; ಮಠದ ಮಹೋತ್ಸವಕ್ಕೆ ಯುವಕರ ಒಗ್ಗಟ್ಟಿನ ಶ್ರಮ

• ಉದಯವಾಹಿನಿ, ಗುಂಡ್ಲುಪೇಟೆ

ತಾಲ್ಲೂಕಿನ ದೇಪಾಪುರ ಗ್ರಾಮದ ಶ್ರೀ ಗುರುಮಲ್ಲೇಶ್ವರ ದಾಸೋಹ ಮಠದ ಆರಾಧನಾ ಮಹೋತ್ಸವ ಹಾಗೂ ಮಠದ ಆವರಣದಲ್ಲಿ ನಿರ್ಮಿಸಿರುವ ನೂತನ ದಾಸೋಹ ಭವನದ ಉದ್ಘಾಟನಾ ಕಾರ್ಯಕ್ರಮಕ್ಕೆ ಭರದ ಸಿದ್ಧತೆಗಳು ನಡೆಯುತ್ತಿವೆ. ಅ.2ರ ಶುಕ್ರವಾರ ನಸುಕಿನಲ್ಲಿ ಕೊತ್ತಲವಾಡಿ ದಾಸೋಹ ಮಠಾಧ್ಯಕ್ಷ ಗುರುಸ್ವಾಮೀಜಿ ಅವರಿಂದ ಷಟ್‌ಸ್ಥಲ ಧ್ವಜಾರೋಹಣ ನಡೆಯಲಿದ್ದು, ದೇವನೂರು ಶ್ರೀ ಗುರು ಮಲ್ಲೇಶ್ವರ ತ್ರಿವಿಧ ದಾಸೋಹ ಮಹಾಸಂಸ್ಥಾನ ಮಠದ ಮಹಾಂತಸ್ವಾಮೀಜಿ ಅವರ ಪುಷ್ಪಾಂದೋಳಿಕೋತ್ಸವ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಸುತ್ತೂರು ಮಠಾಧ್ಯಕ್ಷ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸೋಮಹಳ್ಳಿ ವೀರಸಿಂಹಾಸನ ಶಿಲಾಮಠದ ಸಿದ್ದಮಲ್ಲಸ್ವಾಮೀಜಿ, ಪಡಗೂರು ಅಡವಿಮಠದ ಶಿವಲಿಂಗೇಂದ್ರಸ್ವಾಮೀಜಿ, ಹರವೆ ವಿರಕ್ತಮಠದ ಸರ್ಪಭೂಷಣಸ್ವಾಮೀಜಿ ಸೇರಿದಂತೆ ತಾಲೂಕಿನ ವಿವಿಧ ಮಠಾಧೀಶರು ಹಾಗೂ ಹರಗುರು ಚರಮೂರ್ತಿಗಳ ಸಮ್ಮುಖದಲ್ಲಿ ಕಾರ್ಯಕ್ರಮ ನಡೆಯಲಿದೆ. ಶಾಸಕ ಎಚ್.ಎಂ.ಗಣೇಶ್ ಪ್ರಸಾದ್, ಮಾಜಿ ಶಾಸಕ ಸಿ.ಎಸ್.ನಿರಂಜನಕುಮಾರ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದು, ಕಬ್ಬಹಳ್ಳಿ ಸರ್ಕಾರಿ ಪ್ರೌಢಶಾಲೆಯ ನಿವೃತ್ತ ಮುಖ್ಯಶಿಕ್ಷಕ ಸಿದ್ದರಾಜಪ್ಪ ಉಪನ್ಯಾಸ ನೀಡಲಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಮಸ್ಥರು ಪಾಲ್ಗೊಳ್ಳುವಂತೆ ಮಠಾಧ್ಯಕ್ಷ ಬಸವಣ್ಣ ಸ್ವಾಮೀಜಿ ಮನವಿ ಮಾಡಿದ್ದಾರೆ. ದೇವನೂರು ಮಠದ ಶಾಖಾಮಠವಾಗಿರುವ ದೇಪಾಪುರದ

ಶ್ರೀಗುರುಮಲ್ಲೇಶ್ವರ ದಾಸೋಹ ಮಠಕ್ಕೆ ಸುಮಾರು 25 ವರ್ಷಗಳ ವಿಶಿಷ್ಟ ಇತಿಹಾಸವಿದೆ. ಮಠಾಧ್ಯಕ್ಷ ಬಸವಣ್ಣ ಸ್ವಾಮೀಜಿ ಮಠಕ್ಕೆ ಆಗಮಿಸಿದ ಬಳಿಕ ಮನೆ ಮನೆಗೆ ತೆರಳಿ ಕಂತೆ ಭಿಕ್ಷೆ ಸಂಗ್ರಹಿಸಿ ದಾಸೋಹ ಆರಂಭಿಸಿದ್ದರು. ಶಾಲಾ ಮಕ್ಕಳಿಗೆ ಮಧ್ಯಾಹ್ನದ ಊಟದ ವ್ಯವಸ್ಥೆ ಇಲ್ಲದ ಸಂದರ್ಭದಲ್ಲಿ ಮಠದಲ್ಲೇ ಊಟ ನೀಡುವ ಸಂಪ್ರದಾಯ ಆರಂಭಿಸಿ ಮಕ್ಕಳ ಹಸಿವು ನೀಗಿಸುವ ಮೂಲಕ ಸುತ್ತಮುತ್ತಲಿನ ಗ್ರಾಮಸ್ಥರ ಮೆಚ್ಚುಗೆಗೆ ಪಾತ್ರರಾಗಿದ್ದರು.ಸರ್ಕಾರಿ ನೆರವಿನ ನಿರೀಕ್ಷೆಯಿಲ್ಲದೆ ಗ್ರಾಮಸ್ಥರ ಸಹಕಾರದೊಂದಿಗೆ ಆರಂಭವಾದ ಈ ದಾಸೋಹ ಕಾರ್ಯ ಇಂದು ದೊಡ್ಡ ಮಟ್ಟಕ್ಕೆ ಬೆಳೆದಿದೆ. ಸ್ವತಃ ನೇಗಿಲು ಹಿಡಿದು ಕೃಷಿ ಮಾಡುವ ಸ್ವಾಮೀಜಿ ನೈಸರ್ಗಿಕ ಕೃಷಿ ಹಾಗೂ ಗೋಶಾಲೆ ನಡೆಸುವ ಮೂಲಕ ರೈತರಿಗೆ ಮಾದರಿಯಾಗಿದ್ದಾರೆ. ಮಠದಲ್ಲಿ ಸಿದ್ಧಪಡಿಸುವ ವಿಭೂತಿಗೂ ರಾಜ್ಯದಾದ್ಯಂತ ಬೇಡಿಕೆಯಿದೆ.

### ಮಠದ ಕಾರ್ಯಕ್ರಮಕ್ಕೆ ಒಂದಾದ ಗ್ರಾಮ

**ಮಠ ಆರಂಭವಾದಾಗಿನಿಂದ ಸಣ್ಣ ಕಾರಣಕ್ಕೆ ಎರಡು ಬಣಗಳಾಗಿ ವಿಭಜನೆಯಾಗಿದ್ದ ಗ್ರಾಮ ಇದೀಗ ಆರಾಧನಾ ಮಹೋತ್ಸವ ಹಾಗೂ ನೂತನ ದಾಸೋಹ ಭವನದ ಲೋಕಾರ್ಪಣೆ ಹಿನ್ನೆಲೆಯಲ್ಲಿ ಒಂದಾಗಿದೆ. ಗ್ರಾಮದ ಯುವಕರು ಎರಡೂ ಬಣಗಳ ಹಿರಿಕಿರಿಯರನ್ನು ಮನವೊಲಿಸಿ ಒಗ್ಗೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಯುವಕರು ಕಂಕಣಬದ್ಧರಾಗಿ ಶ್ರಮಿಸುತ್ತಿದ್ದು, ಗ್ರಾಮದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿದೆ. ಬೇರೆ ಊರುಗಳಲ್ಲಿ ನೆಲೆಸಿರುವ ಬಂಧು-ಬಳಗದವರನ್ನೂ ಆಹ್ವಾನಿಸಿ ಆರಾಧನಾ ಮಹೋತ್ಸವವನ್ನು ಸಡಗರ ಸಂಭ್ರಮದಿಂದ ಆಚರಿಸಲು ಗ್ರಾಮಸ್ಥರು ಸಿದ್ಧತೆ ನಡೆಸಿದ್ದಾರೆ.**

ಉದಯವಾಹಿನಿ ಚಿತ್ರ



# ಬೇತಮಂಗಲದಲ್ಲಿ ಪರಿಶಿಷ್ಟರ ಕುಂದುಕೊರತೆ ಸಭೆ

• ಉದಯವಾಹಿನಿ, ಬೇತಮಂಗಲ

ಪೊಲೀಸ್ ಇಲಾಖೆ, ಕಂದಾಯ, ಅಬಕಾರಿ ಹಾಗೂ ಗ್ರಾಮ ಪಂಚಾಯಿತಿ ಸಂಯುಕ್ತಾಶ್ರಯದಲ್ಲಿ ಪೊಲೀಸ್ ಸರ್ಕಲ್ ಇನ್‌ಸ್ಪೆಕ್ಟರ್ ಕಚೇರಿ ಆವರಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಕುಂದುಕೊರತೆ ಸಭೆ ನಡೆಯಿತು. ಈ ವೇಳೆ ಸರ್ಕಲ್ ಇನ್‌ಸ್ಪೆಕ್ಟರ್ ಎಸ್.ಆರ್.ಜಗದೀಶ್, 'ಪರಿಶಿಷ್ಟ ಜಾತಿ ಮತ್ತು ಪಂಗಡದವರು ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ಬಳಸಿಕೊಂಡು ಆರ್ಥಿಕ ಹಾಗೂ ಶೈಕ್ಷಣಿಕವಾಗಿ ಸದೃಢರಾಗಬೇಕು' ಎಂದು ತಿಳಿಸಿದರು.

ಗ್ರಾಮೀಣ ಭಾಗಗಳಲ್ಲಿ ಮದ್ಯ ಮಾರಾಟದಿಂದಾಗಿ ಸಣ್ಣ ವಯಸ್ಸಿನವರು ದುಷ್ಟಗಳಿಗೆ ಬಲಿಯಾಗುತ್ತಿದ್ದಾರೆ. ಇದರಿಂದ ಗಲಭೆಗಳು ಹೆಚ್ಚಾಗುತ್ತಿವೆ. ಹಾಗಾಗಿ ಅಬಕಾರಿ ಇಲಾಖೆ ಅಧಿಕಾರಿಗಳು ತಕ್ಷಣ ಎಚ್ಚೆತ್ತು ಹಳ್ಳಿಗಳಲ್ಲಿ ಅಕ್ರಮ ಮದ್ಯ ಮಾರಾಟ ತಡೆಗಟ್ಟಬೇಕೆಂದು ದಲಿತ ಮುಖಂಡರು ಆಕ್ರೋಶ ವ್ಯಕ್ತಪಡಿಸಿದರು.

ಸರ್ಕಾರದ ಸೌಲಭ್ಯ ಪಡೆಯಲು ಎದುರಾಗುತ್ತಿರುವ ಜಾತಿ ಪ್ರಮಾಣ ಪತ್ರ ಹಾಗೂ ಇತರ ದಾಖಲೆಗಳ ಕುರಿತು ಗಮನಕ್ಕೆ ತಂದರು. ಕಂದಾಯ ಇಲಾಖೆಗೆ ಸಂಬಂಧಿಸಿದ ಈ ಸಮಸ್ಯೆಯನ್ನು ತಹಶೀಲ್ದಾರ್ ಗಮನಕ್ಕೆ ತಂದು ಶೀಘ್ರ ಪರಿಹರಿಸಲಾಗುವುದು ಎಂದು ಅಧಿಕಾರಿಗಳು ಭರವಸೆ ನೀಡಿದರು.

ಉಪ ತಹಶೀಲ್ದಾರ್ ಜಯರಾಮ್, ಜನಾರ್ಧನ್ ಸಿಂಗ್, ಆರ್‌ಐ ಮುನಿವೆಂಕಟಸ್ವಾಮಿ, ಅಜಯ್, ಅಬಕಾರಿ ಇಲಾಖೆಯ ಶಿವಾನಂದ, ಪಿಎಸ್‌ಐ ತ್ಯಾಗರಾಜ್, ಸಂಗಮೇಶ್, ಪಿಡಿಒ ವಸಂತ್ ಕುಮಾರ್, ವೈಶಾಲಿ, ಸತ್ಯವತಿ, ರಶ್ಮಿ, ಮಂಜುನಾಥ್ ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು ಉಪಸ್ಥಿತರಿದ್ದರು.

### ಕೊಳ್ಳೇಗಾಲಕ್ಕೆ ಸಿಎಂ 1,500 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ

• ಉದಯವಾಹಿನಿ, ಚಾಮರಾಜನಗರ

ಜಿಲ್ಲೆಯ ಕೊಳ್ಳೇಗಾಲಕ್ಕೆ ಸಿಎಂ ಡಿಕೆ ಶಿವಕುಮಾರ್ ಅವರು ಭೇಟಿ ನೀಡಲಿದ್ದು, 1,500 ಕೋಟಿ ರೂ. ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಿದ್ದಾರೆ. ಸಿಎಂ ಆದ ಬಳಿಕ ಡಿಕೆ ಶಿವಕುಮಾರ್ ಅವರು ಮೊದಲ ಬಾರಿಗೆ ಚಾಮರಾಜನಗರ ಜಿಲ್ಲೆಗೆ ಭೇಟಿ ನೀಡುತ್ತಿದ್ದು, ಹನೂರು ಹಾಗೂ ಕೊಳ್ಳೇಗಾಲ ಕ್ಷೇತ್ರದ ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ನೀಡಲಿದ್ದಾರೆ. ಮ.12ಗಂಟೆಗೆ ಹನೂರು ತಾಲ್ಲೂಕಿನ ಹುಲಸಗುಡ್ಡ ಹೆಲಿಪ್ಯಾಡ್‌ಗೆ ಸಿಎಂ ಬಂದಿಳಿಯಲಿದ್ದು, ಅಲ್ಲಿಂದ 12:20ಕ್ಕೆ ಎಂ.ಜಿ.ಎಸ್.ವಿ. ಕಾಲೇಜು ಮೈದಾನದಲ್ಲಿ ವೇದಿಕೆ ಕಾರ್ಯಕ್ರಮ ಆಗಮಿಸಲಿದ್ದಾರೆ. ಅಲ್ಲಿ 1,500 ಕೋಟಿ ರೂ. ವೆಚ್ಚದ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ, ಉದ್ಘಾಟನೆ ನೆರವೇರಿಸಲಿದ್ದಾರೆ.

ಕೊಳ್ಳೇಗಾಲದಲ್ಲಿ ಜಿಲ್ಲಾಮಟ್ಟದ ಸರ್ಕಾರಿ ಆಸ್ಪತ್ರೆ ಮೊದಲ ಹಂತದ ಕಾಮಗಾರಿ, ಗರ ಮಾಂಬಳ್ಳಿ ಕೆರೆಗಳಿಂದ ಬೆಂಗಳೂರು ದಾಬಸ್‌ಪೇಟೆ ಕೈಗಾರಿಕಾ ಪ್ರದೇಶಕ್ಕೆ ನೀರು ಪೂರೈಕೆ, ಮುಡಿಗುಂಡಂ ಸೇತುವೆ, ಯಳಂದೂರು ಸರ್ಕಾರಿ ಪದವಿ ಕಾಲೇಜು ಕಟ್ಟಡ, ಹೊಂಗನೂರು ಹಿರಿಕೆರೆ ಅಭಿವೃದ್ಧಿ ಸೇರಿದಂತೆ ವಿವಿಧ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಜೊತೆಗೆ 100 ಹಾಸಿಗೆಗಳ ಯಳಂದೂರು ಸರ್ಕಾರಿ ಆಸ್ಪತ್ರೆ, ಕೊಳ್ಳೇಗಾಲದ ಅಂಬೇಡ್ಕರ್ ಭವನ, ಮೆಟ್ರಿಕ್‌ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಸರ್ಕಾರಿ ಐಟಿಐ ಕಾಲೇಜು ಹೆಚ್ಚುವರಿ ಕೊಠಡಿಗಳು ಮತ್ತಿತರ ಕಾಮಗಾರಿಗಳ ಉದ್ಘಾಟನೆ ಮಾಡಲಿದ್ದಾರೆ. ಕೊಳ್ಳೇಗಾಲದ ಎಂಜಿಎಸ್‌ವಿ ಕಾಲೇಜು ಮೈದಾನದಲ್ಲಿ ಸಮಾರಂಭ ನಡೆಯಲಿದ್ದು, ಡಿಸಿಎಂ ಜಿ.ಪರಮೇಶ್ವರ್ ಸೇರಿದಂತೆ ಹಲವು ಸಚಿವರು ಭಾಗಿಯಾಗಲಿದ್ದಾರೆ.

# ಖಾಸಗಿ ಸಹಭಾಗಿತ್ವ, ಪ್ರಾಯೋಜಕತ್ವದಲ್ಲೇ ದಸರಾ ಮಾಡಬಹುದು: ಹೆಚ್. ವಿಶ್ವನಾಥ್

• ಉದಯವಾಹಿನಿ, ಮೈಸೂರು

ಸರ್ಕಾರ ಹಾಗೂ ಅಧಿಕಾರಿಗಳು ಮನಸ್ಸು ಮಾಡಿದರೆ ದಸರಾ ಮಹೋತ್ಸವವನ್ನು ಖಾಸಗಿ ಪ್ರಾಯೋಜಕತ್ವ ಹಾಗೂ ಸಹಭಾಗಿತ್ವದಲ್ಲೇ ನಡೆಸಬಹುದು ಎಂದು ಎಂಎಲ್ಸಿ ಹೆಚ್. ವಿಶ್ವನಾಥ್ ತಿಳಿಸಿದರು. ಬುಧವಾರ ನಗರದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಎಸ್.ಎಂ. ಕೃಷ್ಣ ಅವರ ಸರ್ಕಾರವಿದ್ದಾಗ ದಸರಾ ಮಹೋತ್ಸವಕ್ಕೆ ಹೊಸ ರೂಪುರೇಷೆ ಕೊಟ್ಟಿದ್ದೆವು. ಯುವ ಸಂಭ್ರಮದ ಮೂಲಕ ವಿದ್ಯಾರ್ಥಿಗಳ ಪ್ರತಿಭೆ ಅನಾವರಣಕ್ಕೆ ವೇದಿಕೆ ಕಲ್ಪಿಸಲಾಗಿತ್ತು. ಹಿಂದೆಲ್ಲಾ ಯುವ ದಸರಾ ಎಷ್ಟೊಂದು ಚೆನ್ನಾಗಿತ್ತು. ಈಗೆಲ್ಲಾ ಅಧಿಕಾರಿಗಳ ಮಾತುಗಳನ್ನು ಕೇಳಿಕೊಂಡು ಫಜೀತಿ ಮಾಡಿದ್ದಾರೆ. ಹಿಂದೆ ಒಂದು ಗೋಲ್ಡ್ ಕಾರ್ಡ್ ಮೂಲಕ ಒಂದು ಕುಟುಂಬ ದಸರಾ ನೋಡಬಹುದಿತ್ತು. ಆದರೆ ಈಗ ಒಂದು ಕಾರ್ಡ್ ಗೆ ಒಬ್ಬರಿಗೆ ಮಾತ್ರವೇ ಪ್ರವೇಶ ಕಲ್ಪಿಸಲಾಗಿದೆ. ಹಿಂದೆ ವಿದೇಶಿಗರಿಗಾಗೇ ಡೈನ್ ವಿತ್ ಮಹಾರಾಜ ಎಂಬ ಕಾರ್ಯಕ್ರಮ ಇತ್ತು. ಅದರ ವಿಶೇಷತೆ ಏನೆಂದರೆ ವಿದೇಶಿಗರು ನಿರ್ದಿಷ್ಟ ಶುಲ್ಕವನ್ನು ನೀಡಿ ಮಹಾರಾಜರೊಂದಿಗೆ ಭೋಜನ ಸವಿಯಬಹುದಿತ್ತು. ಆ ಹಣವನ್ನು ಅರಮನೆಗೆ ನೀಡುತ್ತಿದ್ದೆವು ಎಂದು ಹಿಂದಿನ ದಸರಾ ವೈಭವವನ್ನು ಹೆಚ್ ವಿಶ್ವನಾಥ್ ನೆನೆದರು.ದಸರಾ ಮೋಜಿಗಾಗಿ ಮಾಡುವುದಲ್ಲ, ಅದಕ್ಕೊಂದು ಸಂಪ್ರದಾಯವಿದೆ, ಮನಸ್ಸು ಮಾಡಿದರೆ ಖಾಸಗಿ ಸಹಭಾಗಿತ್ವ, ಪ್ರಾಯೋಜಕತ್ವದಲ್ಲೇ ದಸರಾವನ್ನು ನಡೆಸಬಹುದು. ಹೀಗೆ ಹೊಸದಾಗಿ ಮಾಡುವುದನ್ನು ಬಿಟ್ಟು ದುಡ್ಡು ತಗೊಂಡು ಬಂದು ಖರ್ಚು ಮಾಡಲು ನೀವೇ ಆಗಬೇಕಾ ಎಂದು ವಿಶ್ವನಾಥ್ ಪ್ರಶ್ನಿಸಿದರು.

ಇದೇ ಮೊದಲ ಬಾರಿಗೆ ದಸರಾಗೆ 22 ಸಚಿವರನ್ನು ನೇಮಕ ಮಾಡಿರುವುದು. ಯತೀಂದ್ರಗೆ ಬ್ರೇಕ್ ಹಾಕಲು ಏನಿದೆ ರೀ? ಅವರು ಯಾವ ಸ್ಪೀಡ್‌ನಲ್ಲಿ ಓಡಿಸ್ತಿದ್ದಾರೆ ಬ್ರೇಕ್ ಹಾಕೋಕೆ? ಆ ಗಾಡಿ ಸುಮ್ಮನೆ ನಿಂತಿದೆ ಅಷ್ಟೇ. ಅದನ್ನು ತಳ್ಳೋಕೆ 22 ಜನರನ್ನು ಕೊಟ್ಟಿದ್ದಾರೆ ಎಂದು ದಸರಾ ಉಸ್ತುವಾರಿಗೆ 22 ಸಚಿವರನ್ನು ನೇಮಿಸಿರುವುದಕ್ಕೆ ಅವರು ವ್ಯಂಗ್ಯವಾಡಿದರು.

ಉದಯವಾಹಿನಿ ಚಿತ್ರ



# ಹಕ್ಕು ಕಳೆದುಕೊಳ್ಳುವ ಭೀತಿ: ಪ್ರಕಾಶ್ ರಾಜ್ ಬೆಂಬಲದ ಭರವಸೆ

## ಎಸ್‌ಐಆರ್ ಸಾರ್ವಜನಿಕ ಸಭೆಯಲ್ಲಿ ನಟ ಹಾಗೂ ಸಾಮಾಜಿಕ ಹೋರಾಟಗಾರ ಪ್ರಕಾಶ್ ರಾಜ್ ಭಾಗವಹಿಸಿದ್ದು ಮತದಾರರ ಅಹವಾಲುಗಳನ್ನು ಆಲಿಸಿದರು.

• ಉದಯವಾಹಿನಿ, ಮಡಿಕೇರಿ




ಉದಯವಾಹಿನಿ ಚಿತ್ರ

**SIRನಿಂದಾಗಿ ಭೂರಹಿತ ಮತದಾರರಿಗೆ ಮತದಾನದ ಹಕ್ಕು ಕಳೆದುಕೊಳ್ಳುವ ಭೀತಿ ಪ್ರಕಾಶ್ ರಾಜ್ ಬೆಂಬಲದ ಭರವಸೆ ಉಪ್ಪು 'ಆರೋಗ್ಯಕ್ಕೆ ಹಾನಿಕರ' ಸಾಲ್ಟ್ ಸೇವನೆ ಕುರಿತು ರಾಜ್ಯ ಸರ್ಕಾರದಿಂದ ಹೊಸ ಮಾರ್ಗಸೂಚಿ ದುಬಾರಿ ಆದ್ರೂ ಚಿಂತೆ ಇಲ್ಲ ಎಂದ ಸಚಿವರು**

ಕೊಡಗಿನ ಮಡಿಕೇರಿ ತಾಲ್ಲೂಕಿನ ಪಾಲೇಮಾಡುವಿನಲ್ಲಿ ನಡೆದ ಎಸ್‌ಐಆರ್ ಸಾರ್ವಜನಿಕ ಸಭೆಯಲ್ಲಿ ನಟ ಹಾಗೂ ಸಾಮಾಜಿಕ ಹೋರಾಟಗಾರ ಪ್ರಕಾಶ್ ರಾಜ್ ಭಾಗವಹಿಸಿದ್ದು ಮತದಾರರ ಪಟ್ಟಿ ಪರಿಷ್ಕರಣೆ ಕುರಿತು ಸಾರ್ವಜನಿಕರ ಅಹವಾಲುಗಳನ್ನು ಆಲಿಸಿದರು.

1. 600ಕ್ಕೂ ಮತದಾರರನ್ನು ಗುರುತಿಸಿ
2. ಹಲವಾರು ಸಮಸ್ಯೆಗಳನ್ನು ಎತ್ತಿದರು
3. ಎಸ್ಟೇಟ್ ಲೈನ್ ಮನೆಗಳ ನಡುವೆ

ಮೂರ್ನಾಡಿನ ಪಾಲೆಮಾಡುವಿನಲ್ಲಿ ತಮ್ಮ ಮತದಾನದ ಹಕ್ಕು ಕಳೆದುಕೊಳ್ಳುವ ಭೀತಿಯಲ್ಲಿದ್ದ ಬುಡಕಟ್ಟು ಮತ್ತು ಹಿಂದುಳಿದ ಸಮುದಾಯಗಳ ನೂರಾರು ಗ್ರಾಮಸ್ಥರು ಸಭೆಯಲ್ಲಿ ಭಾಗವಹಿಸಿದ್ದರು.

ಜಿಲ್ಲೆಯ ಏಳು ಹಳ್ಳಿಗಳ ಸಮೀಕ್ಷೆಯನ್ನು ಪೂರ್ಣಗೊಳಿಸಿದ ರಾಜ್ ಅವರೊಂದಿಗೆ ಕೆಲಸ ಮಾಡುವ ಸ್ವಯಂಸೇವಕರು, ಕಾರ್ಯಕ್ರಮದ ಮೊದಲು ಗೈರುಹಾಜರಿ, ಸ್ಥಳಾಂತರಗೊಂಡ, ನಕಲಿ, ಸತ್ತ ಅಥವಾ ಇತರರು ಪಟ್ಟಿಯಡಿಯಲ್ಲಿ ಗುರುತಿಸಲಾದ 600ಕ್ಕೂ ಹೆಚ್ಚು ಮತದಾರರನ್ನು ಗುರುತಿಸಿದರು. ಈ ಗ್ರಾಮಸ್ಥರು ಹಲವಾರು ಸಮಸ್ಯೆಗಳನ್ನು ಎತ್ತಿದರು. ಬಾಧಿತ ನಿವಾಸಿಗಳು ತಾಂತ್ರಿಕ ದೋಷಗಳು ಮತ್ತು ಅಧಿಕಾರಶಾಹಿ ಮೇಲ್ವಿಚಾರಣೆಯನ್ನು ವಿವರಿಸಿದರು. ಅನೇಕ ಸ್ಥಳಾಂತರಗೊಂಡ ದಿನಗೂಲಿ ಕಾರ್ಮಿಕರು ಮತ್ತು ಎಸ್ಟೇಟ್ ಕಾರ್ಮಿಕರು ಭೂಮಾಲೀಕರ ಶೋಷಣೆಯು ಎಸ್ಟೇಟ್ ಲೈನ್ ಮನೆಗಳ ನಡುವೆ ಆಗಾಗ್ಗೆ ಸ್ಥಳಾಂತರಗೊಳ್ಳುವಂತೆ ಮಾಡುತ್ತಿದೆ. ಇದು ನಿವಾಸದ ಪುರಾವೆಯನ್ನು ಬಹುತೇಕ ಅಸಾಧ್ಯವಾಗಿಸುತ್ತದೆ ಎಂದು ವಿವರಿಸಿದರು. ಸರ್ಕಾರವು ನಮಗೆ ಶಾಶ್ವತ ಆಶ್ರಯ ಅಥವಾ ಭೂಮಿಯನ್ನು ಒದಗಿಸದಿದ್ದಾಗ, ನಾವು ಅಗತ್ಯವಿರುವ ದಾಖಲೆಗಳನ್ನು ಹೇಗೆ ತಯಾರಿಸುವುದು? ಎಂದು ನಿವಾಸಿಯೊಬ್ಬರು ಪ್ರಶ್ನಿಸಿದರು.

ಪಾಲೆಮಾಡು ನಿವಾಸಿ ಹುಸೇನ್, ತನ್ನ ಅವಳಿ ಪುತ್ರರ ವಯಸ್ಸಿನ ಅಂತರ ಒಂಬತ್ತು ತಿಂಗಳಿಗಿಂತ ಕಡಿಮೆ ಇರುವುದರಿಂದ ಅವರ ಅರ್ಹತೆಯನ್ನು ಪ್ರಶ್ನಿಸಿ ಅಧಿಕೃತ ನೋಟಿಸ್‌ಗಳನ್ನು ಸ್ವೀಕರಿಸಲಾಗಿದೆ ಎಂದು ಹಂಚಿಕೊಂಡಾಗ ಇತರರು ಅಸಂಬದ್ಧ ದೋಷಗಳನ್ನು ಎತ್ತಿ ತೋರಿಸಿದರು. ಸಭೆಯನ್ನುದ್ದೇಶಿಸಿ ಮಾತನಾಡಿದ ಪ್ರಕಾಶ್ ರಾಜ್, ಉಪಕ್ರಮವನ್ನು ಖಂಡಿಸಿದರು. ಇದು ಅಸಂವಿಧಾನಿಕ. ಇದು ಅಂಚಿನಲ್ಲಿರುವ ಗುಂಪುಗಳನ್ನು ಗುರಿಯಾಗಿಸಿಕೊಂಡಿದೆ ಎಂದು ಹೇಳಿಕೊಂಡರು.

ಅನ್ನು ಸಂಪೂರ್ಣವಾಗಿ ಹಿಂಪಡೆಯಬೇಕು ಎಂದು ಅವರು ಒತ್ತಾಯಿಸಿದರು, ಈ ಪ್ರಕ್ರಿಯೆಯು ಮುಸ್ಲಿಂ, ಕ್ರಿಶ್ಚಿಯನ್ ಮತ್ತು ಆದಿವಾಸಿ ಸಮುದಾಯಗಳನ್ನು ಅಸಮಾನವಾಗಿ ಹಕ್ಕು ನಿರಾಕರಣೆ ಮಾಡುತ್ತದೆ ಎಂದು ಆರೋಪಿಸಿದರು. ಕರ್ನಾಟಕದಾದ್ಯಂತ 1.08 ಕೋಟಿ ಮತದಾರರನ್ನು ಪಟ್ಟಿಯಡಿಯಲ್ಲಿ ಗುರುತಿಸಲಾಗಿದೆ. ಇನ್ನು ದೇಶಾದ್ಯಂತ 13 ಕೋಟಿಗೂ ಹೆಚ್ಚು ಮತದಾರರು ಇದೇ ರೀತಿಯ ಅನಿಶ್ಚಿತತೆಗಳನ್ನು ಎದುರಿಸುತ್ತಿದ್ದಾರೆ ಎಂದರು.

ಕಳೆದ ಹತ್ತು ದಿನಗಳಲ್ಲಿ ರಾಜ್ಯಾದ್ಯಂತ ಕ್ಷೇತ್ರ ಮಟ್ಟದ ಮಾಹಿತಿಯನ್ನು ಸಂಗ್ರಹಿಸಿರುವುದಾಗಿ ಹಾಗೂ ಈ ಕುರಿತಾದ ವಿಸ್ತೃತ ವರದಿಯನ್ನು ವಿಧಾನಸೌಧಕ್ಕೆ ಸಲ್ಲಿಸಿ, ಅಕ್ಟೋಬರ್ 1ರಂದು ನವದೆಹಲಿಯಲ್ಲಿ ನಡೆಯಲಿರುವ ಸಮ್ಮೇಳನದಲ್ಲಿ ಅದರ ಫಲಿತಾಂಶಗಳನ್ನು ಮಂಡಿಸುವುದಾಗಿ ಅವರು ಘೋಷಿಸಿದರು. ಗ್ರಾಮಸ್ಥರಿಂದ ಸಂಗ್ರಹಿಸಲಾದ ವಾಸ್ತವಿಕ ಮಾಹಿತಿಯನ್ನು ವಿಧಾನಸೌಧದಲ್ಲಿ ಮಂಡಿಸಲಾಗುವುದು ಮತ್ತು ನವದೆಹಲಿಯ ಸಭೆಯಲ್ಲಿ ವಿವಿಧ ರಾಜ್ಯಗಳ ಪ್ರತಿನಿಧಿಗಳು ಎಸ್‌ಐಆರ್‌ಗೆ ಸಂಬಂಧಿಸಿದ ಲೋಪದೋಷಗಳನ್ನು ಪ್ರಸ್ತಾಪಿಸಲಿದ್ದಾರೆ ಎಂದು ಖಚಿತಪಡಿಸಿದರು.

### ಶಾಶ್ವತ ಆಶ್ರಯದ ಕೊರತೆ

**ಇದರಲ್ಲಿ ಮತದಾರರನ್ನು ಶಾಶ್ವತವಾಗಿ ಸ್ಥಳಾಂತರಗೊಂಡ ಅಥವಾ ಸತ್ತ ಎಂದು ತಪ್ಪಾಗಿ ವರ್ಗೀಕರಿಸಲಾಗಿದೆ. ಕಾಗುಣಿತ ದೋಷಗಳು ಮತ್ತು ಶಾಶ್ವತ ಆಶ್ರಯದ ಕೊರತೆಯಿಂದ ಉಂಟಾದ ಕಾಣೆಯಾದ ದಾಖಲೆಗಳು ಸೇರಿವೆ.**

### ಚಾಮುಂಡೇಶ್ವರಿ ದರ್ಶನ ಪಡೆದ ಸೂಪರ್ ಸ್ಟಾರ್ ರಜನಿಕಾಂತ್

• ಉದಯವಾಹಿನಿ, ಮೈಸೂರು

ಸೂಪರ್ ಸ್ಟಾರ್ ರಜನಿಕಾಂತ್ ನಾಡ ಅಧಿದೇವತೆ ಚಾಮುಂಡಿ ತಾಯಿಯ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು. ಯಾವುದೇ ಮಾಹಿತಿ ನೀಡದೇ ಚಾಮುಂಡಿಬೆಟ್ಟಕ್ಕೆ ಆಗಮಿಸಿದ ಸೂಪರ್ ಸ್ಟಾರ್ ರಜನಿಕಾಂತ್ ತಾಯಿಯ ದರ್ಶನ ಪಡೆದರು. ಬಳಿಕ ದೇವಾಲಯದ ಒಳಗಿರುವ ವಿನಾಯಕ ಹಾಗೂ ಹನುಮಾನ್ ದೇವರ ದರ್ಶನವನ್ನು ಪಡೆದು ದೇವಾಲಯದಿಂದ ಹೊರ ಬಂದು ಅಭಿಮಾನಿಗಳಿಗೆ ಕೈ ಬೀಸಿ ಹೊರಟರು. ಈ ದೃಶ್ಯವನ್ನು ಭಕ್ತರು ಮೊಬೈಲ್‌ನಲ್ಲಿ ಸೆರೆಹಿಡಿದು ಜಾಲತಾಣದಲ್ಲಿ ಹರಿಬಿಟ್ಟಿದ್ದಾರೆ. ಸೂಪರ್ ಸ್ಟಾರ್ ರಜನಿಕಾಂತ್ ಬುಧವಾರ ಬೆಳಗ್ಗೆ ಚಾಮುಂಡಿಬೆಟ್ಟಕ್ಕೆ ಆಗಮಿಸಿ ನಾಡ ಅಧಿದೇವತೆಗೆ ಪೂಜೆ ಸಲ್ಲಿಸಿದರು. ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಯಾರಿಗೂ ನೀಡಿರಲಿಲ್ಲ. ಚಾಮುಂಡಿಬೆಟ್ಟದ ಸಂಪ್ರದಾಯದಂತೆ ಸೂಪರ್ ಸ್ಟಾರ್ ಗೆ ಸಾಂಪ್ರದಾಯಿಕ ಶಾಲು ಹಾಗೂ ಹಾರ ಹಾಕಿ ಗೌರವಿಸಲಾಯಿತು. ಪೂಜೆ ಸಲ್ಲಿಸಿದ ನಂತರ ಎಲ್ಲಾ ಅರ್ಚಕರನ್ನು ಆತ್ಮೀಯವಾಗಿ ಮಾತನಾಡಿಸಿದರು. ಕೆಲವು ಅರ್ಚಕರು ಅವರೊಂದಿಗೆ ಫೋಟೋ ಸಹ ತೆಗೆಸಿಕೊಂಡರು ಎಂದು ಪ್ರಧಾನ ಅರ್ಚಕ ಡಾ. ಶಶಿಶೇಖರ್ ದೀಕ್ಷಿತ್ ಮಾಹಿತಿ ನೀಡಿದರು.

ರಜನಿಕಾಂತ್ ಚಾಮುಂಡಿಬೆಟ್ಟಕ್ಕೆ ಆಗಮಿಸಿರುವ ಸುದ್ದಿ ತಿಳಿದ ಅವರ ಅಭಿಮಾನಿಗಳು ಅವರನ್ನು ನೋಡಲು ಬೆಟ್ಟಕ್ಕೆ ಆಗಮಿಸಿದ್ದು, ಕೆಲವು ಕಾಲ ಸಣ್ಣ ನೂಕುನುಗ್ಗಲು ಸಹ ಸಂಭವಿಸಿತ್ತು.

ರಜನಿಕಾಂತ್ ಅಭಿಮಾನಿಗಳಿಗೆ ಕೈ ಬೀಸಿ ತೆರಳಿದರು. ಕಳೆದ ಎರಡು ದಿನಗಳಿಂದ ಮೈಸೂರು ಜಿಲ್ಲೆಯ ತಿ. ನರಸೀಪುರ ಭಾಗದಲ್ಲಿ ತಮಿಳು ಚಿತ್ರವೊಂದರ ಚಿತ್ರೀಕರಣದಲ್ಲಿ ಭಾಗವಹಿಸಲು ಆಗಮಿಸಿರುವ ರಜನಿಕಾಂತ್ ಮೈಸೂರಿನಲ್ಲೇ ವಾಸ್ತವ್ಯ ಹೂಡಿದ್ದು ಬುಧವಾರ ಚಿತ್ರೀಕರಣಕ್ಕೆ ತೆರಳುವ ಮುನ್ನ ನಾಡ ಅಧಿದೇವತೆ ಚಾಮುಂಡಿ ತಾಯಿಯ ದರ್ಶನ ಪಡೆದಿದ್ದು ವಿಶೇಷವಾಗಿತ್ತು.

ಅಂತರಾಳದಿಂದ.. EDITORIAL

# ಟ್ರಾಫಿಕ್ ದಂಡ ವಸೂಲಾತಿ ವಿವೇಚನಾಪೂರ್ಣ ಸಲಹೆ



ಸಂಚಾರ ನಿಯಮಗಳ ಉಲ್ಲಂಘನೆ ಮಾಡುವವರಿಗೆ ಬಿಸಿ ಮುಟ್ಟಿಸುವಂತಹ ಸಲಹೆಯೊಂದನ್ನು ಸುಪ್ರೀಂ ಕೋರ್ಟ್ ದೇಶದ ಎಲ್ಲಾ ರಾಜ್ಯ ಸರಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಆಡಳಿತಗಳಿಗೆ ನೀಡಿದೆ. ಸಂಚಾರ ನಿಯಮ ಉಲ್ಲಂಘಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ದಂಡ ಬಾಕಿ ಉಳಿಸಿಕೊಂಡಿರುವವರ ವಿರುದ್ಧ ಕಾನೂನು ನಿಯಮಾವಳಿಗಳಿಗೆ ಅನುಸಾರವಾಗಿ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುವಂತೆಯೂ ಸೂಚನೆ ನೀಡಿದೆ. ಸಂಚಾರ ನಿಯಮಾವಳಿಗಳನ್ನು ಉಲ್ಲಂಘಿಸುವವರನ್ನು ಪತ್ತೆ ಹಚ್ಚಲು ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸಿ ಸಂಬಂಧಿತರ ಮನೆಗಳಿಗೆ ಚಲನ್‌ಗಳನ್ನು ಕಳುಹಿಸುವುದನ್ನಷ್ಟೇ ತಮ್ಮ ಕರ್ತವ್ಯವೆಂದು ಭಾವಿಸದೆ ದಂಡ ಮೊತ್ತದ ಸಂಗ್ರಹ ಮತ್ತು ಬಾಕಿ ಉಳಿಸಿಕೊಂಡವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆಯೂ ಸರಕಾರಗಳಿಗೆ ಚಾಟಿ ಬೀಸಿದೆ. ಸುಪ್ರೀಂ ಕೋರ್ಟ್ ನ್ಯಾಯಪೀಠದ ಈ ಸಲಹೆ ದೇಶದಲ್ಲಿ ಸಂಚಾರ ನಿಯಮಾವಳಿಗಳನ್ನು ಉಲ್ಲಂಘಿಸುವವರಿಗೆ ಪರೋಕ್ಷ ಎಚ್ಚರಿಕೆ ಮಾತ್ರವಲ್ಲದೆ ರಸ್ತೆ ಅಪಘಾತಗಳನ್ನು ನಿಯಂತ್ರಿಸುವಲ್ಲಿ ಸರಕಾರದ ಹೊಣೆಗಾರಿಕೆಯೇನು ಎಂಬುದನ್ನು ಜ್ಞಾಪಿಸಿದೆ.

ಇವೆಲ್ಲವನ್ನು ಗಮನದಲ್ಲಿರಿಸಿ ಸುಪ್ರೀಂ ಕೋರ್ಟ್ ಸಂಚಾರ ನಿಯಮಾವಳಿಗಳನ್ನು ಪಾಲಿಸದವರಿಂದ ದಂಡದ ಮೊತ್ತವನ್ನು ಕಟ್ಟುನಿಟ್ಟಾಗಿ ಸಂಗ್ರಹಿಸಲು ಅಗತ್ಯ ವ್ಯವಸ್ಥೆಯನ್ನು ಮಾಡಿಕೊಳ್ಳುವಂತೆ ರಾಜ್ಯ ಸರಕಾರಗಳಿಗೆ ಸೂಚನೆ ನೀಡಿದೆ. ದಂಡ ಮೊತ್ತ ಪಾವತಿಸದ ವಾಹನ ಮಾಲಿಕರ ಮನೆಯ ವಿದ್ಯುತ್ ಬಿಲ್ ಜತೆ ದಂಡದ ಮೊತ್ತವನ್ನು ಸೇರಿಸಿ ವಸೂಲು ಮಾಡುವಂತೆ ಸುಪ್ರೀಂ ಕೋರ್ಟ್ ಪೀಠ ರಾಜ್ಯ ಸರಕಾರಗಳಿಗೆ ಸಲಹೆ ನೀಡಿದೆ. ಮಾಸಿಕ ವಿದ್ಯುತ್ ಶುಲ್ಕವನ್ನು ನಿರ್ದಿಷ್ಟ ಅವಧಿಯೊಳಗೆ ಪಾವತಿಸದ ಗ್ರಾಹಕರ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲಾಗುವುದರಿಂದ ಈ ಭಯದಿಂದಲಾದರೂ ಸಂಚಾರ ನಿಯಮಗಳ ಉಲ್ಲಂಘನೆಯ ದಂಡದ ಮೊತ್ತ ವಸೂಲಾತಿ ಆಗಲಿ ಎಂಬ ಸದಾಶಯ ಸುಪ್ರೀಂ ಕೋರ್ಟ್‌ದ್ದಾಗಿದೆ. ಅಷ್ಟು ಮಾತ್ರವಲ್ಲ ಹೀಗೆ ದಂಡ ಪಾವತಿಸಿದಾಗ ಸಂಚಾರ ನಿಯಮಾವಳಿಗಳ ಪಾಲನೆ ಬಗೆಗೆ ವಾಹನ ಚಾಲಕರಲ್ಲಿ ಒಂದಿಷ್ಟು ಜಾಗೃತಿ ಮೂಡೀತು ಎಂಬ ದೂರದೃಷ್ಟಿಯೂ ಇದರ ಹಿಂದಿದೆ. ಈ ಹಿಂದೆ ದಂಡ ಪಾವತಿಸದ ವಾಹನಗಳನ್ನು ಮುಟ್ಟುಗೋಲು ಹಾಕಿಕೊಳ್ಳುತ್ತಿದ್ದ ಮಾದರಿಯಲ್ಲಿ ದಂಡ ಬಾಕಿ ಉಳಿಸಿಕೊಂಡವರ ವಾಹನ ಮಾಲಕ ಪರವಾನಿಗೆ ಅಮಾನತು, ನೋಂದಣಿ ಪತ್ರ, ಫಿಟನೆಸ್ ಮತ್ತು ಮಾಲಿನ್ಯ ನಿಯಂತ್ರಣ ಪ್ರಮಾಣಪತ್ರಗಳ ನವೀಕರಣಕ್ಕೆ ನಿರ್ಬಂಧ ಮತ್ತಿತರ ಕಠಿನ ಕ್ರಮಗಳನ್ನು ಕೈಗೊಳ್ಳುವಂತೆಯೂ ನ್ಯಾಯಪೀಠ ಸರಕಾರಗಳಿಗೆ ಸಲಹೆ ನೀಡಿದೆ.

> **ಸಂಚಾರ ನಿಯಮಗಳನ್ನು ಪಾಲಿಸದ ವಾಹನ ಚಾಲಕರನ್ನು ಪತ್ತೆ ಹಚ್ಚಲು ಬಹುತೇಕ ರಾಜ್ಯ ಸರಕಾರಗಳು ಅತ್ಯಾಧುನಿಕ ತಂತ್ರಜ್ಞಾನದ ಮೊರೆ ಹೋಗಿವೆ. ಈ ಹೊಸ ವ್ಯವಸ್ಥೆಯಲ್ಲಿ ನಿಯಮಗಳನ್ನು ಉಲ್ಲಂಘಿಸಿದ ವಾಹನಗಳನ್ನು ಪತ್ತೆ ಹಚ್ಚಿ ನೇರವಾಗಿ ಅದರ ಮಾಲಿಕರ ವಿಳಾಸಕ್ಕೆ ದಂಡದ ಚಲನ್‌ಗಳನ್ನು ರವಾನಿಸುವ ವ್ಯವಸ್ಥೆಯನ್ನು ಹೊಂದಿವೆ. ಆದರೆ, ದಂಡದ ಮೊತ್ತವನ್ನು ವಸೂಲಾತಿ ಮಾಡಲು ಸೂಕ್ತ ವ್ಯವಸ್ಥೆಯನ್ನು ಹೊಂದಿಲ್ಲ. ಹೀಗಾಗಿ ಭಾರೀ ಪ್ರಮಾಣದಲ್ಲಿ ದಂಡದ ಮೊತ್ತ ವಸೂಲಾತಿಗೆ ಬಾಕಿ ಉಳಿದಿದೆ. ಕೆಲವೆಡೆಯಂತೂ ಈ ಚಲನ್‌ಗಳಿಗೆ ವಾಹನಗಳ ಮಾಲಿಕರು ತಲೆಕೆಡಿಸಿಕೊಳ್ಳುತ್ತಲೇ ಇಲ್ಲ. ವಾಹನ ಮಾಲಕರ ಈ ಧೋರಣೆಯಿಂದಾಗಿ ಸಂಚಾರ ನಿಯಮಾವಳಿಗಳ ಉಲ್ಲಂಘನೆ ಪ್ರಕರಣಗಳು ಹೆಚ್ಚುತ್ತಲೇ ಸಾಗಿವೆಯಲ್ಲದೆ ರಸ್ತೆ ಅಪಘಾತಗಳ ಸಂಖ್ಯೆಯೂ ಏರುಗತಿಯಲ್ಲಿದೆ.**

ಸುಪ್ರೀಂಕೋರ್ಟ್ ನೀಡಿರುವ ಈ ಸಲಹೆ- ಸೂಚನೆಗಳನ್ನು ಎಲ್ಲಾ ರಾಜ್ಯ ಸರಕಾರಗಳು ಗಂಭೀರವಾಗಿ ಪರಿಗಣಿಸಿ ಜಾರಿಗೆ ತರಬೇಕು. ದಂಡ ಮೊತ್ತದ ಸಮರ್ಪಕ ವಸೂಲಾತಿಯಿಂದ ವಾಹನ ಚಾಲಕರಲ್ಲಿ ಒಂದಿಷ್ಟು ಜಾಗೃತಿ ಮೂಡಿ ಸಂಚಾರ ನಿಯಮಾವಳಿಗಳ ಪಾಲನೆಗೆ ಆಸ್ಥೆ ವಹಿಸಲಿದ್ದು, ಇದರಿಂದ ಅಪಘಾತಗಳಿಗೆ ಕಡಿವಾಣ ಬೀಳಲಿದೆ. ಅಷ್ಟು ಮಾತ್ರವಲ್ಲದೆ ರಾಜ್ಯ ಸರಕಾರಗಳ ಬೊಕ್ಕಸಕ್ಕೂ ಆದಾಯ ಹರಿದುಬರಲಿದೆ.




• ಹಿಂದಿನ ಸಂಚಿಕೆಯಿಂದ

## 121ನೆಯ ಅಧ್ಯಾಯ

ಆಗ ಶ್ರೀರಾಮಚಂದ್ರನು ನಸುನಗುತ್ತ, ದೇವಪತಿಯ ಆತ್ಮಭವನೂ, ರಕ್ಕಸಕುಲಜೀವದಲ್ಲಣನೂ, ಮಹಾ ಬಲಶಾಲಿಯೂ ಯುವರಾಜನೂ ಆದ ಅಂಗದನನ್ನು ''ಬಾ' ಎಂದು ಪ್ರೀತಿಯಿಂದ ಹತ್ತಿರ ಕರೆದು, ಯಾವುದೇ ಭಯವನ್ನು ಹೊಂದದೆ ನೀನು ರಾವಣನ ಬಳಿ ಹೋಗಿ ಸೀತೆಯನ್ನು ಬಿಟ್ಟುಕೊಟ್ಟು, ಸಿರಿಯನ್ನಿರಿಸಿಕೊಂಡು ಬದುಕು' ಎಂದು ಮೃದುನುಡಿಗಳಿಂದ ನುಡಿದು, ದೈತ್ಯನು ನಿನ್ನ ಮಾತುಗಳನ್ನು ಒಪ್ಪದಿದ್ದರೆ ಆ ಬಳಿಕ ಅವನಿಗೆ ನಿನ್ನ ಪ್ರೇತಕೃತ್ಯಗಳಿಗೆ ಸಿದ್ಧನಾಗು ಎಂದು ನಿರ್ಭಯವಾಗಿ ಹೇಳಿ ವಾಪಸ್ಸು ಬಾ ಎಂದು ಅಂಗದನಿಗೆ ಸೂಚಿಸಿದ. ದೊರೆಯುವಹಿಸಿದ ಕಾರ್ಯವನ್ನು ಮಾಡಲು ಒಪ್ಪಿ, ಮನಸ್ಸಿನಲ್ಲಿಯೇ ರಘುಕುಲತಿಲಕನ ಪಾದಾಬ್ಜಗಳಿಗೆ ವಂದಿಸಿದ ಸುರಪಸುತನಂದನನ್ನು ಧರಣಿತಳಕ್ಕೆ ಇಳಿದು ಬಂದ.

ಅವನು ಬರುತ್ತಿದ್ದ ರಭಸಕ್ಕೆ ಕೈಗಳ ತಿರುಹುವಿಕೆಯ ಕಾರಣದಿಂದ ವೇಗವಾಗಿ ಬೀಸಿದ ಗಾಳಿಯಿಂದಾಗಿ ಆ ಪಟ್ಟಣದ ಕಟ್ಟಡಗಳ ಮೇಲೆ ಹಾರಾಡುತ್ತಿದ್ದ ಧ್ವಜಗಳು ಕ್ಷಣದಲ್ಲಿ ನೆಲಕ್ಕೆ ಉದುರಿದವು. ಆ ತುಂಗಬಲನು ಐತರುತ್ತಿದ್ದ ಉರುಬೆಗೆ ದೈತ್ಯಪುಂಗವನ ಸಭೆಗೆ ಬೆದರಿ ಕಳವಳಿಸುತ್ತ ಏನು ಅಪಾಯವು ಸಂಭವಿಸುವುದೋ ಎಂದು ಚಿಂತಿಸಿತು. ನಗರದಲ್ಲಿದ್ದ ದೈತ್ಯಭಟರು ತಮ್ಮ ಆಯುಧಗಳನ್ನು ಹಿಡಿದು ಕಣ್ಣುಗಳನ್ನರಳಿಸಿ ನಾಲ್ದೆಸೆಗಳತ್ತ ನೋಟ ಬೀರಿ ಸಿದ್ಧರಾಗಿ ನಿಂತರೆ, ಜನರೆಲ್ಲ ದಿಕ್ಕೆಟ್ಟರು. ಆಗ ಅವರ ಕಣ್ಣಿಗೆ ದೊಡ್ಡ ಬೆಟ್ಟವೊಂದನ್ನು ಕೈಯಲ್ಲಿ ಹಿಡಿದುಕೊಂಡು ಲಯಕಾಲರುದ್ರನ ರೀತಿಯಲ್ಲಿ ಅಂಗದನು ಕಾಣಿಸಿದ. ಈ ಹಿಂದೆ ಕೋಡಗವೊಂದು ಲಂಕೆಗೆ ಬಂದಾಗ ನಾವೆಲ್ಲ ಮನೆಮಠಗಳನ್ನು ಬಿಟ್ಟು ವನಕ್ಕೆ ಹೋದುದರಿಂದ ಜೀವ ಉಳಿಸಿಕೊಳ್ಳಲು ಸಾಧ್ಯವಾಯಿತು ಈಗ ನೋಡಿದರೆ ಬೆಟ್ಟದಂತಹ ಮತ್ತೊಂದು ಕೋತಿ ಬರುತ್ತಿದೆ, ಅವನು ಕಂಡರೆ ಬದುಕುವುದು ಹೇಗೋ ಎಂತೋ! ಲಂಕಾನಗರವು ಅಪಾಯಗಳ ಸದನವಾಗುತ್ತಿದೆ. ವಿಧಿಯು ನಮ್ಮ ಮೇಲೆ ಕೋಪಿಸಿಕೊಂಡಿದೆ ಎಂದು ಎಲ್ಲರೂ ಬೆದರಿ ಜ್ವರಗೊಂಡು ವಾಲಿಯ ಮಗನು ಬರುತ್ತಿರುವುದನ್ನು ಬಾಯಿಬಿಟ್ಟುಕೊಂಡು ನೋಡಿದರು. ಕೆಲವು ತರುಣರು ತಮ್ಮ ಸರಕುಗಳನ್ನು ಒಗ್ಗೂಡಿಸಿಕೊಂಡು ಮರೆಗೆ ಅಡಗಿಕೊಳ್ಳಲು ಹೋದರೆ, ಮತ್ತೆ ಕೆಲವರು ನೆಲವನ್ನಗೆದು ತಮ್ಮ ಒಡವೆಗಳನ್ನು ಬಚ್ಚಿಡಲು ಹವಣಿಸಿದರು; ಮತ್ತೆ ಕೆಲವರು ಹೆದರಿಕೆಯಿಂದ ಕೈಗಳನ್ನು ಕೊಡಹುತ್ತ ಪಾಳು ಮಂಟಪಗಳಲ್ಲಿ ಆಶ್ರಯ ಪಡೆದರು. ಹಿಂದಾದುದನ್ನು ಸ್ಮರಿಸಿಕೊಂಡು, ಮುಂದಾಗುವುದನ್ನು ಕಲ್ಪಿಸಿಕೊಂಡು ನಗರದ ಜನರೆಲ್ಲ ತಲ್ಲಣಗೊಂಡರು ಬೆಂಕಿಯೇ ಮನುಷ್ಯರೂಪದಲ್ಲಿ ಬರುತ್ತಿದೆಯೋ, ದೇವೇಂದ್ರನು ಈ ವೇಷದಲ್ಲಿ ಅವತರಿಸಿದನೋ, ಕುಬೇರನು ಈ ರೀತಿ ಬಂದು ಲಂಕಾ ನಗರದ ಪ್ರಜೆಗಳನ್ನು ಮಟ್ಟಹಾಕಲು ಯೋಚಿಸುತ್ತಿರುವನೋ ಎಂದು ಭಯಗೊಂಡರು. ಅವನು ಮಾಡುವ ದಾಂಧಲೆಯನ್ನು ಎದುರಿಸಿ ನಾವು ಬದುಕುವುದು ಹೇಗೋ ಶಿವ ಶಿವಾ ಎಂದು ಸಾಮಾನ್ಯ ಜನರು ಸಂಕಟಕ್ಕೊಳಗಾದರು. ಪ್ರಳಯಕಾಲದ ಬಿರುಗಾಳಿಯಂತೆ ಭೂಮಿಗಿಳಿದ ಅಂಗದನು, ರೆಕ್ಕೆಗಳಿಲ್ಲದ ಮೇರುಪರ್ವತದಂತೆ, ತಕ್ಷಣವೇ ರಾವಣಸಭೆಯ ಒಳಹೊಗುವುದಕ್ಕೆ ಅಂಜಿ ಹೊರಗೆ ನಿಂತ ಒಳಗಿದ್ದ ಖಳರೆಲ್ಲ ತಲ್ಲಣಗೊಂಡರು. ಇಂದ್ರಜಿತು ಮೊದಲಾದ ಮುಖ್ಯ ರಕ್ಕಸರು ಅಲ್ಲಲ್ಲಿ ಗಜಬಜಿಸುತ್ತ ತಮ್ಮ ಆಯುಧಗಳನ್ನು ಸರಿಪಡಿಸಿಕೊಂಡು ನಿಂತರು. ಭೂರಿವಿಕ್ರಮನಾದ ಅಂಗದನು ಸಭಾಭವನವನ್ನು ಹೊಕ್ಕು ನಾಲ್ದೆಸೆಗಳನ್ನು ನಿಟ್ಟಿಸುತ್ತ ಸಿಂಹವಿಷ್ಟರದಲ್ಲಿ ಕುಳಿತಿದ್ದ ದೈತ್ಯನ ಆರ್ಭಟೆಯನ್ನು ನೋಡಿ, ತಾನು ನೆಲದ ಮೇಲೆ ಕುಳಿತುಕೊಳ್ಳುವುದೋ ನಿಂತುಕೊಳ್ಳುವುದೋ ಎಂದು ಅರೆಚಣ ಚಿಂತಿಸಿ, ಕೊನೆಗೆ ಒಂದು ಉಪಾಯವು ಹೊಳೆದು ತನ್ನ ದೀರ್ಘ ಬಾಲವನ್ನು ಸುರುಳಿಸುರುಳಿಯಾಗಿ ಪೇರಿಸಿಕೊಂಡು ಅದರ ತುದಿಯಲ್ಲಿ ಕುಳಿತುಕೊಂಡ. ಇದನ್ನು ನೋಡುತ್ತಿದ್ದ ರಕ್ಕಸರು ಅಚ್ಚರಿಯಿಂದ ಕಣ್ಣು ಪಿಳುಕಿಸುತ್ತಿದ್ದರೇ ಹೊರತು ಯಾರೂ ಮಾತನಾಡುವ ಧೈರ್ಯವನ್ನು ಹೊಂದಿರಲಿಲ್ಲ, ಅವನನ್ನು ತಡೆಯುವವನಂತೂ ಇರಲೇ ಇಲ್ಲ.

ಬೆರಗಾದ ಸಭೆಯನ್ನು ನೋಡುತ್ತ ರಾವಣೇಶ್ವರನು ಅಹಿತಕರ ಸನ್ನಿವೇಶದಲ್ಲಿದ್ದುಕೊಂಡು ತಾನು ಸುಮನಿರುವುದೆಂತು ಎಂದು ಪ್ರಹಸ್ತನನ್ನು ಕರೆದು, ಯಾವದೋ ಮಾಯದಲ್ಲಿ ಬಂದು ಇಲ್ಲಿ ಮುಂದೆಯೇ ಕುಳಿತಿರುವ ಈ ಕೋಡಗ ಯಾರು, ಎಲ್ಲಿಂದ ಬಂತು, ಆಗಬೇಕಾದುದೇನು ಎಂದು ವಿಚಾರಿಸು. ಇವನ ರೀತಿ ಮಕ್ಕಳಾಟದಂತಿದೆ ಇದಕ್ಕೆ ಮಾತನಾಡಲು ಬರುವುದೋ ಇಲ್ಲವೋ ಇದನ್ನು ಸ್ವಲ್ಪ ಹೊತ್ತು ಇಲ್ಲಿ ಆಡಿಸಿ ಆನಂತರ ನಗರದಲ್ಲಿ ಕುಣಿಸಿ ಕೊನೆಗೆ ಉಪವನದಲ್ಲಿ ಬಿಟ್ಟುಬಿಡಿ'' ಎಂದು ಸೂಚಿಸಿದನು.

ಮುಂದುವರೆಯುವುದು

# ಪರಿಮಳಕ್ಕೆ ಮಾತ್ರ ಹೆಸರುವಾಸಿಯಾಗಿಲ್ಲ! ಅದ್ಭುತ ಆರೋಗ್ಯ ಲಾಭವನ್ನು ಹೊಂದಿದೆ ಏಲಕ್ಕಿ!

ಪ್ರತಿಯೊಂದು ಅಡುಗೆ ಮನೆಯಲ್ಲಿ ಸಾಮಾನ್ಯವಾಗಿ ಬಳಸುವ ಸಾಂಬಾರು ಪದಾರ್ಥ ಅಂದ್ರೆ ಅದು ಏಲಕ್ಕಿ. ಕೇವಲ ಸುವಾಸನೆಯನ್ನು ಹೆಚ್ಚು ಮಾಡುವುದಲ್ಲದೆ ಔಷಧೀಯ ಗುಣಗಳನ್ನು ಹೇರಳವಾಗಿ ಹೊಂದಿದೆ. ಉತ್ಕರ್ಷಣ ನಿರೋಧಕಗಳು, ಉರಿಯೂತ ನಿವಾರಕ ಗುಣಗಳನ್ನು ಹೊಂದಿರುವ ಏಲಕ್ಕಿ ಹಲವಾರು ಆರೋಗ್ಯ ಪ್ರಯೋಜನಗಳನ್ನು ಹೊಂದಿದೆ. ವಿಟಮಿನ್ ಸಿ, ಪೊಟ್ಯಾಸಿಯಮ್, ಕ್ಯಾಲ್ಸಿಯಂ, ಕಬ್ಬಿಣ, ಸತು, ಮ್ಯಾಂಗನೀಸ್‌ನಂತ ಅನೇಕ ಅಗತ್ಯ ಪೋಷಕಾಂಶಗಳು ಇವೆ. ಏಲಕ್ಕಿಯಲ್ಲಿ ವಿಟಮಿನ್ ಎ, ಬಿ ಮತ್ತು ಸಿ ಅಧಿಕವಾಗಿದ್ದು ಇದು ನೈಸರ್ಗಿಕ ಡಿಟಾಕ್ಸಿಫೈಯರ್ ಆಗಿ ಕಾರ್ಯ ನಿರ್ವಹಿಸುತ್ತದೆ. ಇದರಲ್ಲಿದ್ದ ತ್ಯಾಜ್ಯ ಮತ್ತು ವಿಷಕಾರಿ ಅಂಶಗಳನ್ನು ಹೊರಹಾಕಿ ದೇಹವನ್ನು ಆ್ಯಕ್ಟೀವ್ ಆಗಿ ಇರಿಸುತ್ತದೆ. ಗ್ಯಾಸ್ಟ್ರಿಕ್, ಹೊಟ್ಟೆ ಉಬ್ಬರ ಸಮಸ್ಯೆ ಇರುವವರು ಏಲಕ್ಕಿ ಪುಡಿ ಮತ್ತು ಶುಂಠಿ ರಸವನ್ನು ಉಗುರುಬೆಚ್ಚಗಿನ ನೀರಿನಲ್ಲಿ ಮಿಕ್ಸ್ ಮಾಡಿ ಕುಡಿದರೆ ಉತ್ತಮ. ಇದರಿಂದ ದೇಹಕ್ಕೆ ರಿಫ್ರೆಶ್ ಅನುಭವ ಸಿಗುತ್ತದೆ.

ಏಲಕ್ಕಿಯಲ್ಲಿ ಆಂಟಿಸ್ಪಾಸ್ಮೊಡಿಕ್' ಗುಣಗಳಿದ್ದು, ಸ್ನಾಯುಗಳ ಒತ್ತಡವನ್ನು ನಿವಾರಣೆ ಮಾಡುತ್ತದೆ. ಇದರಿಂದ ಹೊಟ್ಟೆನೋವು, ಸ್ನಾಯು ಸೆಳೆತ ಮತ್ತು ನಿರಂತರವಾಗಿ ಬರುವ ಬಿಕ್ಕಳಿಕೆಯನ್ನು ತಡೆಯಬಹುದು. ನಿಮ್ಮ ಆಹಾರದಲ್ಲಿ ಏಲಕ್ಕಿ ಸೇರಿಸಿಕೊಳ್ಳುವುದರಿಂದ ಶೀತ ಮತ್ತು ಜ್ವರದಂತಹ ಸಾಮಾನ್ಯ ಸೋಂಕುಗಳನ್ನು ತಡೆಯಲು ಸಹಕಾರಿಯಾಗುತ್ತದೆ. ಅನಾರೋಗ್ಯಕರ ಸಮಯದಲ್ಲಿ ಬೆಚ್ಚಗಿನ ಏಲಕ್ಕಿ ಚಹಾವನ್ನು ಕುಡಿಯುವುದು ಹಿತಕರಿಯಾಗಿದೆ. ಇದರಲ್ಲಿರುವ ಅಧಿಕ ಆಂಟಿ-ಆಕ್ಸಿಡೆಂಟ್‌ಗಳು ರಕ್ತದಲ್ಲಿರುವ ಸ್ವತಂತ್ರ ರಾಡಿಕಲ್ ಗಳ ವಿರುದ್ಧ ಹೋರಾಟವನ್ನು ನಡೆಸುತ್ತದೆ. ಇದು ಕೋಶಗಳ ಹಾನಿಯನ್ನು ತಡೆದು ಚರ್ಮದ ಕಾಂತಿಯನ್ನು ಕಾಪಾಡುತ್ತದೆ. ಏಲಕ್ಕಿಯಲ್ಲಿ ಶ್ವಾಸಕೋಶವನ್ನು ಸರಿಪಡಿಸುವ ಅಂಶಗಳಿವೆ. ಶೀತ, ಕೆಮ್ಮು ಮತ್ತು ಉಸಿರಾಟದ ತೊಂದರೆ ಇದ್ದಾಗ ಬಿಸಿ ಏಲಕ್ಕಿ ಚಹಾ ಅಥವಾ ನೀರನ್ನು ಕುಡಿಯುವುದರಿಂದ ಗಂಟಲಿಗೆ ಆರಾಮ ಸಿಗುತ್ತದೆ.

ಏಲಕ್ಕಿಗಳನ್ನು ಜಜ್ಜಿ ಒಂದು ಲೋಟ ನೀರಿನಲ್ಲಿ ಕುದಿಸಿ, ಬೆಳಗ್ಗೆ ಖಾಲಿ ಹೊಟ್ಟೆಯಲ್ಲಿ ಕುಡಿಯುವುದು ಉತ್ತಮ. ಅಥವಾ ಯಾವುದೇ ಉಪಹಾರ, ಸಿಹಿ ಖಾದ್ಯಗಳಲ್ಲಿ ಬಳಸಿ ಸೇವಿಸಬಹುದು.

**ಆಹಾರದಲ್ಲಿ ಏಲಕ್ಕಿಯನ್ನು ಸೇರಿಸುವುದು ಹೇಗೆ:** ಏಲಕ್ಕಿ ಕಾಳುಗಳನ್ನು ಶುಂಠಿಯೊಂದಿಗೆ ನೀರಿನಲ್ಲಿ ಕುದಿಸಿ. ಅದನ್ನು ಯಕೃತ್ತು, ಶ್ವಾಸಕೋಶಗಳು ಮತ್ತು ಮೂತ್ರಪಿಂಡಗಳನ್ನು ನಿರ್ವಿಶಗೊಳಿಸುವ ಪಾನೀಯವಾಗಿ ಸೇವಿಸಿ ಚಹಾ ಮಾಡುವಾಗ ಎರಡು ಅಥವಾ ಮೂರು ಏಲಕಿಗಳನ್ನು ಸೇರಿಸಿ.

ಕರಿಬೇವಿನ ಪೌಡರ್ ಜೊತೆಗೆ ಬೆರೆಸಿ ದಿನಕ್ಕೆ ಕನಿಷ್ಠ ಒಂದು ಬಾರಿ ಊಟದಲ್ಲಿ ಸೇರಿಸಿ. ಏಲಕ್ಕಿಯು ಸಾರಭೂತ ತೈಲವು ಉಸಿರಾಟದ ವ್ಯವಸ್ಥೆ ಮತ್ತು ಜೀರ್ಣಕಾರಿ ಸಮಸ್ಯೆಗಳನ್ನು ಸರಾಗಗೊಳಿಸುವ ಉತ್ತಮ ಮಾರ್ಗವಾಗಿದೆ.

ಜಜ್ಜಿದ ಅಥವಾ ಪುಡಿಮಾಡಿದ ಏಲಕ್ಕಿ ಬೀಜಗಳನ್ನು ಸ್ಮೂಥಿಗಳು, ಲಡ್ಡೂಗಳು, ಎನರ್ಜಿ ಬಾರ್‌ಗಳು ಮತ್ತು ಶೇಕ್‌ಗಳಿಗೆ ಸೇರಿಸಬಹುದು. ಏಲಕ್ಕಿ ಪುಡಿಯೊಂದಿಗೆ ಕಾಫಿ ತಯಾರಿಸಿ. ಏಲಕ್ಕಿಯನ್ನು ನೇರವಾಗಿ



ಕಾಫಿ ಕಪ್‌ಹಾಕಿ. ಏಲಕ್ಕಿ ನಿರುಪದ್ರವಿಯಾಗಿದ್ದರೂ, ಕೆಲವರಿಗೆ ಮಸಾಲೆಯೆಂದರೆ ಅಲರ್ಜಿ ಉಂಟಾಗುತ್ತದೆ. ಸಾಮಾನ್ಯ ಅಲರ್ಜಿಯ ಪ್ರತಿಕ್ರಿಯೆಗಳಲ್ಲಿ ಒಂದಾದ ಕಾಂಟ್ಯಾಕ್ಟ್ ಡರ್ಮಟೈಟಿಸ್, ಒಂದು ರೀತಿಯ ಚರ್ಮದ ದದ್ದು ಆಗಿದ್ದು, ಇದು ಚರ್ಮವನ್ನು ತುರಿಕೆ ಮತ್ತು ಕೆಂಪಾಗಿಸುತ್ತದೆ. ದೊಡ್ಡ ಪಿತ್ತಗಲ್ಲುಗಳು ಇರುವವರು ಏಲಕ್ಕಿಯನ್ನು ಎಚ್ಚರಿಕೆಯಿಂದ ಸೇವಿಸಬೇಕು.

ಕೆಲವು ಸಂದರ್ಭಗಳಲ್ಲಿ, ಪಿತ್ತಗಲ್ಲು ನೋವು ಹೆಚ್ಚಾಗುತ್ತದೆ ಮತ್ತು ರಕ್ತಸ್ರಾವಕ್ಕೆ ಕಾರಣವಾಗಬಹುದು. ನೀವು ಎಚ್‌ಐವಿ, ಕೆರಳಿಸುವ ಕರುಳಿನ ಸಹಲಕ್ಷಣಗಳು (ಯಕೃತ್ತಿನ ಔಷಧಗಳು, ಖಿನ್ನತೆ-ಶಮನಕಾರಿಗಳು, ಆಸ್ಪಿರಿನ್ ಮತ್ತು ಆಂಟಿಪ್ಲೇಟ್ ಲೆಟ್ ಔಷಧಗಳನ್ನು ಸೇವಿಸುತ್ತಿದ್ದರೆ ಏಲಕ್ಕೆ ಸೇವನೆಗು ಮುನ್ನ ವೈದ್ಯಕೀಯ ವೃತ್ತಿಪರರನ್ನು ಸಂಪರ್ಕಿಸುವುದು ಉತ್ತಮ.ಅದರ ಜೊತೆಗೆ, ಗರ್ಭಾವಸ್ಥೆಯಲ್ಲಿ ಏಲಕ್ಕಿಯನ್ನು ಸೇವಿಸುವುದು ಸಾಮಾನ್ಯವಾಗಿ ಸುರಕ್ಷಿತವಾಗಿದೆ.



## ವಿದ್ಯಾರ್ಥಿ ವಿಜಯ

ಡಾ.ಸುಧಾಕರ್ . ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು

96

# ಸೋಲಿನ ಮೆಟ್ಟಿಲಲ್ಲಿ ಗೆಲುವು

ಯಶಸ್ಸಿನ ಹಾದಿಯಲ್ಲಿ ಏಕೈಕ ಯತ್ನದಲ್ಲಿ ಫಲ ಸಿಗದು ಎಂಬ ಅರಿವೇ ಅರ್ಧ ಗೆಲುವು. ಅಪಜಯವನ್ನು ಅರಗಿಸಿಕೊಳ್ಳುವ ಧೀರತೆ, ಸಕಾರಾತ್ಮಕ ಚಿತ್ತದ ಜೊತೆಗೆ ಮರುಪ್ರಯತ್ನದ ಅಚಲ ಛಲವೇ ಜಯದ ಬೀಜ. ಬಿದ್ದಾಗ ಎದ್ದೇಳುವ ಮನಸ್ಸು ಮಾತ್ರ ಬೆಳಕಿನೆಡೆಗೆ ನಡೆಯುತ್ತದೆ.

ತಪ್ಪನ್ನು ಭಯದ ಕಣ್ಣಿನಲ್ಲಿ ನೋಡುವುದನ್ನು ಬಿಡಬೇಕು. ಪ್ರತಿ ಎಡವಟ್ಟನ್ನು ಕಲಿಕೆಯ ಕದವಾಗಿಸಿ, ಏಕೆ ವಿಫಲವಾಯಿತು ಎಂದು ಆತ್ಮಾವಲೋಕನ ಮಾಡಿ, ತಿದ್ದಿ ಮತ್ತೆ ಮುನ್ನಡೆಯುವ ಪರಿಪಾಟ ಬೆಳೆಸಬೇಕು. ಬೃಹತ್ ಗುರಿಯನ್ನು ಚಿಕ್ಕ ಚಿಕ್ಕ ಮೈಲುಗಲ್ಲುಗಳಾಗಿ ಒಡೆದು, ಒಂದೊಂದನ್ನು ಗೆಲ್ಲುತ್ತಾ ಆತ್ಮಪ್ರತ್ಯಯದ ಸೌಧವನ್ನು ಹಂತಹಂತವಾಗಿ ಕಟ್ಟುವುದು ಜಾಣ್ಮೆ. ನರವಿಜ್ಞಾನದ ನುಡಿ ಸ್ಪಷ್ಟ.

ಪ್ರತಿ ಪುನರ್ಯತ್ನವೂ ಮೆದುಳಿನ ನರಪಥಗಳನ್ನು ದೃಢಗೊಳಿಸುತ್ತದೆ, ಸ್ಮೃತಿಯ ಬೇರು ಗಟ್ಟಿಗೊಳ್ಳುತ್ತದೆ, ಸಮಸ್ಯಾ ಪರಿಹಾರದ ಚಾತುರ್ಯ ಚುರುಕಾಗುತ್ತದೆ. ಇದನ್ನೇ ಅನುಭವಾಧಾರಿತ ಬುದ್ಧಿವಿಕಾಸ ಎನ್ನುತ್ತಾರೆ. ಅಭ್ಯಾಸವೇ ಮಿದುಳಿನ ಶಿಲ್ಪಿ.

> **ಮರುಪ್ರಯತ್ನದ ಛಲವಿರುವ ಕಲಿಕಾರ್ಥಿ ಸೋಲನ್ನು ಅಂತಿಮ ತೀರ್ಪಾಗಿ ಕಾಣುವುದಿಲ್ಲ, ಯಶಸ್ಸಿನ ಸೋಪಾನವಾಗಿ ಪರಿವರ್ತಿಸುತ್ತಾನೆ. ಅವನಲ್ಲಿ ದೃಢ ಸಂಕಲ್ಪ, ಸಹನಶೀಲತೆ, ಅವಿರತ ಸಾಧನೆಯ ಕಿಚ್ಚು ಅರಳುತ್ತದೆ. ಆದ್ದರಿಂದ ಮರುಪ್ರಯತ್ನವೇ ಬದುಕನ್ನು ಬೆಳಗುವ ಅಜೇಯ ಅಂತರಶಕ್ತಿ.**



# ತಮೋಹ ನೃತ್ಯ ಸಂಸ್ಥೆಯ ದಶಮಾನೋತ್ಸವ : ಮೋಹಿನಿ-ಭಸ್ಮಾಸುರ ವಿಶೇಷ ನೃತ್ಯ ಪ್ರದರ್ಶನ

• ಉದಯವಾಹಿನಿ, ಬೆಂಗಳೂರು

ತಮೋಹ ನೃತ್ಯ ಸಂಸ್ಥೆಯ ದಶಮಾನೋತ್ಸವ ಸಮಾರಂಭವನ್ನು ಅಕ್ಟೋಬರ್ 2, ಶುಕ್ರವಾರ ಸಂಜೆ 4-30ಕ್ಕೆ ನಗರದ ಜೆ. ಸಿ. ರಸ್ತೆಯಲ್ಲಿರುವ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಿದೆ.

ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಖ್ಯಾತ ಜಾನಪದ ಗಾಯಕರಾದ ಡಾ|| ಜೋಗಿಲ ಸಿದ್ಧರಾಜು ಮತ್ತು ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಸದಸ್ಯೆಯಾದ ವಿದುಷಿ ಉಷಾ ಬಸಪ್ಪ ಉಪಸ್ಥಿತರಿರುತ್ತಾರೆ.

ಅಂದಿನ ಕಾರ್ಯಕ್ರಮದಲ್ಲಿ ಮೊದಲಿಗೆ ಅಕಾಡೆಮಿಯ ವಿದ್ಯಾರ್ಥಿಗಳಿಂದ ಭರತನಾಟ್ಯ ಪ್ರದರ್ಶನ ಮತ್ತು ಕು|| ಆದ್ಯ ಮಯ್ಯಾ ನೃತ್ಯ ಕಾರ್ಯಕ್ರಮದ ಸೂತ್ರಧಾರಿಯಾಗಿ ಹಾಗೂ ತಾನೂ ಕೂಡಾ ಪ್ರಸಿದ್ಧ ಹರಿದಾಸರ ಕೀರ್ತನೆಗಳಿಗೆ ನೃತ್ಯ ಮಾಡಲಿದ್ದಾಳೆ. ಈ ಕಾರ್ಯಕ್ರಮದ ಮತ್ತೊಂದು ವಿಶೇಷ ಆಕರ್ಷಣೆಯಾಗಿ ನೃತ್ಯ ಸಹೋದರಿಯರಾದ ವಿದುಷಿ ಗಾಯತ್ರಿ ಮಯ್ಯ ಮತ್ತು ವಿದುಷಿ ಪವಿತ್ರಾ ಪ್ರಶಾಂತ್ ಇವರಿಂದ ಮೋಹಿನಿ - ಭಸ್ಮಾಸುರ ನೃತ್ಯ ರೂಪಕಗಳು ಜರುಗಲಿದ್ದು, ಈ ಕಾರ್ಯಕ್ರಮಕ್ಕೆ ಕಲಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಲಾವಿದರನ್ನು ಪ್ರೋತ್ಸಾಹಿಸಬೇಕೆಂದು ಸಂಸ್ಥೆಯ ನಿರ್ದೇಶಕಿ ಗಾಯತ್ರಿ ಮಯ್ಯ ವಿನಂತಿಸಿದ್ದಾರೆ.





# ಅತ್ತು ಬಿಡು ಮನಸ್ಸೇ..... ಹಗುರಾಗುವೆ.....!

ಎಷ್ಟು ದಿನ ಹೀಗೆ ಭಾರ ಹೊತ್ತುಕೊಂಡು ತಿರುಗುವೆ...? ಎಲ್ಲರ ಮುಂದೆ ಗಟ್ಟಿಯಾಗಿರುವಂತೆ ನಟಿಸಿ ಒಳಗೊಳಗೆ ಕುಸಿದು ಹೋಗುತ್ತಿರುವೆ. ಇಂದು ಅತ್ತುಬಿಡು ಮನಸ್ಸೇ... ನಿಧಾನವಾಗಿ ನಿನ್ನನ್ನ ನೀನೆ ಅಪ್ಪಿಕೊಳ್ಳುವವರೆಗೂ.. ನಾಳಿನಾ ಬೆಳಕು ನಿನಗಾಗಿ ಹೊಸ ಕನಸನ್ನ ಹೊತ್ತು ತರುತ್ತದೆ. ಬಾರ ಇಳಿದ ಹೃದಯದಿಂದ ಮತ್ತೆ ಎದ್ದು ನಿಲ್ಲುವ ಶಕ್ತಿ ನಿನ್ನಲ್ಲಿದೆ. ಅತ್ತು ಬಿಡು ಮನಸ್ಸೇ.. ಮನಸಾರೆ ಅತ್ತುಬಿಡು ..... ಹಗುರಾಗುವೆ....

> **ಮನಸ್ಸಿನ ವೇದನೆ ....**
> **ಅತ್ತು ಬಿಡು ಮನಸ್ಸೇ.....**
> **ಮನಸಾರೆ ಅತ್ತುಬಿಡು.....**
> **ಕಣ್ಣೀರು ಆಗಿರುವ ನೋವನ್ನ ಹೊರಗೆ ಬಿಡು......**
> **ಮುದ್ದು ಮನಸ್ಸೇ....**

ಸ್ನೇಹಿತರೆ.... ಪ್ರತಿಯೊಬ್ಬರಲ್ಲಿ ಒಂದು ಮನಸ್ಸಿದೆ. ಆ ಪುಟ್ಟ ಮನಸ್ಸಿನಲ್ಲಿ ಇರುವುದು ಒಂದೇ.... ಅದು ನೋವು. ಅದು ಹೇಳಿಕೊಳ್ಳಲಾಗದ ನೋವು, ದುಃಖ,ಹತಾಶೆ, ಬೇಜಾರ...

ಕೆಲವೊಮ್ಮೆ ಮನಸ್ಸಿಗೆ ಏನೂ ಬೇಕಾಗುವುದಿಲ್ಲ. ಯಾರೊಂದಿಗೂ ಮಾತನಾಡಬೇಕು ಅನ್ನಿಸುವುದಿಲ್ಲ. ಯಾರಿಗೂ ನಮ್ಮ ನೋವನ್ನು ಹೇಳಿಕೊಳ್ಳಬೇಕು ಅನ್ನಿಸುವುದಿಲ್ಲ. ಸುಮ್ಮನೆ ಒಂದು ಮೂಲೆಯಲ್ಲಿ ಕುಳಿತು, ಯಾರಿಗೂ ಕಾಣದಂತೆ ಅತ್ತುಬಿಡಬೇಕು ಅನ್ನಿಸುತ್ತದೆ. ಆದರೆ ನಾವು ಅಳುವುದಿಲ್ಲ. ನಾನು ಗಟ್ಟಿಯಾಗಿರಬೇಕು ನನ್ನ ನೋವನ್ನು ಯಾರಿಗೂ ತೋರಿಸಬಾರದು? ಎಲ್ಲವನ್ನೂ ನಾನೇ ನಿಭಾಯಿಸಬೇಕು?ಎಂದು ನಮ್ಮನ್ನೇ ನಾವು ಸಮಾಧಾನಪಡಿಸಿಕೊಳ್ಳುತ್ತೇವೆ .ಹೀಗೆ ಸಮಾಧಾನ ಮಾಡಿಕೊಳ್ಳುತ್ತಾ ಜೀವನ ಸಾಗಿಸುತ್ತೇವೆ... ಆದರೂ ಒಂದು ದಿನ ಎಲ್ಲರೂ ಮಲಗಿದ ಮೇಲೆ ನಮ್ಮ ಜೊತೆ ನಮ್ಮ ಮನಸ್ಸು ಮಾತ್ರ ಉಳಿಯುತ್ತದೆ. ಆಗ ಹಗಲು ಮರೆ ಮಾಡಿದ ನೋವುಗಳು ಒಂದೊಂದಾಗಿ ನೆನಪಾಗುತ್ತವೆ. ಯಾರೋ ಆಡಿದ ಒಂದು ಮಾತು. ನಮ್ಮನ್ನು ಬಿಟ್ಟು ಹೋದ ಒಬ್ಬ ವ್ಯಕ್ತಿ.. ಈಡೇರದ ಒಂದು ಕನಸು..ನಾವು ಬಯಸಿದರು ಬದಲಾಗದ ಒಂದು ಸಂಬಂಧ.. ಎಷ್ಟೇ ಪ್ರಯತ್ನಿಸಿದರು ಬದಲಾಗದ ಒಂದು ಪರಿಸ್ಥಿತಿ...ಎಲ್ಲವೂ ಒಟ್ಟಿಗೆ ಬಂದು ಎದೆ ಮೇಲೆ ಬಂದು ಕುಳಿತುಕೊಳ್ಳುತ್ತವೆ. ಆಗ ಅಳು ಬಂದರು ನಾವು ಅಳುವುದಕ್ಕೆ ಹಿಂಜರಿಯುತ್ತೇವೆ. ಆದರೆ ಇದರ ನೋವನ್ನು ನಮ್ಮ ಮನಸ್ಸು ಮಾತ್ರ ಅನುಭವಿಸುತ್ತಲೇ ಇರುತ್ತದೆ. ಆದರೆ ನಾವು ಮನಸ್ಸಿಗೆ ನೆಮ್ಮದಿ ಸಮಾಧಾನವನ್ನು ನೀಡುವುದೇ ಇಲ್ಲ. ಬದಲಿಗೆ ಮನಸ್ಸಿಗೆ ಹೆಚ್ಚು ಒತ್ತಡವನ್ನ ಹಾಕುತ್ತಲೇ ಇರುತ್ತೇವೆ.ಎಲ್ಲಾ ಒತ್ತಡ ಜಾಸ್ತಿಯಾದಾಗ ನಾವು ಅಸಹಾಯಕ ಸ್ಥಿತಿಯಲ್ಲಿ ಬಂದಾಗ ನಮಗೆ ಅನಿಸುವುದು ಒಂದೇ.... ಅದು ಅತ್ತು ಬಿಡು ಮನಸ್ಸೇ... ಅತ್ತುಬಿಡು. ಮನಸಾರೆ ಅತ್ತು ಬಿಡು ಎಂದು. ಭೂಮಿ ಮೇಲೆ ಹುಟ್ಟಿದ ಪ್ರತಿಯೊಬ್ಬರಿಗೂ ಅವರದೇ ಆದ ನೋವು ದುಃಖ ಇದ್ದೇ ಇರುತ್ತದೆ. ಅತಿಯಾದ ಬೇಸರ, ನೋವುಗಳಾದಾಗ ನಮ್ಮಲ್ಲಿ ನಾವು ದುಃಖವನ್ನು ಅನುಭವಿಸುತ್ತಿರುತ್ತೇವೆ. ಕೆಲವೊಮ್ಮೆ ಯಾರಿಗೂ ಹೇಳಲಾಗದಷ್ಟು ನೋವಿರುತ್ತದೆ. ಕಣ್ಣ ಮುಂದೆ ಎಲ್ಲವೂ ಇದ್ದರೂ ಮನಸ್ಸಿನೊಳಗೆ ಮಾತ್ರ ಏನೂ ಕಳೆದುಕೊಂಡ ಭಾವನೆ. ಸುತ್ತಲೂ ಎಲ್ಲಾರಿದ್ದರು ನಮ್ಮ ನೋವನ್ನು ಅರ್ಥ ಮಾಡಿಕೊಳ್ಳುವವರು ಯಾರು ಇಲ್ಲ ಅಂತ ಅನಿಸಿದಾಗ ಒಬ್ಬಂಟಿಯಾಗಿ ಮನಸಾರೆ ಅಳಬೇಕು ಅನಿಸುತ್ತದೆ. ಸ್ನೇಹಿತರೆ...ಅಳು ದೌರ್ಬಲ್ಯವಲ್ಲ.. ಅದು ಆತ್ಮದ ಶುದ್ಧೀಕರಣ. ಮಳೆ ಬಂದು ಹೋದ ಮೇಲೆ ಭೂಮಿ ಹೇಗೆ ತಂಪಾಗುತ್ತದೆಯೋ ಹಾಗೆ ಕಣ್ಣೀರು ಹರಿದ ಮೇಲೆ ಮನಸ್ಸು ಹಗುರವಾಗುತ್ತದೆ. ಆದರೆ ಮನಸ್ಸಿನ ನೋವುನ್ನ ಹಿಡಿದಿಟ್ಟುಕೊಂಡಷ್ಟು ನಮಗೆ ವಿಷವಾಗುತ್ತದೆ. ಹರಿಬಿಟ್ಟ ಕಣ್ಣೀರು ಔಷಧಿಯಾಗುತ್ತದೆ. ಕೆಲವೊಮ್ಮೆ ನಗು ನಮ್ಮ ನೋವನ್ನು ಮರೆ ಮಾಡುತ್ತದೆ. ಆದರೆ ಕಣ್ಣೀರು ಅದನ್ನು ತೊಳೆದು ಬಿಡುತ್ತದೆ.. ಆದ್ದರಿಂದ ಅತಿಯಾದ ನೋವು ದುಃಖವಾದಾಗ ಅಳುವುದು ಒಂದು ದಿವ್ಯ ಔಷಧಿ ಇದ್ದಂತೆ. ಹಾಗಾದರೆ...ನಾವು ಈ ಅಳು ಅನ್ನೋ ಔಷಧಿಯನ್ನು ಯಾವಾಗ ಬಳಸಬಹುದು ಎಂದಾದರೆ.... ನಿನ್ನನ್ನ ನೋಯಿಸಿದವರಿಗಾಗಿ ಅಳು. ನಿನ್ನಿಂದ ದೂರವಾದವರಿಗಾಗಿ ಅಳು.






ಡಾ. ಪ್ರಸನ್ನ ನಾಡಿಗರ್

ನೀನು ಕಳೆದುಕೊಂಡ ಸಂತೋಷಕ್ಕಾಗಿ ಅಳು. ನಿನ್ನ ಮನಸ್ಸು ಯಾರಾದರೂ ಮುರಿದಾಗ ಆಗ ಅಳು. ಎಲ್ಲರಿಗಾಗಿ ಬದುಕುತ್ತಾ ನಿನ್ನನ್ನೇ ಮರೆತಿದ್ದಕ್ಕಾಗಿ ಅಳು. ಎಲ್ಲಾ ನೋವನ್ನ ಸಹಿಸಿದ್ದಕ್ಕಾಗಿ ಅಳು. ನಿನ್ನತನವನ್ನು ಕಳೆದುಕೊಂಡಿದ್ದಕ್ಕಾಗಿ ಅಳು...

ಇಷ್ಟೆಲ್ಲ ನೋವುಗಳಿಗೆ ದುಃಖಗಳಿಗೆ ಅತ್ತಾಗ ಮನಸ್ಸಿಗೂ ಮತ್ತು ನಮ್ಮ ಜೀವಕ್ಕೂ ನೆಮ್ಮದಿ, ಸಿಗುತ್ತದೆ ಮತ್ತು ಶಾಂತಿ ನೆಲೆಸುತ್ತದೆ. ಆಗ ಹೊಸದೊಂದು ಬೆಳಕು ಉದ್ಭವಿಸುತ್ತದೆ.

ಅದೇನು ಗೊತ್ತಿಲ್ಲ ಮನಸ್ಸು ಹಗುರಾದಾಗ ನಮ್ಮ ಜೀವ ಮತ್ತು ಜೀವನಕ್ಕೆ ಏನೋ ಒಂದು ಹೊಸ ಹುರುಪು, ಶಕ್ತಿ ದೊರೆಯುತ್ತದೆ . ಮನಸಾರ ಅಳುವುದರಿಂದ ಏನೋ ಒಂದು ಹೊಸ ಚೈತನ್ಯ ಮೂಡುತ್ತದೆ...ಹೌದು ಅಲ್ಲವೇ.... ಇಂದು ಪ್ರಪಂಚದಲ್ಲಿ ನೋವು, ದುಃಖ ಇಲ್ಲದ ಮನುಷ್ಯನೇ ಇಲ್ಲ... ನಮ್ಮ ನೋವು ನಲಿವಿನ ಮನಸ್ಸಿನ ಒದ್ದಾಟದಲ್ಲಿ ದಿನಗಳು ಕಳೆಯುತ್ತವೆ. ನಗು ಮುಖದಲ್ಲಿರುತ್ತದೆ ಆದರೆ ಮನಸ್ಸಿನೊಳಗೆ ಸಾವಿರ ನೋವುಗಳು ಮೌನವಾಗಿ ಅಳುತ್ತಿರುತ್ತವೆ. ಕೆಲವೊಮ್ಮೆ ನಮ್ಮ ಕಣ್ಣೀರೇ ನಮ್ಮ ಮನಸ್ಸಿನ ಮಾತು ಆಗುತ್ತದೆ . ನಮಗೆ ಹೇಳಲಾಗದ ನೋವನ್ನು ನಮ್ಮ ಕಣ್ಣೀರು ಹೇಳುತ್ತದೆ. ಮರೆಮಾಚಿದ ನಮ್ಮ ನೋವನ್ನು ಕಣ್ಣೀರು ಹೊರಹಾಕುತ್ತದೆ. ಎಷ್ಟೋ ದಿನಗಳಿಂದ ಎದೆಯೊಳಗೆ ಬಚ್ಚಿಟ್ಟಿದ್ದ ಭಾರವನ್ನು ಒಂದಷ್ಟು ಕಣ್ಣೀರು ತೊಳೆದುಹಾಕುತ್ತದೆ. ಆದ್ದರಿಂದ ಮನಸಾರೆ ಅಳುವುದು ಜೀವನಕ್ಕೂ ಮತ್ತು ಆರೋಗ್ಯಕ್ಕೂ ತುಂಬಾ ಉತ್ತಮ ಅದಕ್ಕೆ ಹೇಳುವುದು ಅತ್ತು ಬಿಡು ಮನಸ್ಸೇ ಮನಸಾರೆ ಅತ್ತೂಬಿಡು..... ಎಂದು ನಾವು ಮನಸ್ಸನ್ನ ಹೇಗೆ ಸಂತೋಷ, ಖುಷಿಯಾಗಿ ಇಡಬಹುದು..? ಅದಕ್ಕಾಗಿ ನಾವು ಏನೂ ಮಾಡಬಹುದು ಎಂದು ನೋಡುವುದಾದರೆ , ಈ ಕೆಳಗಿನ ವಿಷಯಗಳು ನಮಗೆ ಸಹಾಯ ಮಾಡಬಹುದು..

**1.ಭಾವನೆಗಳನ್ನು ಹೊರಹಾಕಿ ಅಳುವುದು ತಪ್ಪಲ್ಲ:** ಮನಸ್ಸಿನಲ್ಲಿ ನೋವನ್ನು ಅದುಮಿಟ್ಟುಕೊಳ್ಳುವ ಬದಲು ಅತ್ತುಬಿಡುವುದು ಒಳ್ಳೆಯದು. ನಾವು ಅತ್ತಷ್ಟು ನಮ್ಮ ಮನಸ್ಸಿನಲ್ಲಿರುವ ನೋವು ಅವರ ಹೋಗುತ್ತದೆ ಆ ಕಣ್ಣೀರ ಮುಖಾಂತರ ನಮ್ಮ ನೋವೆಲ್ಲಾ ಹರಿದು ಹೋಗಿ ಮನಸ್ಸಲ್ಲಿ ಹೊಸ ಬೆಳಕು ಮೂಡುತ್ತದೆ.

**2.ದೀರ್ಘವಾಗಿ ಉಸಿರಾಡಿ :** ಕಣ್ಣೀರು ಉಳಿಸಿಕೊಂಡು ನಂತರ ನೆಮ್ಮದಿಯಿಂದ ದೀರ್ಘವಾಗಿ ಉಸಿರಾಡು . ಆಗ ಮನಸ್ಸು ಹಗುರವಾದಂತೆ ಆಗುತ್ತದೆ. ಹೀಗೆ ಹತ್ತು ನಿಮಿಷಗಳ ಕಾಲ ದೀರ್ಘವಾಗಿ ಉಸಿರಾಟದಿಂದ ಮೈ ಮನಸ್ಸು ಹಗುರವಾಗಿ ತಲೆಯ ಭಾರ ಕಡಿಮೆಯಾಗುತ್ತದೆ.

**3.ನೀರನ್ನು ಕುಡಿಯಿರಿ:** ಒಂದು ಲೋಟ ಕಣ್ಣೀರು ಕುಡಿಯುವುದರಿಂದ ದೇಹ ಮತ್ತು ಮನಸು ಶಾಂತವಾಗುತ್ತದೆ. ನೀರನ್ನು ಕುಡಿಯುವಾಗ ಅದನ್ನು ಆನಂದಿಸಿ ನಿಧಾನವಾಗಿ ಕುಡಿಯಿರಿ ಎಷ್ಟು ಮನಸ್ಸಿಗೆ ತೃಪ್ತಿ ಸಿಗುತ್ತದೆ.

**4.ಆಪ್ತರೊಂದಿಗೆ ಹಂಚಿಕೊಳ್ಳಿ:** ನಿಮ್ಮ ನೋವನ್ನು ಅರ್ಥಮಾಡಿಕೊಳ್ಳುವ ಸ್ನೇಹಿತರು ಅಥವಾ ಕುಟುಂಬದವರೊಂದಿಗೆ ಮುಕ್ತವಾಗಿ ಮಾತನಾಡಿ. ನಿಮ್ಮ ಮನಸ್ಸಿಗೆ ಯಾರು ಸರಿ ಅನಿಸುತ್ತಾರೋ ಅವರೊಂದಿಗೆ ಮನಸ್ಸು ಬಿಚ್ಚಿ ಮಾತನಾಡಿ ಆಗ ಮನಸ್ಸಿಗೆ ಸಮಾಧಾನ ಸಿಗುತ್ತೆ.

**5.ಸಂಗೀತ ಆಲಿಸಿ :** ಮನಸ್ಸನ್ನು ಶಾಂತಗೊಳಿಸುವ ಮೆಲೋಡಿ ಹಾಡುಗಳು ಅಥವಾ ವಾದ್ಯಸಂಗೀತವನ್ನು ಕೇಳಿ. ಇನ್ನು ನಿಮಗೆ ಇಷ್ಟವಾದ ಹಾಡು, ಭಾವಗೀತೆ, ಸಂಗೀತವನ್ನು ಆಲಿಸಿ.

**6.ವಿರಾಮ ತಗೊಳ್ಳಿ : ನಿಮಗಿಷ್ಟವಾದ** ಹವ್ಯಾಸಗಳಲ್ಲಿ ತೊಡಗಿಕೊಳ್ಳಿ ಅಥವಾ ಸ್ವಲ್ಪ ಸಮಯ ಪ್ರಕೃತಿಯ ಮಡಲಿನಲ್ಲಿ ಕಳೆಯಿರಿ. ಸುಂದರ ಪರಿಸರದಲ್ಲಿ ವಿಹರಿಸಿ ಮನಸ್ಸಿಗೆ ನೆಮ್ಮದಿ ಸಿಗುತ್ತದೆ.ಯಾವದೇ ಪರಿಸ್ಥಿತಿ ಇರಲಿ, ಯಾವುದು ಶಾಶ್ವತವಲ್ಲ.

ನಿಮ್ಮ ಮನಸ್ಸನ್ನು ಜಾಗರೂಕತೆಯಿಂದ ನೋಡಿಕೊಳ್ಳಿ, ಎಲ್ಲವೂ ಸರಿಯಾಗುತ್ತದೆ. ನಿಮಗೆ ತಡೆಯಲಾಗದ ನೋವು ಇದ್ದರೆ ಅತ್ತು ಬಿಡಿ ಆಗ ಮನಸ್ಸು ಹಗುರಗುತ್ತದೆ.

ಮನಸ್ಸೇ, ನಿನಗೆ ಯಾವಾಗಲಾದರೂ ನೋವು ಆದಾಗ ಕಣ್ಣೀರನ್ನು ಹೊರಹಾಕು ಯಾಕೆಂದರೆ ಕೆಲವೊಮ್ಮೆ ನಮ್ಮನ್ನು ಸಮಾಧಾನಪಡಿಸಲು ಜಗತ್ತಿನಲ್ಲಿ ಯಾರೂ ಇರದಿದ್ದರೂ,ನಮ್ಮ ಕಣ್ಣೀರು ಇರುತ್ತದೆ. ಈ ಕಣ್ಣೀರು ನಮ್ಮ ಮನಸ್ಸಿಗೆ ಹೇಳುವ ಒಂದು ಮಾತಿದೆ? ಇಷ್ಟು ದಿನ ಹೊತ್ತುಕೊಂಡಿದ್ದೀಯಲ್ಲ? ಈಗ ಸ್ವಲ್ಪ ಹಗುರಾಗು ಎಂದು ಎಂತಹ ಅದ್ಭುತವಾದ ಸಂಬಂಧ ಮನಸ್ಸಿಗೂ ಮತ್ತು ಕಣ್ಣೀರಿಗೂ......ಅಲ್ಲವೇ.......?

# ಸ್ವಯಂಪ್ರತಿರೋಧಕ ಕಾಯಿಲೆಗಳಲ್ಲಿ ಆರಂಭಿಕ ಗುರುತಿಸುವಿಕೆ, ಜೀವನಶೈಲಿ ಮತ್ತು ಆಯುರ್ವೇದದ ಪಾತ್ರ

ಸ್ವಯಂಪ್ರತಿರೋಧಕ ಕಾಯಿಲೆಗಳು ನಿಧಾನವಾಗಿ ಬೆಳೆಯುವ ಸಾಧ್ಯತೆ ಇರುವುದರಿಂದ, ಆರಂಭಿಕ ಹಂತದಲ್ಲೇ ಅವುಗಳ ಲಕ್ಷಣಗಳನ್ನು ಗುರುತಿಸುವುದು, ಆರೋಗ್ಯಕರ ಜೀವನಶೈಲಿಯನ್ನು ರೂಢಿಸಿಕೊಳ್ಳುವುದು ಮತ್ತು ಅಗತ್ಯ ವೈದ್ಯಕೀಯ ಆರೈಕೆಯನ್ನು ಪಡೆಯುವುದು ಮುಖ್ಯವಾಗಿದೆ. ಆಹಾರ, ನಿದ್ರೆ, ದೈಹಿಕ ಚಟುವಟಿಕೆ ಮತ್ತು ಒತ್ತಡ ನಿರ್ವಹಣೆಯಂತಹ ಅಂಶಗಳು ಒಟ್ಟಾರೆ ಆರೋಗ್ಯವನ್ನು ಬೆಂಬಲಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

ಈ ಹಿನ್ನೆಲೆಯಲ್ಲಿ ಆಯುರ್ವೇದದ ವೈಯಕ್ತಿಕ ಆಧಾರಿತ ಆರೋಗ್ಯಪಾಲನೆ ಮತ್ತು ಆಧುನಿಕ ವೈದ್ಯಕೀಯ ಆರೈಕೆಯ ಸಮನ್ವಯದ ಕುರಿತು ಎಸ್‌ಡಿಎಂ ಕಾಲೇಜ್ ಆಫ್ ಆಯುರ್ವೇದ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ, ಉಡುಪಿಯ ಸ್ವಸ್ಥವೃತ್ತ ಮತ್ತು ಯೋಗ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ. ಸೌಮ್ಯಾ ಭಟ್ ಅವರೊಂದಿಗೆ ನಡೆಸಿದ ಪ್ರಶ್ನೋತ್ತರ ಇಲ್ಲಿದೆ. ಸ್ವಯಂಪ್ರತಿರೋಧಕ ಕಾಯಿಲೆಗಳು ಅನೇಕ ಬಾರಿ ನಿಧಾನವಾಗಿ ಬೆಳೆಯುತ್ತವೆ. ಆನುವಂಶಿಕ ಪ್ರವೃತ್ತಿಯ ಜೊತೆಗೆ ಆಹಾರ ಪದ್ಧತಿ, ಜೀವನಶೈಲಿ, ಒತ್ತಡ, ನಿದ್ರೆ ಹಾಗೂ ಇತರ ಪರಿಸರೀಯ ಅಂಶಗಳು ಕೂಡ ಅವುಗಳ ಬೆಳವಣಿಗೆಯಲ್ಲಿ ಪಾತ್ರ ವಹಿಸಬಹುದು.

ಆದ್ದರಿಂದ ದೇಹದಲ್ಲಿ ಕಂಡುಬರುವ ಅಸಾಮಾನ್ಯ ಲಕ್ಷಣಗಳನ್ನು ಆರಂಭದಲ್ಲಿಯೇ ಗಮನಿಸಿ, ಅಗತ್ಯವಿದ್ದಲ್ಲಿ ಸೂಕ್ತ ವೈದ್ಯಕೀಯ ತಪಾಸಣೆ ಮಾಡಿಸಿಕೊಳ್ಳುವುದು ಮುಖ್ಯ. ಸಮತೋಲಿತ ಆಹಾರ, ನಿಯಮಿತ ದೈಹಿಕ ಚಟುವಟಿಕೆ, ಸಮರ್ಪಕ ನಿದ್ರೆ, ಆರೋಗ್ಯಕರ ದೇಹ ತೂಕ ಮತ್ತು ಒತ್ತಡ ನಿರ್ವಹಣೆಯಂತಹ ಕ್ರಮಗಳು ಒಟ್ಟಾರೆ ಆರೋಗ್ಯ ಹಾಗೂ ದೇಹದ ಸಾಮಾನ್ಯ ರೋಗನಿರೋಧಕ ಕಾರ್ಯವನ್ನು ಬೆಂಬಲಿಸಬಹುದು.

ಸೂರ್ಯ ಮುಳುಗದ ಸಾಮ್ರಾಜ್ಯ ಎಂದು ಸೊಕ್ಕಿನಿಂದ ಮೆರೆಯುತ್ತಿದ್ದ ಬ್ರಿಟಿಷರಿಗೆ ಸೋಲಿನ ರುಚಿ ತೋರಿಸಿದ ದ್ಯೋತಕವಾಗಿ ಆಚರಿಸುವ ಕಿತ್ತೂರು ಉತ್ಸವ

# ಕಿತ್ತೂರು ಉತ್ಸವಕ್ಕೆ ಬರಲಿ ಮೈಸೂರು ದಸರಾ ಮೆರುಗು

**ಉದಯವಾಹಿನಿ, ಬೆಳಗಾವಿ**

ಐತಿಹಾಸಿಕ ಕಿತ್ತೂರು ಉತ್ಸವಕ್ಕೆ ಭರದ ಸಿದ್ಧತೆ ಶುರುವಾಗಿದೆ. ಈ ಬಾರಿ ಮೈಸೂರು ದಸರಾ ಮೆರವಣಿಗೆ ಮಾದರಿಯಲ್ಲಿ, ಆನೆ ಮೇಲೆ ಅಂಬಾರಿ, ಅದರಲ್ಲಿ ವೀರರಾಣಿ ಚನ್ನಮ್ಮಾಜಿ ಬೆಳ್ಳಿ ಮೂರ್ತಿ ಇಟ್ಟು ಮೆರವಣಿಗೆ ನಡೆಸಬೇಕು. ಆಗ ಮಾತ್ರ ಉತ್ಸವಕ್ಕೆ ಮೈಸೂರು ದಸರಾ ಮೆರುಗು ಬರುತ್ತದೆ ಎಂಬ ಒತ್ತಾಯ ಕೇಳಿ ಬಂದಿದೆ.



ಹೌದು, ಪ್ರತಿ ಬಾರಿಯೂ ಜಿಲ್ಲಾಡಳಿತ, ಜಿಲ್ಲಾ ಉಸ್ತುವಾರಿ ಸಚಿವರು ಮೈಸೂರು ದಸರಾ ಮಾದರಿ ಕಿತ್ತೂರು ಉತ್ಸವ ಆಚರಿಸುವುದಾಗಿ ಹೇಳುತ್ತಾರೆ. ಆದರೆ, ಅದು ಕಾರ್ಯರೂಪಕ್ಕೆ ಮಾತ್ರ ಬರುತ್ತಿಲ್ಲ. ಮಂಗಳವಾರ ಕಿತ್ತೂರಿನಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ನಿಚ್ಚಣಿಕೆಯ ಗುರು ಮಡಿವಾಳೇಶ್ವರ ಮಠದ ಪಂಚಾಕ್ಷರಿ ಸ್ವಾಮೀಜಿ ಈ ಕುರಿತು ಪ್ರಸ್ತಾಪ ಮಾಡಿದರು.

**1.** ಉತ್ಸವದ ಯಶಸ್ಸಿಗೆ 18 ಸಮಿತಿ
**2.** ಕಿತ್ತೂರು ಉತ್ಸವ ಆಚರಿಸುವುದು
**3.** ಯಶಸ್ವಿಗಾಗಿ ವಿಜಯ ಜ್ಯೋತಿ

"ಕೇವಲ ಬಾಯಿ ಮಾತಿನಲ್ಲಿ ಮೈಸೂರು ದಸರಾ ಮಾದರಿ ಆಗುವುದು ಬೇಡ. ರಾಣಿ ಚನ್ನಮ್ಮನವರ 25 ಕೆಜಿ ಬೆಳ್ಳಿ ಮೂರ್ತಿಯನ್ನು ಮಾಡಿಸಬೇಕು. ಅದನ್ನು ಅಂಬಾರಿ ಒಳಗೆ ಇಟ್ಟು ಭವ್ಯ ಮೆರವಣಿಗೆ ನಡೆಸಬೇಕು. ಅಂದಾಗ ಮೈಸೂರು ದಸರಾ ಮಾದರಿ ಅನಿಸುತ್ತದೆ. 25 ಕೆಜಿ ಬೆಳ್ಳಿಗೆ 60 ಲಕ್ಷ ರೂ. ಖರ್ಚಾಗುತ್ತದೆ. ಅದನ್ನು ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು ಕೂಡಿಕೊಂಡು ಮಾಡಿಸಬೇಕು. ಅದೇ ರೀತಿ ಮೈಸೂರು ದಸರಾ ಮೆರವಣಿಗೆಯಲ್ಲಿ 25 ಆನೆಗಳು ಇರುತ್ತವೆ. ನಮ್ಮ ಕಿತ್ತೂರು ಉತ್ಸವದಲ್ಲಿ ಒಂದು ಆನೆಯನ್ನಾದರೂ ತರಿಸಬೇಕು ಎಂದು ಪಂಚಾಕ್ಷರಿ ಸ್ವಾಮೀಜಿ" ಆಗ್ರಹಿಸಿದರು.

ಶಾಸಕ ಬಾಬಾಸಾಹೇಬ ಪಾಟೀಲ ಅವರ ಸಲಹೆಯಂತೆ ಜಾನುವಾರು ಜಾತ್ರೆ ಇಟ್ಟುಕೊಳ್ಳಲಾಗಿದೆ. ಪ್ರಸಕ್ತ ಸಾಲಿನಲ್ಲಿ ಸಾಧ್ಯವಾದರೆ ಮಕ್ಕಳಿಗಾಗಿ ವಿಜ್ಞಾನ ಪ್ರದರ್ಶನ ಆಯೋಜಿಸುವ ಬಗ್ಗೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.
– ಸತೀಶ ಜಾರಕಿಹೊಳಿ, ಸಚಿವ

**ಥೀಮ್ ಪಾರ್ಕ್ ನಿರ್ಮಾಣ**
ಕಾರ್ಯಕ್ರಮ ಆಯೋಜಿಸುವ ಮೂಲಕ ರಾಣಿ ಚನ್ನಮ್ಮಾಜಿಗೆ ಗೌರವ ಸಲ್ಲಿಸಲಾಗುವುದು. ಕಿತ್ತೂರಿನ ಇತಿಹಾಸದ ಬಗ್ಗೆ ಹೆಚ್ಚಿನ ಅಧ್ಯಯನಕ್ಕೆ ಕ್ರಮ ವಹಿಸಲಾಗುವುದು. ಮೂವತ್ತು ಕೋಟಿ ರೂ ಅನುದಾನದಲ್ಲಿ ಥೀಮ್ ಪಾರ್ಕ್ ನಿರ್ಮಾಣಕ್ಕೆ ಯೋಜನೆ ಸಿದ್ಧಪಡಿಸಲಾಗುತ್ತಿದೆ ಎಂದು ತಿಳಿಸಿದರು.

ಸೂರ್ಯ ಮುಳುಗದ ಸಾಮ್ರಾಜ್ಯ ಎಂದು ಸೊಕ್ಕಿನಿಂದ ಮೆರೆಯುತ್ತಿದ್ದ ಬ್ರಿಟಿಷರಿಗೆ ಸೋಲಿನ ರುಚಿ ತೋರಿಸಿದ ದ್ಯೋತಕವಾಗಿ ಆಚರಿಸುವ

ಕಿತ್ತೂರು ಉತ್ಸವ ರಾಷ್ಟ್ರ ಮಟ್ಟಕ್ಕೆ ಕೊಂಡೊಯ್ಯಬೇಕಿದೆ. ಅಲ್ಲದೇ ಇತಿಹಾಸದಲ್ಲಿ 1857ರ ಬದಲು 1823 ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಎಂದು ಉಲ್ಲೇಖಿಸಬೇಕಿದೆ. ಉತ್ತರ ಭಾರತದ ಸ್ವಾತಂತ್ರ್ಯ ಹೋರಾಟಗಾರರಿಗೆ ಸಿಕ್ಕಷ್ಟೇ ಮಾನ್ಯತೆ ಇಲ್ಲಿನ ವೀರರಿಗೆ ಸಿಗಬೇಕಿದೆ. ಆ ನಿಟ್ಟಿನಲ್ಲಿ ಕೇಂದ್ರ, ರಾಜ್ಯ ಸರ್ಕಾರ ಪ್ರಯತ್ನಿಸಬೇಕು ಎನ್ನುವುದು ಈ ಭಾಗದ ಜನರ ಆಗ್ರಹ. "ಉತ್ಸವದಲ್ಲಿ ಸ್ಥಳೀಯ ಕಲಾವಿದರಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು. ಸರ್ಕಾರದಿಂದ ಆಯೋಜಿಸುವ ಉತ್ಸವದ ಯಶಸ್ಸಿಗಾಗಿ ಸಾರ್ವಜನಿಕರ ಸಹಭಾಗಿತ್ವವು ಅಗತ್ಯವಾಗಿದ್ದು, ಮೂರು ದಿನಗಳ ಕಾಲ ಜರುಗುವ ವಿವಿಧ ಕಾರ್ಯಕ್ರಮ, ವಿಚಾರ ಸಂಕೀರ್ಣಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಭಾಗವಹಿಸಬೇಕು. ಈ ಮೂಲಕ ಇದು ಜನೋತ್ಸವ ಆಗಬೇಕು" ಎಂದು ಸತೀಶ ಜಾರಕಿಹೊಳಿ ಅಭಿಪ್ರಾಯ ಪಟ್ಟರು.

ಶಾಸಕ ಬಾಬಾಸಾಹೇಬ ಪಾಟೀಲ ಮಾತನಾಡಿ, "ಈ ಬಾರಿಯೂ ಕಿತ್ತೂರು ಉತ್ಸವಕ್ಕೆ ಸರ್ಕಾರದಿಂದ 5 ಕೋಟಿ ಅನುದಾನ ಬರಲಿದೆ. ಜಾನುವಾರು ಜಾತ್ರೆ ಹಾಗೂ ಫಲಪುಷ್ಪ ಅಲಂಕಾರಕ್ಕೆ ಒತ್ತು ನೀಡಲಾಗುವುದು. ವಿಚಾರ ಸಂಕೀರ್ಣದಲ್ಲಿ ಕಿತ್ತೂರು ಭಾಗದ ಶಾಲಾ ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಲು ಸೂಚಿಸಲಾಗಿದ್ದು. ಅದ್ದೂರಿ ಕಿತ್ತೂರು ಉತ್ಸವಕ್ಕೆ ಎಲ್ಲರ ಸಹಕಾರ ಅಗತ್ಯವಾಗಿದೆ" ಎಂದರು.



## ಮಿನಿ ನ್ಯೂಸ್

### ಚುನಾವಣೆ ನಡೆಸಲು ಸರ್ಕಾರ ಸಿದ್ಧ: ಲಕ್ಷ್ಮಣ ಸವದಿ

**ಉದಯವಾಹಿನಿ, ಹಾಸನ**

ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾಪಂಚಾಯಿತಿ ಚುನಾವಣೆಗಳನ್ನು ಆದಷ್ಟು ಬೇಗ ನಡೆಸಲು ಸರ್ಕಾರ ತೀರ್ಮಾನಿಸಿದೆ. ಕೆಲವೇ ದಿನಗಳಲ್ಲಿ ಚುನಾವಣಾ ಅಧಿಸೂಚನೆ ಹೊರ ಬೀಳುವ ನಿರೀಕ್ಷೆಯಿದೆ ಎಂದು ಸಹಕಾರ ಸಚಿವ ಲಕ್ಷ್ಮಣ ಸವದಿ ಹೇಳಿದರು. ಹಾಸನದಲ್ಲಿ ಮಾತನಾಡಿದ ಅವರು, ಚುನಾವಣೆ ಎದುರಿಸಲು ಸರ್ಕಾರ ಸಿದ್ಧವಾಗಿದೆ ಎಂದು ತಿಳಿಸಿದರು. ಮೀಸಲಾತಿ ಅಂತಿಮ ಗೊಳಿಸುವ ಪ್ರಕ್ರಿಯೆ ನಡೆಯುತ್ತಿದ್ದು, ನ್ಯಾಯಾಲಯಕ್ಕೆ ದಾಖಲೆ ಸಲ್ಲಿಸ ಲಿದ್ದು, ಬಳಿಕ ಮೀಸಲಾತಿ ಅಂತಿಮ ಗೊಂಡು ಚುನಾವಣೆ ಪ್ರಕ್ರಿಯೆ ಮುಂದುವರಿಯಲಿದೆ. ರಾಜ್ಯದಲ್ಲಿ ಈ ಬಾರಿ 50 ವರ್ಷಗಳ ಅವಧಿಯಲ್ಲೇ ಅತ್ಯಂತ ಕಡಿಮೆ ಮಳೆಯಾಗಿರುವ ಪರಿಸ್ಥಿತಿ ನಿರ್ಮಾಣವಾಗಿದೆ. ಈಗಾಗಲೇ ಬರ ಘೋಷಣೆ ಪ್ರಕ್ರಿಯೆ ಆರಂಭವಾಗಿದೆ. ಬೆಳೆ ಹಾನಿ, ಜಾನುವಾರುಗಳ ರಕ್ಷಣೆ, ಕುಡಿಯುವ ನೀರು ಸೇರಿದಂತೆ ವಿವಿಧ ವಿಚಾರಗಳ ಕುರಿತು ಈಗಾಗಲೇ ಸಮೀಕ್ಷೆ ನಡೆಯುತ್ತಿದೆ. ಈ ಮಾಹಿತಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ತಿಳಿಸಿದರು. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಒಟ್ಟಾಗಿ ಬರ ಪರಿಸ್ಥಿತಿ ಎದುರಿಸಬೇಕಿದೆ. ರೈತರಿಗೆ ಆಗಿರುವ ನಷ್ಟವನ್ನು ಹಂತ ಹಂತವಾಗಿ ತುಂಬಿಸುವ ಜವಾಬ್ದಾರಿ ಎರಡೂ ಸರ್ಕಾರಗಳ ಮೇಲಿದೆ ಎಂದು ಹೇಳಿದರು.



### ಮೊಮ್ಮಗಳ ಮೇಲೆ ಅಜ್ಜನಿಂದ ಅತ್ಯಾಚಾರಕ್ಕೆ ಯತ್ನ!

**ಉದಯವಾಹಿನಿ, ಯಾದಗಿರಿ**

ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನಲ್ಲಿ ಮೊಮ್ಮಗಳ ಮೇಲೆ ತಾತನೇ ಅತ್ಯಾಚಾರಕ್ಕೆ ಯತ್ನಿಸಿರುವ ಘಟನೆ ಕೆಂಭಾವಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ತಾಯಿಯೊಬ್ಬರು ತಮ್ಮ ಮಗಳನ್ನು ತನ್ನ ತಾಯಿ ತಂದೆ ಮನೆಯಲ್ಲಿ ಬಿಟ್ಟು ಹೋಗಿದ್ದರು. ಈ ವೇಳೆ ಚೂರು ತೋರಿಸಿ ಮೊಮ್ಮಗಳ ಮೇಲೆ ಲೈಂಗಿಕ ದೌರ್ಜನ್ಯ ನಡೆಸಲು ಆಕೆಯ ಅಜ್ಜನೇ ಯತ್ನಿಸಿದ್ದಾನೆ. ಇದಕ್ಕೆ ಸಹಕರಿಸದಿದ್ದಾಗ ಆಕೆಯ ಬಾಯಿಗೆ ಬಟ್ಟೆ ತುರುಕಿ ಕೊಲೆ ಮಾಡಲು ಯತ್ನಿಸಿದ್ದಾನೆ. ಇದನ್ನು ಕಂಡ ವ್ಯಕ್ತಿಯೊಬ್ಬರು ಪೊಲೀಸರಿಗೆ ಮಾಹಿತಿ ನೀಡಿದ್ದರು. ಸದ್ಯ ಘಟನಾ ಸ್ಥಳಕ್ಕೆ ಬಂದ ಪೊಲೀಸರು ಆರೋಪಿ 75 ವರ್ಷದ ಶರಣಪ್ಪ ಎಂಬಾತನನ್ನು ವಶಕ್ಕೆ ಪಡೆದಿದ್ದಾರೆ. ಸೆಪ್ಟೆಂಬರ್ 23ರಂದೇ ಘಟನೆ ನಡೆದಿದ್ದು ತಡವಾಗಿ ಬೆಳಕಿಗೆ ಬಂದಿದೆ. ಪ್ರಕರಣ ಸಂಬಂಧ ಶರಣಪ್ಪ ವಿರುದ್ಧ ಪೋಕ್ಸೋ ಕೇಸ್ ಹಾಗೂ ವಿವಿಧ ಸೆಕ್ಷನ್ ಗಳ ಅಡಿ ಕೇಸ್ ದಾಖಲಿಸಿರುವ ಕೆಂಭಾವಿ ಪೊಲೀಸರು ತನಿಖೆ ನಡೆಸಿದ್ದಾರೆ.

### ಮರುತನಿಖೆಗೂ ಮುನ್ನ ಸೌಜನ್ಯ ಪ್ರಕರಣಕ್ಕೆ ಹಿನ್ನಡೆ

**ಉದಯವಾಹಿನಿ, ಮಂಗಳೂರು**

ಸೌಜನ್ಯ ಅತ್ಯಾಚಾರ, ಕೊಲೆ ಪ್ರಕರಣ ಮರುತನಿಖೆ ಆರಂಭವಾಗುವ ಮೊದಲೇ ದೊಡ್ಡ ಹಿನ್ನಡೆಯಾಗಿದೆ. ಸೌಜನ್ಯ ಪ್ರಕರಣದ ಮರು ತನಿಖೆಗಾಗಿ ರಚಿಸಿರೋ ಖಖಖಿ ತಂಡದಿಂದ ತಮ್ಮನ್ನು ಕೈಬಿಡುವಂತೆ ಎಎಸ್‌ಪಿ ಡಾ.ವೆಂಕಟೇಶ್ ಪ್ರಸನ್ನ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ.



ಸುಪ್ರೀಂ ಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ರಚಿಸಿದ್ದ ಎಸ್‌ಐಟಿ ತಂಡದಲ್ಲಿ ಎಎಸ್ ಪಿ ವೆಂಕಟೇಶ್ ಪ್ರಸನ್ನ ಅವರು ಇದ್ದರು. ಆದರೆ ಇದಕ್ಕೆ ಸೌಜನ್ಯ ತಾಯಿ ಆಕ್ಷೇಪ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಎಸ್‌ಐಟಿ ತಂಡದಿಂದ ಹೊರಬರಲು ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಡಾ. ವೆಂಕಟೇಶ್ ಪ್ರಸನ್ನ ನಿರ್ಧರಿಸಿದ್ದಾರೆ ಎಂದು ತಿಳಿದುಬಂದಿದೆ. ಐಜಿಪಿ ಶಶಿಕುಮಾರ್ ನೇತೃತ್ವದಲ್ಲಿ ಎಸ್‌ಐಟಿ ತಂಡ ರಚಿಸಲಾಗಿದ್ದು ತಂಡದಲ್ಲಿ ಮಂಗಳೂರು ಪೊಲೀಸ್ ಆಯುಕ್ತ ಮತ್ತು ಡಿಐಜಿ ಸಿ. ಎಚ್. ಸುಧೀರ್ ಕುಮಾರ್ ರೆಡ್ಡಿ, ಗುಪ್ತದಳದ ಎಸ್ಪಿ ನಿಶಾ ಜೇಮ್ಸ್, ಸಿಐಡಿ ಎಸ್ಪಿ ಲೋಕೇಶ್ ಜಗಲಸಾರ್ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆ ಎಎಸ್ಪಿ ವೆಂಕಟೇಶ್ ಪ್ರಸನ್ನ ಸೇರಿ ನಾಲ್ವರು ಅಧಿಕಾರಿಗಳು ಸದಸ್ಯರಾಗಿದ್ದರು.

### ನಿಪ್ಪಾಣಿ ತಹಶೀಲ್ದಾರ್ ಸುರೇಶ್‌ಗೆ ಲೋಕಾ ಶಾಕ್

**ಉದಯವಾಹಿನಿ, ಬೆಳಗಾವಿ**

ಜಿಲ್ಲೆಯ ನಿಪ್ಪಾಣಿ ತಹಶೀಲ್ದಾರ್ ಸುರೇಶ್ ಮುಂಜೆಗೆ ಬೆಳಂಬೆಳಿಗ್ಗೆಯೇ ಲೋಕಾಯುಕ್ತ ಅಧಿಕಾರಿಗಳು ಶಾಕ್ ನೀಡಿದ್ದಾರೆ.ಅಕ್ರಮ ಆಸ್ತಿ ಸಂಪಾದನೆ ಆರೋಪದ ಹಿನ್ನೆಲೆಯಲ್ಲಿ ಬೆಳಗಾವಿ ಲೋಕಾಯುಕ್ತ ಪೊಲೀಸರು ಏಕಕಾಲದಲ್ಲಿ ವಿವಿಧೆಡೆ ದಾಳಿ ನಡೆಸಿ ಪರಿಶೀಲನೆ ಕೈಗೊಂಡಿದ್ದಾರೆ. ನಿಪ್ಪಾಣಿ ಪಟ್ಟಣದಲ್ಲಿರುವ ತಹಶೀಲ್ದಾರ್ ಸುರೇಶ್ ಮುಂಜೆ ಮನೆ, ಅಥಣಿ ಪಟ್ಟಣದಲ್ಲಿರುವ ಮತ್ತೊಂದು ಮನೆ ಹಾಗೂ ಮೂಡಲಗಿಯಲ್ಲಿರುವ ಅವರ ಮಾವನ ಮನೆ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ದಾಳಿಯ ವೇಳೆ ಮನೆಗಳಲ್ಲಿರುವ ಆಸ್ತಿ ದಾಖಲೆಗಳು, ಹಣಕಾಸು ವ್ಯವಹಾರಕ್ಕೆ ಸಂಬಂಧಿಸಿದ ದಾಖಲೆಗಳು ಹಾಗೂ ಇತರೆ ದಾಖಲೆಗಳನ್ನು ಅಧಿಕಾರಿಗಳು ಪರಿಶೀಲಿಸಿದ್ದಾರೆ. ಅಕ್ರಮ ಆಸ್ತಿ ಸಂಪಾದನೆಗೆ ಸಂಬಂಧಿಸಿದ ಆರೋಪಗಳ ಹಿನ್ನೆಲೆಯಲ್ಲಿ ಈ ದಾಳಿ ನಡೆದಿದ್ದು,ದಾಳಿ ಪೂರ್ಣಗೊಂಡ ಬಳಿಕ ಆಸ್ತಿ–ಪಾಸ್ತಿ ಹಾಗೂ ಪತ್ತೆ ಯಾದ ದಾಖಲೆಗಳ ಕುರಿತು ಹೆಚ್ಚಿನ ಮಾಹಿತಿ ಹೊರಬೀಳುವ ಸಾಧ್ಯತೆ ಇದೆ.

## ಕಂಪಿಸಿದ ಭೂಮಿ; ರಿಕ್ಟರ್ ಮಾಪಕದಲ್ಲಿ 3.5 ತೀವ್ರತೆ ದಾಖಲು

**ಉದಯವಾಹಿನಿ, ವಿಜಯಪುರ**

ವಿಜಯಪುರದಲ್ಲಿ ಬುಧವಾರ ನಸುಕಿನ ಜಾವ ಲಘು ಭೂಕಂಪ ಸಂಭವಿಸಿದ್ದು, ರಿಕ್ಟರ್ ಮಾಪಕದಲ್ಲಿ 3.5 ತೀವ್ರತೆ ದಾಖಲಾಗಿದೆ ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಪತ್ತು



ಉಸ್ತುವಾರಿ ಕೇಂದ್ರ (ಕೆಎಸ್‌ಎನ್‌ಡಿಎಂಸಿ) ತಿಳಿಸಿದೆ. ಬಸವನ ಬಾಗೇವಾಡಿಯಿಂದ ಈಶಾನ್ಯ ದಿಕ್ಕಿನಲ್ಲಿ ಸುಮಾರು 3.9 ಕಿ.ಮೀ ದೂರದಲ್ಲಿ ಭೂಕಂಪನದ ಕೇಂದ್ರಬಿಂದು ಪತ್ತೆಯಾಗಿದೆ. ಈ ಭೂಕಂಪವು ಬೆಳಗಿನ ಜಾವ 2.04ಕ್ಕೆ 10 ಕಿ.ಮೀ ಆಳದಲ್ಲಿ ಸಂಭವಿಸಿದ್ದು, ಇದರ ಕೇಂದ್ರಬಿಂದುವು 16.604 ಡಿಗ್ರಿ ಉತ್ತರ ಅಕ್ಷಾಂಶ ಮತ್ತು 75.990 ಡಿಗ್ರಿ ಪೂರ್ವ ರೇಖಾಂಶದಲ್ಲಿತ್ತು. ಭೂಕಂಪದ ತೀವ್ರತೆಯು ಕಡಿಮೆಯಾಗಿದ್ದು, ಇದರ ಕಂಪನವು 'ಕೇಂದ್ರಬಿಂದುವಿನಿಂದ 50 ರಿಂದ 60 ಕಿಮೀ ವ್ಯಾಪ್ತಿಯಲ್ಲಿ ಅನುಭವಕ್ಕೆ ಬರಬಹುದು ಎಂದು ವಿಪತ್ತು ಮೇಲ್ವಿಚಾರಣಾ ಸಂಸ್ಥೆ ತಿಳಿಸಿದೆ. ಭೂಕಂಪನದ ಕೇಂದ್ರಬಿಂದು ಹುನಶ್ಯಾಲ ಗ್ರಾಮ ಪಂಚಾಯಿತಿಯಿಂದ ಪಶ್ಚಿಮಕ್ಕೆ 7.8 ಕಿ.ಮೀ., ಹೂವಿನ ಹಿಪ್ಪರಗಿ ಗ್ರಾಮ ಪಂಚಾಯಿತಿಯಿಂದ ಪಶ್ಚಿಮಕ್ಕೆ 11.2 ಕಿ.ಮೀ., ಆಲಮಟ್ಟಿ ಅಣೆಕಟ್ಟಿನಿಂದ ಈಶಾನ್ಯಕ್ಕೆ 31 ಕಿ.ಮೀ. ಹಾಗೂ ವಿಜಯಪುರ ನಗರದಿಂದ ನೈಋತ್ಯಕ್ಕೆ 38 ಕಿ.ಮೀ. ದೂರದಲ್ಲಿತ್ತು. 'ಭೂಕಂಪದ ತೀವ್ರತೆ ಕಡಿಮೆಯಿರುವುದರಿಂದ ಸ್ಥಳೀಯ ಸಮುದಾಯಕ್ಕೆ ಯಾವುದೇ ಹಾನಿಯಾಗುವುದಿಲ್ಲ, ಆದಾಗ್ಯೂ ಸ್ಥಳೀಯವಾಗಿ ಕಂಪನಗಳು ಅನುಭವಕ್ಕೆ ಬರಬಹುದು. ಗಮನಿಸಲಾದ ತೀವ್ರತೆ ಮತ್ತು ಪ್ರಮಾಣ ಎರಡೂ ಕಡಿಮೆಯಾಗಿರುವುದರಿಂದ ಸಾರ್ವಜನಿಕರು ಆತಂಕಪಡುವ ಅಗತ್ಯವಿಲ್ಲ' ಎಂದು KSNDMC ತಿಳಿಸಿದೆ.

## ಶ್ರೀಕಾಂತ್ ಶೆಟ್ಟಿ ಕಲಬುರಗಿ ನಗರ ಪ್ರವೇಶಕ್ಕೆ ನಿರ್ಬಂಧ

**ಉದಯವಾಹಿನಿ, ಕಲಬುರಗಿ**

ಕಲಬುರಗಿ ಕೋಟೆ ಎದುರು ಪ್ರತಿಷ್ಠಾಪಿಸಿರುವ ಹಿಂದೂ ಮಹಾಗಣಪತಿ ಉತ್ಸವದಲ್ಲಿ ಅಕ್ಟೋಬರ್ 1ರಂದು ವಿಶೇಷ ಭಾಷಣ ಮಾಡಬೇಕಿದ್ದ ಹಿಂದೂ ಜಾಗರಣ ವೇದಿಕೆಯ ದಕ್ಷಿಣ ಪ್ರಾಂತ್ಯ ಕಾರ್ಯಕಾರಣಿ ಸದಸ್ಯ, ಉಡುಪಿ ಜಿಲ್ಲೆಯ ಕಾರ್ಕಳದ ಶ್ರೀಕಾಂತ್ ಶೆಟ್ಟಿ ಅವರ ಕಲಬುರಗಿ ನಗರ ಪ್ರವೇಶ ನಿರ್ಬಂಧಿಸಿ ಪೊಲೀಸ್ ಇಲಾಖೆ ಆದೇಶಿಸಿದೆ. ರಾಜು ನವಲದಿ ಅಧ್ಯಕ್ಷತೆಯ ಹಿಂದೂ ಮಹಾಗಣಪತಿ ಸಮಿತಿಯು ಸೆಪ್ಟೆಂಬರ್ 14ರಿಂದ ಅಕ್ಟೋಬರ್ 4ರವರೆಗೆ 21 ದಿನಗಳ ಗಣೇಶೋತ್ಸವ ಆಯೋಜಿಸಿದೆ. ಆಗಾಗ ವಿಶೇಷ ಭಾಷಣಕ್ಕಾಗಿ ಅತಿಥಿಗಳನ್ನು ಆಹ್ವಾನಿಸುತ್ತಿದೆ. ಅದರಂತೆ ಅಕ್ಟೋಬರ್ 1ರಂದು ಹಿಂದೂ ಜಾಗರಣ ವೇದಿಕೆಯ ಮುಖಂಡ ಶ್ರೀಕಾಂತ್ ಶೆಟ್ಟಿ ಕಾರ್ಕಳ ಅವರನ್ನು ಭಾಷಣಕ್ಕೆ ಆಹ್ವಾನಿಸಿತ್ತು. ಆದರೆ, 'ಶ್ರೀಕಾಂತ್ ಶೆಟ್ಟಿ ವಿರುದ್ಧ ವಿವಿಧೆಡೆ ಪ್ರಚೋದನಕಾರಿ ಭಾಷಣ ಮಾಡಿದ್ದಾರೆ. ಅದರಿಂದ ಕಾನೂನು ಸುವ್ಯವಸ್ಥೆಗೆ ಧಕ್ಕೆ ಉಂಟಾದ ನಿದರ್ಶನಗಳಿವೆ. 2021ರಿಂದ 2026ರ ವರೆಗೆ ಐದು ವಿವಿಧ ಠಾಣೆಗಳಲ್ಲಿ ಆರು ಪ್ರಕರಣಗಳು ದಾಖಲಾಗಿವೆ. 2023ರಲ್ಲಿ ರೌಡಿಶೀಟ್ ತೆರೆಯಲಾಗಿದ್ದು, ಅದು ಚಾಲ್ತಿಯಲ್ಲಿದೆ' ಎಂದು ಕಲಬುರಗಿ ಚೌಕ ಠಾಣೆ ಹಾಗೂ ಉತ್ತರ ಉಪವಿಭಾಗದ ಎಸಿಪಿ ಕಚೇರಿಯು ವರದಿ ನೀಡಿದ್ದರು.

'ಈ ವರದಿ ಆಧರಿಸಿ ಶ್ರೀಕಾಂತ ಶೆಟ್ಟಿ ಅವರು ಸೆಪ್ಟೆಂಬರ್ 30ರಿಂದ ಅಕ್ಟೋಬರ್ 4ರವರೆಗೆ ಕಲಬುರಗಿ ನಗರ ಪ್ರವೇಶಿಸುವಂತಿಲ್ಲ' ಎಂದು ಕಲಬುರಗಿ ಪೊಲೀಸ್ ಕಮಿಷನರೇಟ್‌ನ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಡಿಸಿಪಿ ಆದೇಶ ಹೊರಡಿಸಿದ್ದಾರೆ.

## ಏರುತಿದೆ ಬಿಸಿಲ ಧಗೆ, ಬತ್ತುತ್ತಿದೆ ಜೀವಜಲ

**ಉದಯವಾಹಿನಿ, ಉಡುಪಿ**

ಸೆಪ್ಟೆಂಬರ್ ತಿಂಗಳ ಅಂತ್ಯದಲ್ಲೇ ಬಿಸಿಲಿನ ಧಗೆ ಏರಿಕೆಯಾಗಿ ಜಿಲ್ಲೆಯ ನದಿಗಳಲ್ಲಿ ನೀರಿನ ಮಟ್ಟ ಕುಸಿಯುತ್ತಿದೆ.ಉಡುಪಿ ನಗರಸಭೆ ವ್ಯಾಪ್ತಿಗೆ ನೀರುಣಿಸುವ ಬಜೆ ಅಣೆಕಟ್ಟೆಯಲ್ಲಿ ಸೆಪ್ಟೆಂಬರ್ ತಿಂಗಳಲ್ಲೇ ನೀರಿನ ಮಟ್ಟವು 5.1 ಮೀಟರ್‌ನಷ್ಟಿದೆ. ಕಳೆದ ವರ್ಷ ಸೆಪ್ಟೆಂಬರ್ ತಿಂಗಳಲ್ಲಿ ಅಣೆಕಟ್ಟೆಯ ನೀರಿನ ಮಟ್ಟವು 5.82 ಮೀಟರ್‌ನಷ್ಟಿತ್ತು ಎಂದು ನಗರಸಭೆಯ ಅಧಿಕಾರಿಗಳು ತಿಳಿಸಿದ್ದಾರೆ. ಹಿಂದಿನ ವರ್ಷಗಳಿಗೆ ಹೋಲಿಸಿದರೆ ಈ ವರ್ಷ ಬಜೆ ಅಣೆಕಟ್ಟೆಯಲ್ಲಿ ನೀರಿನ ಒಳಹರಿವು ಅಲ್ಪ ಕಡಿಮೆಯಾಗಿದೆ ಎಂದೂ ಹೇಳಿದ್ದಾರೆ. ಈ ಬಾರಿ ಜೂನ್, ಜುಲೈ ತಿಂಗಳಲ್ಲಿ ಸಮರ್ಪಕವಾಗಿ ಮಳೆ ಬಾರದೆ ಬಿಸಿಲಿನ ವಾತಾವರಣ ಇತ್ತು. ಆಗಸ್ಟ್ ತಿಂಗಳ ಆರಂಭದಲ್ಲಿ ಉತ್ತಮ ಮಳೆ ಸುರಿದಿರುವುದು ಜನರಲ್ಲಿ ನೆಮ್ಮದಿ ಮೂಡಿಸಿತ್ತು. ಆದರೆ, ಸೆಪ್ಟೆಂಬರ್‌ನಲ್ಲಿ ಮತ್ತೆ ಮಳೆ ಕೈಕೊಟ್ಟಿದ್ದರಿಂದ ರೈತರಿಗೆ ಸಮಸ್ಯೆಯಾಗುವುದರ ಜೊತೆಗೆ ಕುಡಿಯುವ ನೀರಿನ ಅಭಾವ ಕಾಡುವ ಭೀತಿಯೂ ಎದುರಾಗಿದೆ. ಜೂನ್ ತಿಂಗಳಿಂದ ಸೆಪ್ಟೆಂಬರ್ ಅಂತ್ಯದವರೆಗೆ ನಾಲ್ಕು ತಿಂಗಳ ಅವಧಿಯಲ್ಲಿ ಜಿಲ್ಲೆಯಲ್ಲಿ 400.8 ಸೆಂ.ಮೀ. ನಷ್ಟು ವಾಡಿಕೆ ಮಳೆ ಸುರಿಯಬೇಕಿತ್ತು. ಆದರೆ 273.6 ಸೆಂ.ಮೀ. ಮಳೆ ಸುರಿದಿದೆ. ಆ ಮೂಲಕ ಜಿಲ್ಲೆಯಲ್ಲಿ ಒಟ್ಟು ಶೇ 32 ರಷ್ಟು ಮಳೆ ಕೊರತೆಯಾಗಿದೆ.ಅಕ್ಟೋಬರ್ 1ರ ನಂತರ ಸುರಿಯುವ ಹಿಂಗಾರು ಮಳೆಯು ಜಿಲ್ಲೆಯಲ್ಲಿ ವಾಡಿಕೆಯಂತೆ 30 ಸೆಂ.ಮೀ. ನಷ್ಟು ಸುರಿಯಬೇಕಿದೆ. ಆದರೆ ಈ ಸಲದ ಹವಾಮಾನ ವೈಪರಿತ್ಯ ಗಮನಿಸಿದರೆ ಅಷ್ಟು ಮಳೆ ಸುರಿಯುವ ಸಾಧ್ಯತೆ ಕಡಿಮೆ ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಘಟಕದ ಮೂಲಗಳು ತಿಳಿಸಿವೆ.

## ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆ: ಕೈ ಜಯಭೇರಿ

**ಉದಯವಾಹಿನಿ, ಕಾಳಗಿ**

ಕಾಳಗಿ ಪಟ್ಟಣ ಪಂಚಾಯಿತಿ ನೂತನ ಅಧ್ಯಕ್ಷ ಉಪಾಧ್ಯಕ್ಷ ಸ್ಥಾನಕ್ಕೆ ಬುಧವಾರ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಜಯಭೇರಿ ಬಾರಿಸಿತು. ಬೀದರ್ ಸಂಸದ ಸಾಗರ್ ಖಂಡ್ರೆ ಮತದ ಬಲದಿಂದ ಗೆಲುವಿನ ನಗೆ ಬೀರಿತು.ಅಧ್ಯಕ್ಷರಾಗಿ ಸಾಲಿಯಾಬೇಗಂ ಬಿಜಾಪುರ ಮತ್ತು ಉಪಾಧ್ಯಕ್ಷರಾಗಿ ಶರಣಪ್ಪ ಬೇಲೂರ ತಲಾ ಏಳು ಮತಗಳನ್ನು ಪಡೆದು ಆಯ್ಕೆಯಾದರು. ಬಿಜೆಪಿಯಿಂದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ ರಮೇಶ ಚಂದ್ರಕಾಂತ ಕಿಟ್ಟದ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ ಜಿತೇಂದ್ರ ನೂರಸಿಂಗ್ ರಾಠೋಡ ತಲಾ 6 ಮತಗಳು ಪಡೆದು ಪರಾಭವಗೊಂಡರು. ಸಂಸದ ಖಂಡ್ರೆ ಅವರಂತೆಯೇ ಚಿಂಚೋಳಿ ಶಾಸಕ ಡಾ.ಅವಿನಾಶ ಜಾಧವ ಅವರು ಬಂದು ಮತ ಚಲಾಯಿಸಿದರೂ 'ಕಮಲ' ಅರಳಲಿಲ್ಲ.


ಉದಯವಾಹಿನಿ ಚಿತ್ರ

## ಅ.5ರಂದು ಕೇಂದ್ರ ತಂಡದಿಂದ ಬರ ಪರಿಶೀಲನೆ


ಉದಯವಾಹಿನಿ ಚಿತ್ರ

**ಉದಯವಾಹಿನಿ, ಬಾಗಲಕೋಟೆ**

ಜಿಲ್ಲೆಯಲ್ಲಿ ಉಂಟಾಗಿರುವ ಬರ ಪರಿಸ್ಥಿತಿ ಪರಿಶೀಲಿಸಿ, ವಾಸ್ತವ ಸ್ಥಿತಿಗತಿಗಳ ಅಧ್ಯಯನ ನಡೆಸುವ ಉದ್ದೇಶದಿಂದ ಕೇಂದ್ರ ಬರ ಅಧ್ಯಯನ ತಂಡ ಅ.5 ರಂದು ಜಿಲ್ಲೆಗೆ ಭೇಟಿ ನೀಡಲಿದೆ ಎಂದು ಜಿಲ್ಲಾಧಿಕಾರಿ ಸಂಗಪ್ಪ ತಿಳಿಸಿದರು.ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಜಿಲ್ಲೆಯ ಬರ ಪರಿಸ್ಥಿತಿ ಕುರಿತು ಜರುಗಿದ ಸಭೆ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು, ಪಾಟ್ನಾದ ಅಕ್ಕಿ ಅಭಿವೃದ್ಧಿ ನಿರ್ದೇಶನಾಲಯದ ನಿರ್ದೇಶಕ ಮಾನ್‌ಸಿಂಗ್ ನೇತೃತ್ವದ ಕೇಂದ್ರ ಬರ ಅಧ್ಯಯನ ತಂಡದಲ್ಲಿ ವೆಚ್ಚ ಇಲಾಖೆಯ ಅಧೀನ ಕಾರ್ಯದರ್ಶಿ ಪಾರ್ಥ ಪಾಲ್, ಗ್ರಾಮೀಣ ಅಭಿವೃದ್ಧಿ ಇಲಾಖೆ ಅಧೀನ ಕಾರ್ಯದರ್ಶಿ ರಾಕೇಶಕುಮಾರ್ ಬರಲಿದ್ದಾರೆ ಎಂದು ತಿಳಿಸಿದರು. ಕೇಂದ್ರ ಬರ ಅಧ್ಯಯನ ತಂಡವು ಜಿಲ್ಲೆಯ ಬರಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ, ಪ್ರಸಕ್ತ ಸಾಲಿನ ಮಳೆ ಪ್ರಮಾಣ, ಮಳೆ ಕೊರತೆಯಿಂದ ಉಂಟಾಗಿರುವ ಪರಿಸ್ಥಿತಿ, ಕೃಷಿ ಚಟುವಟಿಕೆಗಳ ಮೇಲಾದ ಪರಿಣಾಮ, ವಿವಿಧ ಬೆಳೆಗಳ ಸ್ಥಿತಿಗತಿ ಹಾಗೂ ಬೆಳೆ ಹಾನಿ ಸೇರಿದಂತೆ ಬರ ಪರಿಸ್ಥಿತಿಗೆ ಸಂಬಂಧಿಸಿದ ವಿವಿಧ ಅಂಶಗಳನ್ನು ಪರಿಶೀಲಿಸಲಿದೆ ಎಂದು ಅವರು ಹೇಳಿದರು. ಬರದಿಂದ ರೈತರು ಎದುರಿಸುತ್ತಿರುವ ಸಮಸ್ಯೆಗಳು, ಕೃಷಿ ಹಾಗೂ ಜಾನುವಾರು ಸಾಕಾಣಿಕೆ ಚಟುವಟಿಕೆಗಳ ಮೇಲಾದ ಪರಿಣಾಮ, ಕುಡಿಯುವ ನೀರು, ಜಾನುವಾರುಗಳಿಗೆ ಅಗತ್ಯವಿರುವ ಮೇವಿನ ಲಭ್ಯತೆ ಸೇರಿದಂತೆ ಬರ ಪರಿಸ್ಥಿತಿಗೆ ಸಂಬಂಧಿಸಿದ ಪ್ರಮುಖ ವಿಷಯಗಳ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆಯಲಿದ್ದಾರೆ ಎಂದು ತಿಳಿಸಿದರು. ಕೇಂದ್ರ ತಂಡ ಪರಿಶೀಲನೆ ನಡೆಸುವ ಸಂದರ್ಭದಲ್ಲಿ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ಜಿಲ್ಲೆಯ ಬರ ಪರಿಸ್ಥಿತಿಯ ಸಮಗ್ರ ಮಾಹಿತಿ ಒದಗಿಸಬೇಕು. ಮಳೆ ಕೊರತೆ, ಬಿತ್ತನೆ ಪ್ರದೇಶ, ಬೆಳೆಗಳ ಪ್ರಸ್ತುತ ಸ್ಥಿತಿ, ಹಾನಿಗೊಳಗಾದ ಪ್ರದೇಶ ಹಾಗೂ ರೈತರಿಗೆ ಉಂಟಾಗಿರುವ ತೊಂದರೆಗಳ ಕುರಿತು ಅಗತ್ಯ ದಾಖಲೆಗಳು ಮತ್ತು ಮಾಹಿತಿ ಸಿದ್ದಪಡಿಸಿಕೊಳ್ಳಬೇಕು ಎಂದು ಸೂಚಿಸಿದರು.

## ಆಲ್ದೂರು ಸಂಪರ್ಕಕ್ಕೆ ಗುಂಡಿಗಳ ಹಾದಿ

**ಉದಯವಾಹಿನಿ, ಚಿಕ್ಕಮಗಳೂರು**

ಆಲ್ದೂರು ಹೋಬಳಿ ಕೇಂದ್ರವು ಪ್ರಮುಖ ವಾಣಿಜ್ಯ ಕೇಂದ್ರವಾಗಿ ಬದಲಾಗುತ್ತಿದೆ. ಆದರೆ, ರಾಜ್ಯ ಹೆದ್ದಾರಿ, ಜಿಲ್ಲಾ ಮುಖ್ಯ ರಸ್ತೆಗಳಿದ್ದರೂ, ಈ ಊರಿನ ರಸ್ತೆಗಳು ಎಲ್ಲಾ ಕಡೆಗಳಿಂದ ಕಲ್ಲು ಗುಂಡಿಗಳ ಹಾದಿಯಾಗಿದೆ.ಚಿಕ್ಕಮಗಳೂರು ನಗರದಿಂದ ಹೊರಟರೆ ವಸ್ತಾರೆ ದಾಟಿದ ಕೂಡಲೇ ಗುಂಡಿಗಳು ಗೋಚರವಾಗುತ್ತವೆ.


ಉದಯವಾಹಿನಿ ಚಿತ್ರ

ರಸ್ತೆಯಲ್ಲಿ ಗುಂಡಿಗಳು ಇದ್ದಂತೆ ಕಾಣಿಸುವುದಿಲ್ಲ. ಗುಂಡಿ–ಗೊಟರುಗಳ ನಡುವೆ ರಸ್ತೆಯನ್ನು ವಾಹನ ಸವಾರರು ಹುಡುಕುತ್ತಿದ್ದಾರೆ. ಕಿತ್ತು ಬಂದಿರುವ ಜಲ್ಲಿಕಲ್ಲುಗಳು, ಬಾಯ್ದೆರೆದಿರುವ ಹೊಂಡಗಳನ್ನು ದಾಟಿ ಹೋಗಬೇಕಾದ ಅನಿವಾರ್ಯತೆ ಇದೆ.

ಈ ರಸ್ತೆ ರಾಜ್ಯ ಹೆದ್ದಾರಿಯಾಗಿದ್ದು, ಜಿಲ್ಲಾ ಕೇಂದ್ರದಿಂದ ಬಾಳೆಹೊನ್ನೂರು, ನರಸಿಂಹರಾಜಪುರ, ಕೊಪ್ಪ, ಕಳಸ, ಹೊರನಾಡು, ಶೃಂಗೇರಿ ತಲುಪಲು ಇರುವ ಏಕೈಕ ರಸ್ತೆ. ಈ ರಸ್ತೆಯಲ್ಲಿ ದೊಡ್ಡ ವಾಹನಗಳು ಗುಂಡಿಗಳನ್ನು ಲೆಕ್ಕಿಸದೆ ಸಾಗಬಹುದು. ಆದರೆ, ದ್ವಿಚಕ್ರ ವಾಹನಗಳ ಸವಾರರು, ಸಣ್ಣ ಕಾರು ಮತ್ತು ಗೂಡ್ಸ್ ವಾಹನಗಳ ಸವಾರರು ತಿಣುಕಾಡಬೇಕಾದ ಸ್ಥಿತಿ ಇದೆ.

ಮಳೆ ಬಂದರೆ ಕಾಣದಾಗುವ ಗುಂಡಿಗಳಲ್ಲಿ ಬಿದ್ದು ಎದ್ದು ಸಾಗುವುದು. ಬಿಸಿಲು ಬಂದರೆ ಏಳುವ ದೂಳು ಕುಡಿದು ಸಾಗಬೇಕಾದ ಅನಿವಾರ್ಯ ವಾಹನ ಸವಾರರದು. ಹೀಗೆ ಮುಂದೆ ಸಾಗಿದರೆ ಆಲ್ದೂರು ಪಟ್ಟಣದ ಬಾಗಿಲಿನಲ್ಲೇ ಎದುರುಗೊಳ್ಳುವ ಗುಂಡಿಗಳು ಊರಿನ ಸ್ಥಿತಿಯನ್ನು ತೆರೆದಿಡುತ್ತದೆ.ಆಲ್ದೂರು ವೃತ್ತದಿಂದ ಹಲವು ಕಡೆಗಳಿಗೆ ರಸ್ತೆಗಳು ಕವಲೊಡೆಯುತ್ತವೆ. ರಾಜ್ಯ ಹೆದ್ದಾರಿ ಬಾಳೆಹೊನ್ನೂರು ಕಡೆಗೆ ಸಾಗಿದರೆ ಹಾಂದಿ ಗ್ರಾಮದ ಮೂಲಕ ಮೂಡಿಗೆರೆ ಸಂಪರ್ಕಿಸುತ್ತದೆ. ಬಾಳೆಹೊನ್ನೂರು ರಸ್ತೆಯಲ್ಲಿ ಸಾಗಿದರೆ ಗುಡ್ಡ ಇಳಿಯಬೇಕು. ಇಡೀ ಇಳಿಜಾರಿನಲ್ಲಿ ಗುಂಡಿ ಗೊಟರುಗಳು ತುಂಬಿ ಹೋಗಿವೆ.

## PSI ಎಂದು ನಂಬಿಸಿ ಕೋಟಿಗಟ್ಟಲೇ ಹಣ ವಂಚನೆ; ನಕಲಿ ಲೇಡಿ ಪೊಲೀಸ್ ಅಂದರ್

**ಉದಯವಾಹಿನಿ, ಚಿಕ್ಕಮಗಳೂರು**

ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ ಎಂದು ನಂಬಿಸಿ ಸಾರ್ವಜನಿಕರಿಗೆ ಹಣ ಹಾಗೂ ಚಿನ್ನಾಭರಣ ವಂಚಿಸುತ್ತಿದ್ದ ಆರೋಪದ ಮೇಲೆ ನಕಲಿ ಲೇಡಿ ಪಿಎಸ್‌ಐಯೊಬ್ಬಳನ್ನು ಚಿಕ್ಕಮಗಳೂರು ಪೊಲೀಸರು ಬಂಧಿಸಿದ್ದಾರೆ.


ಉದಯವಾಹಿನಿ ಚಿತ್ರ

ರಾಮನಗರ ಮೂಲದ ನಿವೇದಿತಾ ಗೌಡ ಬಂಧಿತ ಮಹಿಳೆ. ಚಿಕ್ಕಮಗಳೂರು ನಗರದಲ್ಲಿ ಕೆಫೆ ನಡೆಸುತ್ತಿದ್ದ ನಿವೇದಿತಾ, ಕೆಫೆಗೆ ಬರುತ್ತಿದ್ದ ಯುವಕರು ಹಾಗೂ ಮಹಿಳೆಯರನ್ನು ಗುರಿಯಾಗಿಸಿಕೊಂಡು ಪರಿಚಯ ಬೆಳೆಸುತ್ತಿದ್ದಳು. ತಾನು ಬೆಂಗಳೂರಿನ ರಾಜಗೋಪಾಲನಗರ ಪೊಲೀಸ್ ಠಾಣೆಯ ಪಿಎಸ್‌ಐ ಎಂದು ಪರಿಚಯಿಸಿಕೊಂಡು, ಸದ್ಯ ರಜೆಯ ಮೇಲೆ ಚಿಕ್ಕಮಗಳೂರಿಗೆ ಬಂದಿರುವುದಾಗಿ ಹೇಳುತ್ತಿದ್ದಳು ಎಂದು ಪೊಲೀಸರು ತಿಳಿಸಿದ್ದಾರೆ. ಪೊಲೀಸ್ ಅಧಿಕಾರಿಯೆಂದು ಜನರು ನಂಬುವಂತೆ ಮಾಡಲು ಪೊಲೀಸ್ ಅಧಿಕಾರಿಗಳ ರೀತಿಯ ಹೇರ್‌ಕಟ್ ಹಾಗೂ ಉಡುಪು ಧರಿಸುತ್ತಿದ್ದಳು ಎನ್ನಲಾಗಿದೆ. ಪರಿಚಯವಾದ ಬಳಿಕ ಓಡಾಟದ ನೆಪದಲ್ಲಿ ಐಷಾರಾಮಿ ಕಾರುಗಳನ್ನು ಪಡೆದುಕೊಂಡು, ಅವುಗಳನ್ನು ಬೇರೆಯವರಿಗೆ ಮಾರಾಟ ಮಾಡಿ ವಂಚಿಸುತ್ತಿದ್ದಳು ಎಂದು ಆರೋಪಿಸಲಾಗಿದೆ. ಪೊಲೀಸರ ತನಿಖೆಯ ವೇಳೆ ನಿವೇದಿತಾ 25ಕ್ಕೂ ಹೆಚ್ಚು ಮಂದಿಗೆ ಕೋಟ್ಯಂತರ ರೂಪಾಯಿ ಹಣ ಹಾಗೂ ಚಿನ್ನಾಭರಣ ವಂಚಿಸಿರುವುದು ಬೆಳಕಿಗೆ ಬಂದಿದೆ. ಮೋಸ ಹೋದ 20ಕ್ಕೂ ಹೆಚ್ಚು ಮಂದಿ ನೀಡಿದ ದೂರಿನ ಆಧಾರದ ಮೇಲೆ ಬಸವನಹಳ್ಳಿ ಹಾಗೂ ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಗಳಲ್ಲಿ ಪ್ರಕರಣ ದಾಖಲಾಗಿದೆ.

ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಹುಬ್ಬಳ್ಳಿಯಲ್ಲಿ ನಡೆಸುತ್ತಿದ್ದ ರೈತರ ಹೋರಾಟಕ್ಕೆ ಸದ್ಯಕ್ಕೆ ವಿರಾಮ ಬಿದ್ದಿದೆ

## ಜೋಶಿ ಸಕಾರಾತ್ಮಕ ಸ್ಪಂದನೆ ಹಿನ್ನೆಲೆ ಪ್ರತಿಭಟನೆ ಹಿಂದಕ್ಕೆ ಪಡೆದ ರೈತರು

**ಉದಯವಾಹಿನಿ, ಹುಬ್ಬಳ್ಳಿ**

ಡಾ. ಸ್ವಾಮಿನಾಥನ್ ವರದಿ ಜಾರಿ, ಕಬ್ಬು ಹಾಗೂ ರೈತರ ಬೆಳೆಗಳಿಗೆ ಸೂಕ್ತ ಬೆಲೆ ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗಾಗಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಹುಬ್ಬಳ್ಳಿಯಲ್ಲಿ ನಡೆಸಿದ ಬೃಹತ್ ಪ್ರತಿಭಟನೆಗೆ ವಿರಾಮ ಸಿಕ್ಕಿದೆ.

**1.** ನಮ್ಮ ಸರ್ಕಾರ ರೈತರ ಪರವಾಗಿದೆ
**2.** ಒಂದು ರಾಜ್ಯದ ರೈತರ ಸಮಸ್ಯೆಯಲ್ಲ
**3.** ಅಂತ ಪರಿಸ್ಥಿತಿ ಕುರಿತು ಮನವರಿಕೆ


ಉದಯವಾಹಿನಿ ಚಿತ್ರ

ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ನಿವಾಸಕ್ಕೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದ್ದರು. ಪ್ರತಿಭಟನಾಕಾರರನ್ನು ಮನವೊಲಿಸಲು ಪೊಲೀಸರು ಹರಸಾಹಸ ಪಡಬೇಕಾಯಿತು. ನಗರದ ಚೆನ್ನಮ್ಮ ವೃತ್ತದಲ್ಲಿ ಸೇರಿದ ಸಾವಿರಾರು ರೈತರು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆ ಹಿನ್ನೆಲೆಯಲ್ಲಿ ನಗರದಲ್ಲಿ ಭಾರಿ ಬಂದೋಬಸ್ತ್ ಹಮ್ಮಿಕೊಳ್ಳಲಾಗಿತ್ತು.

ರೈತ ಮುಖಂಡ ಚುನ್ನಪ್ಪ ಪೂಜಾರೆ ಹಾಗೂ ಶಶಿಕಾಂತ ಗುರೂಜಿ ಮುಂದಾಳತ್ವದ ಪ್ರತಿಭಟನಾ ನಿರತರನ್ನು ಧಾರವಾಡ ಜಿಲ್ಲಾಧಿಕಾರಿ ಸ್ನೇಹಲ್ ಆರ್. ನೇತೃತ್ವದಲ್ಲಿ ಬಿಜೆಪಿ ಶಾಸಕರಾದ ಮಹೇಶ್ ಟೆಂಗಿನಕಾಯಿ, ಎಂ.ಆರ್.ಪಾಟೀಲ್ ಮನವೊಲಿಸಲು ಯತ್ನ ಮಾಡಿದರು. ಈ ವೇಳೆ ಶಾಸಕರಾದ ಎಂ.ಆರ್. ಪಾಟೀಲ್ ಹಾಗೂ ಮಹೇಶ್ ಟೆಂಗಿನಕಾಯಿ ರೈತರ ಹೋರಾಟ ಸೂಕ್ತವಾಗಿದೆ, ನಮ್ಮ ಸರ್ಕಾರ ರೈತರ ಪರವಾಗಿದೆ, ಇದು ಒಂದು ರಾಜ್ಯದ ರೈತರ ಸಮಸ್ಯೆಯಲ್ಲ, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಚಿವರು ಹಾಗೂ ಅಧಿಕಾರಿಗಳು ಸಭೆ ನಡೆಸಿ ಈ ಬಗ್ಗೆ ಸೂಕ್ತ ನಿರ್ಧಾರ ತಗೆದುಕೊಳ್ಳುವುದಾಗಿ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಅವರು ಹೇಳಿದ್ದರಿಂದ ನಾವು ಇಲ್ಲಿದೆ ಬಂದಿದ್ದೇವೆ ಅಂತ ಪರಿಸ್ಥಿತಿ ಕುರಿತು ಮನವರಿಕೆ ಮಾಡಿಕೊಟ್ಟರು. ಕೊನೆಗೆ ರೈತ ಮುಖಂಡರು ಒಂದು ನಿರ್ಧಾರಕ್ಕೆ ಬಂದು ತಾತ್ಕಾಲಿಕವಾಗಿ ತಮ್ಮ ಪ್ರತಿಭಟನೆಯನ್ನು ಹಿಂದಕ್ಕೆ ಪಡೆದಿರುವುದಾಗಿ ಘೋಷಣೆ ಮಾಡಿದರು. ಹೀಗಾಗಿ ರೈತರ ಹೋರಾಟಕ್ಕೆ ಸದ್ಯಕ್ಕೆ ಅಲ್ಪ ವಿರಾಮ ಸಿಕ್ಕಿದೆ. ಮುಂದಿನ ತಿಂಗಳ 10ರೊಳಗೆ ದೆಹಲಿ ಸಭೆಗೆ ಸಮ್ಮತಿ ನೀಡಿದ್ದು, ಸಭೆಗೆ ಕರ್ನಾಟಕ, ಮಹಾರಾಷ್ಟ್ರ ಮತ್ತು ಉತ್ತರ ಪ್ರದೇಶದ 30 ರೈತರ ಮುಖಂಡರ ನಿಯೋಗ ಭಾಗಿಯಾಗಬೇಕು.

ದೆಹಲಿಗೆ ಹೋಗಿ ಬರುವ ಎಲ್ಲಾ ಖರ್ಚು–ವೆಚ್ಚವನ್ನು ಕುಂದಗೋಳ ಶಾಸಕ ಎಂ.ಆರ್. ಪಾಟೀಲ್ ಅವರು ಜವಾಬ್ದಾರಿ ತೆಗೆದುಕೊಳ್ಳಬೇಕು.

**ಪ್ರತಿಭಟನೆ ಕೈಬಿಡಲ್ಲ**
ರೈತರ ಬೇಡಿಕೆಗಳ ಕುರಿತು ರಮೇಶ ಭವನ ಬಳಿಯ ದೇಸಾಯಿ ಮನೆತನದ ನಿವಾಸದಲ್ಲಿ ಸಭೆ ನಡೆಸಿ ಮಹತ್ವದ ಮಾತುಕತೆ ನಡೆಸಿದರು. ಆದರೆ, ನಮ್ಮ ಬೇಡಿಕೆ ಈಡೇರುವವರೆಗೂ ಪ್ರತಿಭಟನೆ ಕೈಬಿಡುವುದಿಲ್ಲ ಎಂದು ಪ್ರತಿಭಟನಾ ನಿರತರು ಎಚ್ಚರಿಕೆ ನೀಡಿದರು.

**ಗುರ್ಲಾಪುರ ಮಾದರಿ ಹೋರಾಟ ಎಚ್ಚರಿಕೆ**
ಸಭೆಯಲ್ಲಿ ರೈತರು ಕೇಳುವ ಬೆಂಬಲ ಬೆಲೆ, ಎಂಆರ್‌ಪಿ ದರ ನಿಗದಿ ಮಾಡಬೇಕು. ಇಲ್ಲದಿದ್ದರೆ 10 ಲಕ್ಷ ರೈತರಿಂದ ಹುಬ್ಬಳ್ಳಿಯಲ್ಲಿರುವ ಕೇಂದ್ರ ಸಚಿವರ ಮನೆಗೆ ಬೀಗ ಹಾಕಿ ಪ್ರತಿಭಟನೆ ಮಾಡುವ ಮೂಲಕ ಮತ್ತೆ ಗುರ್ಲಾಪುರ ಮಾದರಿ ಹೋರಾಟಕ್ಕೆ ಮುಂದಾಗಬೇಕಾಗುತ್ತದೆ

ರೈತರನ್ನು ಕೇಂದ್ರ ಸಚಿವ(ಪ್ರಲ್ಹಾದ್ ಜೋಶಿ) ರೊಂದಿಗೆ ಭೇಟಿ ಮಾಡಿಸುವುದು ಶಾಸಕ ಮಹೇಶ್ ಟೆಂಗಿನಕಾಯಿ ಜವಾಬ್ದಾರಿ. ರೈತರ ಜೊತೆಗೆ ಸಭೆ ಮುಗಿಯುವರಿಗೆ ರಾಜ್ಯ ಮತ್ತು ದೇಶದ ಯಾವುದೇ ಸಕ್ಕರೆ ಕಾರ್ಖಾನೆಗಳು ಆರಂಭವಾಗುವಂತಿಲ್ಲ. ದೆಹಲಿ ಸಭೆಯಲ್ಲಿ ಕೇಂದ್ರ ಸಚಿವರುಗಳಾದ ಪ್ರಲ್ಹಾದ್ ಜೋಶಿ, ಪೆಟ್ರೋಲಿಯಂ ಸಚಿವರು ಮತ್ತು ಕಬ್ಬು ಬೆಳೆಗೆ ಸಂಬಂಧಿಸಿದ ಅಧಿಕಾರಿಗಳು ಭಾಗಿಯಾಗಬೇಕು.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 01:30 ರಿಂದ 03:00 |
| ಗುಳಿಕಕಾಲ | ಬೆಳಗ್ಗೆ | 09:00 ರಿಂದ 10:30 |
| ಯಮಗಂಡ ಕಾಲ | ಬೆಳಗ್ಗೆ | 06:00 ರಿಂದ 07:30 |

**ಮೇಷ**
ಒಂದು ಲಾಭಕರ ದಿನ ಮತ್ತು ನೀವು ದೀರ್ಘಕಾಲದ ಅನಾರೋಗ್ಯಕ್ಕೆ ಪರಿಹಾರ ಹುಡುಕಲು ಸಾಧ್ಯವಾಗಬಹುದು. ನೀವು ಅಪರೂಪಕ್ಕೆ ಭೇಟಿ ಮಾಡುವ ಜನರನ್ನು ಸಂಪರ್ಕಿಸಲು ಒಳ್ಳೆಯ ದಿನ.

**ವೃಷಭ**
ಇಂದು ನೀವು ಆರಾಮವಾಗಿರುವ ಭಾವನೆ ಹೊಂದಿರುತ್ತೀರಿ ಮತ್ತು ಆನಂದಿಸಲು ಸೂಕ್ತ ಮನೋಭಾವದಲ್ಲಿರುತ್ತೀರಿ. ಮಾದಕತೆಯ ಸಂದರ್ಭದಲ್ಲಿ ನೀವು ಬೆಲೆಬಾಳುವ ವಸ್ತುಗಳನ್ನು ಕಳೆದುಕೊಳ್ಳಬಹುದು.

**ಮಿಥುನ**
ನೀವು ಕೆಲವು ಆಘಾತಗಳನ್ನು ಎದುರಿಸುವುದರಿಂದ ನೀವು ಬಹಳ ಧೈರ್ಯ ಹಾಗೂ ಶಕ್ತಿಯನ್ನು ಪ್ರದರ್ಶಿಸುವ ಅಗತ್ಯವಿದೆ. ನೀವು ನಿಮ್ಮ ಆಶಾವಾದಿ ನಿಲುವಿನಿಂದ ಇವುಗಳಿಂದ ಸುಲಭವಾಗಿ ಹೊರಬರಬಹುದು.

**ಕರ್ಕಾಟಕ**
ಆರೋಗ್ಯದ ಆರೈಕೆ ಮಾಡಿಕೊಳ್ಳಬೇಕು. ಹಣಕಾಸು ವ್ಯವಹಾರಗಳಲ್ಲಿ ಸಿಲುಕಿಕೊಳ್ಳದಂತೆ ವಿಶ್ರಾಂತಿ ಪಡೆಯಿರಿ. ಇಂದು ಹೆಚ್ಚು ಪ್ರಯತ್ನ ಮಾಡಬೇಕಾಗಿ ಬಂದರೂ ಮಕ್ಕಳ ಸಂಗಡಲ್ಲಿ ನಿಮ್ಮ ಬಿಡುವಿನ ಸಮಯ ಕಳೆಯಲು ಪ್ರಯತ್ನಿಸಬೇಕು.

**ಸಿಂಹ**
ನಿಮ್ಮ ಸಭ್ಯ ನಡವಳಿಕೆ ಮೆಚ್ಚುಗೆ ಪಡೆಯುತ್ತದೆ. ಅನೇಕ ಜನರು ನಿಮ್ಮನ್ನು ಹೊಗಳುತ್ತಾರೆ. ಇಂದು ಹಣದ ನಷ್ಟವು ಸಂಭವಿಸಬಹುದು. ಆದ್ದರಿಂದ ವಹಿವಾಟುಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ನೀವು ಜಾಗರೂಕರಾಗಿರಿ.

**ಕನ್ಯಾ**
ಪ್ರೀತಿ, ಭರವಸೆ, ನಂಬಿಕೆ, ಸಹಾನುಭೂತಿ, ಆಶಾವಾದ ಮತ್ತು ನಿಷ್ಠೆಗಳಂಥ ಧನಾತ್ಮಕ ಭಾವನೆಗಳನ್ನು ಗ್ರಹಿಸಲು ಮನಸ್ಸನ್ನು ಪ್ರೋತ್ಸಾಹಿಸಿ. ನಿಮ್ಮ ತಾಯಿಯ ಬದಿಯಿಂದ ಹಣಕಾಸು ಲಾಭ ಪಡೆಯುವ ಸಾಧ್ಯತೆ ಇದೆ.

**ತುಲಾ**
ನಿಮ್ಮ ಬಗ್ಗೆ ನಿಮಗೇ ಉತ್ತಮ ಅಭಿಪ್ರಾಯ ಬರಲು ಕೆಲಸ ಮಾಡಲು ಒಂದು ಅದ್ಭುತ ದಿನ. ಆರ್ಥಿಕ ಸ್ಥಿತಿ ಸುಧಾರಿಸಿದರೂ ಹಣದ ಹೊರಹರಿವು ನಿಮ್ಮ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ತೊಂದರೆ ಮಾಡುತ್ತದೆ.

**ವೃಶ್ಚಿಕ**
ನಿಮ್ಮನ್ನು ನೀವೇ ಅನಗತ್ಯವಾಗಿ ದೂಷಿಸುವುದು ನಿಮ್ಮ ಚೈತನ್ಯವನ್ನು ಕುಗ್ಗಿಸಬಹುದು. ಮನೆಯ ಸದಸ್ಯರಿಂದ ಹಣ ಸಾಲ ಪಡೆದಿದ್ದರೆ ಇಂದು ಮರುಪಾವತಿಸಿ ಇಲ್ಲದಿದ್ದರೆ, ಕಾನೂನು ಪ್ರಕರಣ ಮಾಡಬಹುದು.

**ಧನಸ್ಸು**
ಕೆಲಸದಲ್ಲಿ ಹಿರಿಯರಿಂದ ಒತ್ತಡ ಮತ್ತು ಮನೆಯಲ್ಲಿ ಅಪಶ್ರುತಿ ನಿಮ್ಮ ಏಕಾಗ್ರತೆಗೆ ತೊಂದರೆ ತರಬಹುದು. ಸಾಮಾಜಿಕ ಕಾರ್ಯಗಳಲ್ಲಿ ಭಾಗವಹಿಸಿದಲ್ಲಿ ಹೊಸ ಪರಿಚಯಸ್ಥರನ್ನು ಪಡೆಯುತ್ತೀರಿ.

**ಮಕರ**
ಹೆಚ್ಚು ಆಶಾವಾದಿಗಳಾಗಿರಲು ನಿಮ್ಮನ್ನು ನೀವೇ ಪ್ರೇರೇಪಿಸಿಕೊಳ್ಳಿ. ಇದು ವಿಶ್ವಾಸ ಮತ್ತು ನಮ್ಯತೆ ಹೆಚ್ಚಿಸುತ್ತದಾದರೂ ಅದೇ ಸಮಯದಲ್ಲಿ ದ್ವೇಷ, ಅಸೂಯೆ, ಸೇಡಿನಂಥ ನಕಾರಾತ್ಮಕ ಭಾವನೆ ಹಿಂದೆ ಬಿಡಲು ಸಿದ್ಧವಾಗಿ.

**ಕುಂಭ**
ಧ್ಯಾನ, ಯೋಗ ಆಧ್ಯಾತ್ಮಿಕ ಹಾಗೂ ಭೌತಿಕ ಲಾಭಗಳಿಗೆರಡಕ್ಕೂ ಪ್ರಯೋಜನಕಾರಿಯಾಗುತ್ತದೆ. ಹೆಚ್ಚುವರಿ ಹಣವನ್ನು ರಿಯಲ್ ಎಸ್ಟೇಟ್‌ನಲ್ಲಿ ಹೂಡಿಕೆ ಮಾಡಿ. ಯಾರನ್ನೂ ಟೀಕಿಸಬೇಡಿ.

**ಮೀನ**
ನಿಮ್ಮ ಕೆಟ್ಟ ಚಟಗಳು ನಿಮ್ಮನ್ನು ನಾಶಗೊಳಿಸುತ್ತವೆ. ಇವು ನಿಮಗೆ ನಿಮ್ಮ ಸಹೋದರ, ಸಹೋದರಿಯ ಸಹಾಯದಿಂದ ಲಾಭವಾಗುವ ಸಾಧ್ಯತೆ ಮನೆಯಲ್ಲಿನ ಕೆಲವು ಬದಲಾವಣೆ ನಿಮ್ಮನ್ನು ಭಾವುಕರನ್ನಾಗಿಸಬಹುದು

**ಅಕ್ಟೋಬರ್ 23ರಂದು ಬೆಳಗ್ಗೆ 8ರಿಂದ ಸಂಜೆ 4ರವರೆಗೆ ಮತದಾನ ನಡೆಯಲಿದ್ದು, ಅಕ್ಟೋಬರ್ 27ರಂದು ಮತಗಳ ಎಣಿಕೆ ನಡೆಯಲಿದೆ**

# ಹೆಚ್ಚಿನ ಸಂಖ್ಯೆಯಲ್ಲಿ ಮತದಾನ ಮಾಡುವಂತೆ ಡಿಸಿ ಮನವಿ

**ಉದಯವಾಹಿನಿ, ಹಾವೇರಿ**

ಪಶ್ಚಿಮ ಪದವೀಧರರ ಕ್ಷೇತ್ರದಿಂದ ವಿಧಾನಪರಿಷತ್‌ಗೆ ಆಯ್ಕೆಯಾದ ಎಸ್.ವಿ. ಸಂಕನೂರು ಅವಧಿ ಇದೇ ನವೆಂಬರ್ 11ಕ್ಕೆ ಮುಕ್ತಾಯಗೊಳ್ಳಲಿದೆ. ಈ ಹಿನ್ನೆಲೆಯಲ್ಲಿ ಪಶ್ಚಿಮ ಪದವೀಧರರ ವಿಧಾನ ಪರಿಷತ್ ಕ್ಷೇತ್ರದ ಚುನಾವಣೆಗೆ ಆಯೋಗ ಅಧಿಸೂಚನೆ ಹೊರಡಿಸಿದೆ. ಅಕ್ಟೋಬರ್ 23 ರಂದು ಮತದಾನ ನಡೆಯಲಿದೆ.

ಪಶ್ಚಿಮ ಪದವೀಧರರ ಕ್ಷೇತ್ರವು ನಾಲ್ಕು ಜಿಲ್ಲೆಗಳ 90,460 ಪದವೀಧರ ಮತದಾರರನ್ನು ಹೊಂದಿದೆ. ಧಾರವಾಡ, ಉತ್ತರ ಕನ್ನಡ, ಹಾವೇರಿ ಹಾಗೂ ಗದಗ ಜಿಲ್ಲೆಗಳ ಪದವೀಧರ ಮತದಾರರನ್ನು ಕ್ಷೇತ್ರ ಒಳಗೊಂಡಿದೆ. ಈ ಚುನಾವಣೆಗೆ ಪ್ರಾದೇಶಿಕ ಆಯುಕ್ತರು ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಲಿದ್ದು, ನಾಲ್ಕು ಜಿಲ್ಲೆಗಳ ಜಿಲ್ಲಾಧಿಕಾರಿಗಳ ಸಹಾಯಕ ಚುನಾವಣಾಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸಲಿದ್ದಾರೆ. ಚುನಾವಣೆಗೆ ಸಂಬಂಧಿಸಿದ ನಾಮಪತ್ರ ಸಲ್ಲಿಕೆ ಸೇರಿದಂತೆ ಪ್ರಮುಖ ಪ್ರಕ್ರಿಯೆಗಳು ಧಾರವಾಡದಲ್ಲಿರುವ ಮುಖ್ಯ ಕಚೇರಿಯಲ್ಲಿ ನಡೆಯಲಿವೆ. ಮತಗಳ ಎಣಿಕೆಯೂ ಧಾರವಾಡದಲ್ಲಿಯೇ ನಡೆಯಲಿದೆ.

**ನಾಮಪತ್ರ ಸಲ್ಲಿಸಲು ಅಕ್ಟೋಬರ್ 6 ಕೊನೆಯ ದಿನ:** ಚುನಾವಣಾ ವೇಳಾಪಟ್ಟಿಯಂತೆ ಸೆಪ್ಟಂಬರ್ 29ರಂದು ಅಧಿಸೂಚನೆ ಪ್ರಕಟವಾಗಿದ್ದು, ಮಂಗಳವಾರ ನಾಮಪತ್ರ ಸಲ್ಲಿಕೆ ಆರಂಭವಾಗಿದೆ. ಅಕ್ಟೋಬರ್ 6 ನಾಮಪತ್ರ ಸಲ್ಲಿಕೆಗೆ ಕೊನೆಯ ದಿನ, ಅಕ್ಟೋಬರ್ 7ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ಅಕ್ಟೋಬರ್ 9ರಂದು ನಾಮಪತ್ರ ಹಿಂಪಡೆಯಲು ಕೊನೆಯ ಅವಕಾಶವಿದೆ.

ಅಕ್ಟೋಬರ್ 23ರಂದು ಬೆಳಿಗ್ಗೆ 8 ರಿಂದ ಸಂಜೆ 4ರವರೆಗೆ ಮತದಾನ ನಡೆಯಲಿದ್ದು, ಅಕ್ಟೋಬರ್ 27ರಂದು ಮತಗಳ ಎಣಿಕೆ ನಡೆಯಲಿದೆ. ಅಕ್ಟೋಬರ್ 31ರೊಳಗೆ ಚುನಾವಣಾ ಪ್ರಕ್ರಿಯೆ ಪೂರ್ಣಗೊಳ್ಳಲಿದೆ.

**ಜಿಲ್ಲೆಯಲ್ಲಿ 22,160 ಮತದಾರರು; 28 ಮತಗಟ್ಟೆಗಳ ಸಿದ್ಧತೆ:** ಹಾವೇರಿ ಜಿಲ್ಲೆಯಲ್ಲಿ 22,160 ಪದವೀಧರ ಮತದಾರರಿದ್ದಾರೆ. ಹಾವೇರಿ ಜಿಲ್ಲೆಯಲ್ಲಿ 2025ರ ನವೆಂಬರ್ 25ರಂದು ಕರಡು ಮತದಾರರ ಪಟ್ಟಿ ಪ್ರಕಟಿಸಲಾಗಿತ್ತು, ನಂತರ ಬಂದ ಅರ್ಜಿಗಳನ್ನು ಪರಿಶೀಲಿಸಿ ಡಿಸೆಂಬರ್ 30ರಂದು ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಲಾಗಿತ್ತು.

ಅಂತಿಮ ಪಟ್ಟಿಯ ಪ್ರಕಾರ ಜಿಲ್ಲೆಯಲ್ಲಿ ಒಟ್ಟು 22,160 ಪದವೀಧರ ಮತದಾರರು ಇದ್ದಾರೆ. ಇವರಲ್ಲಿ 13,951 ಪುರುಷರು ಹಾಗೂ 8,209 ಮಹಿಳೆಯರು ಇದ್ದಾರೆ. ಹಾವೇರಿ ತಾಲೂಕಿನಲ್ಲಿ 4,200, ರಾಣೇಬೆನ್ನೂರಿನಲ್ಲಿ 5,740, ಹಾನಗಲ್‌ನಲ್ಲಿ 2,943, ಶಿಗ್ಗಾಂವಿಯಲ್ಲಿ 2,118, ಸವಣೂರಿನಲ್ಲಿ 1,854, ಬ್ಯಾಡಗಿಯಲ್ಲಿ 1,988, ಹಿರೇಕೆರೂರಿನಲ್ಲಿ 2,016 ಹಾಗೂ ರಟ್ಟಿಹಳ್ಳಿಯಲ್ಲಿ 1,301 ಮತದಾರರು ಇದ್ದಾರೆ. ನಿರಂತರ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಇದುವರೆಗೆ ಜಿಲ್ಲೆಯಲ್ಲಿ 603 ಫಾರ್ಮ್–18 ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಮತದಾರರ ಪಟ್ಟಿಗೆ ಸಂಬಂಧಿಸಿದಂತೆ 20 ಆಕ್ಷೇಪಣೆಗಳು (ಫಾರ್ಮ್–7) ಬಂದಿದ್ದು, ಅವುಗಳ ಪರಿಶೀಲನೆ ನಡೆಯುತ್ತಿದೆ.

ಜಿಲ್ಲೆಯಲ್ಲಿ ಒಟ್ಟು 28 ಮೂಲ ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ಮತದಾರರ ಸಂಖ್ಯೆ ಹಾಗೂ ಮತದಾರರಿಗೆ ಇರುವ ದೂರವನ್ನು ಪರಿಗಣಿಸಿ ತಾಲ್ಲೂಕು ಕೇಂದ್ರಗಳ ಜೊತೆಗೆ ಅಗತ್ಯವಿರುವ ಕೆಲವು ಕಡೆ ಹೋಬಳಿ ಮಟ್ಟದಲ್ಲಿಯೂ ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ.



ಹೆಚ್ಚಿನ ಮತದಾರರಿರುವ ಮತಗಟ್ಟೆಗಳಲ್ಲಿ ಹೆಚ್ಚುವರಿ ಮತಗಟ್ಟೆ ಸ್ಥಾಪಿಸುವ ಕುರಿತು ರಾಜಕೀಯ ಪಕ್ಷಗಳ ಸಭೆ ನಡೆಸಿ ಪ್ರಸ್ತಾವನೆ ಕಳುಹಿಸುವ ಪ್ರಕ್ರಿಯೆ ನಡೆಯುತ್ತಿದೆ.
– ವಿಜಯಮಹಾಂತೇಶ ದಾನಮ್ಮನವರ, ಜಿಲ್ಲಾಧಿಕಾರಿ

1.ಅಕ್ಟೋಬರ್ 6 ಕೊನೆಯ ದಿನ
2.28 ಮತಗಟ್ಟೆಗಳ ಸಿದ್ಧತೆ
3.22,160 ಮತದಾರರು

### 22ರಿಂದಲೇ ನೀತಿ ಸಂಹಿತೆ ಜಾರಿ

ಚುನಾವಣೆ ಘೋಷಣೆಯಾದ ಹಿನ್ನೆಲೆಯಲ್ಲಿ ಸೆಪ್ಟೆಂಬರ್ 22 ರಿಂದಲೇ ಜಿಲ್ಲೆಯಲ್ಲಿ ಮಾದರಿ ನೀತಿ ಸಂಹಿತೆ ಜಾರಿಯಲ್ಲಿದೆ. ಚುನಾವಣಾ ಆಯೋಗದ ಮಾರ್ಗಸೂಚಿಗಳಂತೆ ಸರ್ಕಾರಿ ವ್ಯವಸ್ಥೆಯನ್ನು ಚುನಾವಣಾ ಉದ್ದೇಶಕ್ಕೆ ದುರುಪಯೋಗ ಪಡಿಸಿಕೊಳ್ಳದಂತೆ ಹಾಗೂ ಎಲ್ಲಾ ಅಭ್ಯರ್ಥಿಗಳಿಗೂ ಸಮಾನ ಅವಕಾಶ ಇರುವಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

## ನನೆಗುದಿಗೆ ಬಿದ್ದ ಕಾಮಗಾರಿ ವೀಕ್ಷಿಸಿ ಅಧಿಕಾರಿಗಳಿಗೆ ತರಾಟೆ
# ಚಿಮ್ಮಾನಚೋಡದಲ್ಲಿ ನೀರಿನ ಹಾಹಾಕಾರ! ಜಿಪಂ ಸಿಇಒ ಭೇಟಿ

**ಉದಯವಾಹಿನಿ, ಚಿಂಚೋಳಿ**

ತಾಲ್ಲೂಕಿನ ಚಿಮ್ಮಾನಚೋಡ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆಗೆ ಪಿಡಿಒ ಮತ್ತು ಕಾರ್ಯದರ್ಶಿಗಳು ಸ್ಪಂದಿಸದೆ ಇರುವುದರಿಂದ ಜಿಪಂ ಸಿಇಒ ರಾಹುಲ್ ಸಂಕನೂರ್ ಸ್ಥಳಕ್ಕೆ ಭೇಟಿನೀಡಿ ಅಧಿಕಾರಿಗಳಿಗೆ ತರಾಟೆಗೆ ತೆಗೆದುಕೊಂಡರು.

ಮಂಗಳವಾರ ತಾಲ್ಲೂಕಿನ ಚಿಮ್ಮಾನಚೋಡ, ಹಸರಗುಂಡಗಿ,ಸಾಲೆಬೀರನಳ್ಳಿ,ನಾಗಾಯಿದ್ಲಾಯಿ,ಕೊಳ್ಳೂರ ಗ್ರಾಮಗಳಿಗೆ ಭೇಟಿನೀಡಿ ಜಿಲ್ಲಾ ಪಂಚಾಯತ್ ವತಿಯಿಂದ ಕೈಗೊಂಡಿರುವ ಅಭಿವೃದ್ಧಿ ಕಾಮಾಗಾರಿಗಳನ್ನು ವಿಕಾಸೀತ ಭಾರತ ಯೋಜನೆಯಲ್ಲಿ ಮತ್ತು ಜಲಜೀವನ್ ಮಷೀನ್ ಅಡಿಯಲ್ಲಿ ಕೈಗೊಂಡಿರುವ ಕುಡಿಯುವ ನೀರಿನ ಕೆಲಸ ಕಾರ್ಯಗಳು ಇನ್ನು ಅಪೂರ್ಣಗೊಂಡಿದ್ದು ಅನೇಕ ದಿನಗಳಿಂದ ಮಂದಗತಿಯಲ್ಲಿ ನಡೆಯುತ್ತಿರುವುದರಿಂದ ಜಿಲ್ಲಾ ಸಿಇಓ ಅಧಿಕಾರಿಗಳಿಗೆ ತರಾಟೆಗೆ ತೆಗೆದುಕೊಂಡರು.

ಚಿಮ್ಮಾನಚೋಡ ಗ್ರಾಮದಲ್ಲಿ ವಿಕಾಸೀತ ಭಾರತ ಕಾಮಗಾರಿ ವಿಕ್ಷಣೆ ಮಾಡಿದ ಅವರು,ಕಾರ್ಮಿಕರಿಗೆ ಇನ್ನು ಹೆಚ್ಚಿನ ಉದ್ಯೋಗ ನೀಡಬೇಕು,ಅಲ್ಲದೆ ಜಲಜೀವನ್ ಕಾಮಗಾರಿಗಳು ಬೇಗನೇ ಪೂರ್ಣಗೊಳಿಸಿ ಗ್ರಾಮಸ್ಥರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕೆಂದು ಸೂಚನೆ ನೀಡಿದರು.

ಚಿಮ್ಮಾನಚೋಡ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿನೀಡಿದ ಅವರು, ಆಸ್ಪತ್ರೆ ಅವ್ಯವಸ್ಥೆ ರೋಗಿಗಳಿಗೆ ಸೂಕ್ತ ಚಿಕಿತ್ಸೆ ಸಿಗದೆ ವೈದ್ಯರ ಗೈರುಹಾಜರು ವಿಷಯ ಅರಿತ ಅವರು ಸೇವೆಗೆ ಸರಿಯಾಗಿ ಯಾಕೆ ಬರುತ್ತಿಲ್ಲವೆಂದು ತಾಲ್ಲೂಕಾ ಆರೋ ವೈಧ್ಯಾಧಿಕಾರಿ ಸೈಯದ್ ಲತೀಫ್ ಅವರಿಗೆ ಕೇಳಿದರು.

ಸರ್ಕಾರಿ ಫ್ರೌಡಶಾಲೆಗೆ ಭೇಟಿನೀಡಿದ ಅವರು,ಮಕ್ಕಳಿಗೆ ಬಾಳೆಹಣ್ಣು ಮತ್ತು ಮೊಟ್ಟೆ ಕೊಡದೆ ಇರುವುದರಿಂದ ಮುಖ್ಯಗುರುಗಳಿಗೆ ತರಾಟೆಗೆ ತೆಗೆದುಕೊಂಡರು, ಮಕ್ಕಳಿಗೆ ಪೌಷ್ಟಿಕ ಆಹಾರ ಯಾಕೆ ಕೊಡುತ್ತಿಲ್ಲವೆಂದು ಪ್ರಶ್ನೆಸಿದರು,ಸಾಲೆಬೀರನಳ್ಳಿ ಗ್ರಾಮಕ್ಕೆ ಭೇಟಿ ನೀಡಿ ಜಲಜೀವನ್ ಮಿಷನ್ ಯೋಜನೆಯಡಿ ಕೈಗೊಂಡಿರುವ ಕಾಮಾಗಾರಿಗಳನ್ನು ಅನೇಕ ವರ್ಷಗಳಿಂದ




ನೆನೆಗುದಿಗೆ ಬಿದ್ದಿರುವುದು ಕಂಡು ಇಂಥಹ ಮಹತ್ವ ಪೂರ್ಣ ಯೋಜನೆಗಳು ನೆನೆಗುದಿಗೆ ಬಿದ್ದಿರುವ ಸರಿಯಲ್ಲ ಪೂರ್ಣಗೊಳಿಸುವಂತೆ ಎಇಇ ಉಮೇಶ ರಾಠೋಡ ಅವರಿಗೆ ಎಚ್ಚರಿಕೆ ನೀಡಿದರು.

ಸಾಲೆಬೀರನಳ್ಳಿ ಗ್ರಾಮದ ಹಿಂದುಳಿದ ವರ್ಗಗಳ ಇಲಾಖೆಯ ಮೆಟ್ರಿಕ್ ಪೂರ್ವ ಬಾಲಕರ ವಸತಿನಿಲಯಕ್ಕೆ ಬೇಟಿನೀಡಿದ ಅವರು,ಅಡಿಗೆ ಕೋಣೆ ಶೌಚಾಲಯ, ಕುಡಿಯುವ ನೀರು, ಕಿಟಕಿ ಬಾಗಿಲು,ಹಾಸಿಗೆ ಬೇಡ್ ಆಹಾರ ದ್ಯಾನಗಳು ಮತ್ತು ಮಕ್ಕಳಿಗೆ ನೀಡುವ ಊಟವನ್ನು ಪರಿಶೀಲಿಸಿ ವಿಧ್ಯಾರ್ಥಿಗಳಿಗೆ ವಿಚಾರಿಸಿದಾಗ ಊಟದ ಬಗ್ಗೆ ಕೇಳಿದರು ಊಟದ ಗುಣಮಟ್ಟ ಹಸಿಬಿಸಿ ತಿಳೌ ಸಾರು ನೀಡುತ್ತಿರುವುದು ಕೇಳಿ ಬಿಸಿಎಂ ಅಧಿಕಾರಿ ರಾಹುಲ್ ಪಂಚಾಶೀಲ್ ಅವರಿಗೆ ವಸತಿನಿಲಯದ ಅವ್ಯವಸ್ಥೆ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು. ಸಮೂದಾಯ ಭವನ ಮತ್ತು ಕೊಳ್ಳೂರ ಗ್ರಾಮದಲ್ಲಿ ಜಲಜೀವನ್ ಮಿಷನ್ ವಿಕಸೀತ ಭಾರತ ಯೋಜನೆ ಕಾಮಗಾರಿಗಳು ಪರಿಶೀಲಿಸಿದರು,ತದನಂತರಪವಾಸಿ ತಾಣ ಚಂದ್ರಂಪಳ್ಳಿ ಜಲಾಶಯಕ್ಕೆ ಭೇಟಿನೀಡಿದ ಅವರು,ಬೋಟಿಂಗ್ ವ್ಯವಸ್ಥೆ ಪ್ರವಾಸಿಗರಿಗೆ ಮೂಲಸೌಕರ್ಯ ಬಗ್ಗೆ ವನ್ಯಜೀವಿ ಧಾಮ ಉಪವಲಯ ಅರಣ್ಯಾಧಿಕಾರಿ ಸಂಜುಕುಮಾರ ಚವ್ಹಾಣ ಮತ್ತು ಸಿದ್ದರೂಡ ಹುಕ್ಕುಡಿ ಅವರಿಗೆ ಪ್ರಶ್ನೆಸಿದರು. ಚಂದ್ರಂಪಳ್ಳಿ ಪ್ರವಾಫಿ ತಾಣ ಹೆಚ್ಚಿನ ಅಭಿವೃದ್ಧಿ ಆಗಬೇಕು ಅಧಿಕಾರಿಗಳಿಗೆ ಸೂಚನೆ ನೀಡಿದರು. ಈ ಸಂದರ್ಭದಲ್ಲಿ ತಾಪಂ.ಇಓ ಸಂತೋಷಕುಮಾರ ಚವ್ಹಾಣ,ಬಿಇಓ ಧೂಳಪ್ಪ ಮಾಳೆನೋರ್,ಜಿಪಂ.ಎಇಇ ಪ್ರವೀಣ ಕುಮಾರ, ಕಾರ್ಯದರ್ಶಿ ಜಗನ್ನಾಥ ಚಟ್ನಳ್ಳಿ,ಪಿಡಿಓ ನಾಗೇಂದ್ರಪ್ಪ ಬೆಡಕಪಳ್ಳಿ,ಮಾಜಿ ಅಧ್ಯಕ್ಷ ಮಲ್ಲಿಕಾರ್ಜುನ ನರನಾಳ ಅನೇಕರಿದರು.

## ಸಾರಿಗೆ ಇಲಾಖೆ ನೌಕರರಿಗಾಗಿ ಆರೋಗ್ಯ ಶಿಬಿರ

**ಉದಯವಾಹಿನಿ, ಚಿತ್ರದುರ್ಗ**

ಕರ್ನಾಟಕ ಸರ್ಕಾರ, ಆಯುಷ್ ಇಲಾಖೆ ಬೆಂಗಳೂರು, ಜಿಲ್ಲಾಡಳಿತ ಜಿಲ್ಲಾ ಮತ್ತು ಪಂಚಾಯತ್ ಚಿತ್ರದುರ್ಗ, ಜಿಲ್ಲಾ ಆಯುಷ್ ಇಲಾಖೆ ಚಿತ್ರದುರ್ಗ ಹಾಗೂ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಚಿತ್ರದುರ್ಗ ವಿಭಾಗ ಇವರ ಸಂಯುಕ್ತಾಶ್ರಯದಲ್ಲಿ ಘಟಕದ ಚಾಲಕರಿಗೆ ನಿರ್ವಾಹಕರಿಗೆ ತಾಂತ್ರಿಕ ವರ್ಗದವರಿಗೆ, ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರಿಗೆ ದಿನಾಂಕ 29-9-2026 ರಂದು ಬೃಹತ್ ಆಯುಷ್ ಆರೋಗ್ಯ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಜಿಲ್ಲಾ ಆಯುಷ್ ಅಧಿಕಾರಿಗಳಾದ ಡಾ.ಚಂದ್ರಕಾಂತ್ ಎಸ್ ನಾಗಸಮುದ್ರ , ಕೆ ಎಸ್ ಆರ್ ಟಿ ಸಿ ಚಿತ್ರದುರ್ಗ ವಿಭಾಗೀಯ ನಿಯಂತ್ರಣ ಅಧಿಕಾರಿಗಳಾದ ಶ್ರೀಯುತ ವೆಂಕಟೇಶ್, ಕಾರ್ಮಿಕ ಕಲ್ಯಾಣ ಅಧಿಕಾರಿಗಳಾದ ಶ್ರೀಯುತ ರವಿ ಹಾಗೂ ವಿಭಾಗಿಯ ತಾಂತ್ರಿಕ ಅಭಿಯಂತರಾದ ಶ್ರೀಯುತ ನಾಗರಾಜ್, ಆಯುಷ್ ಕಛೇರಿಯ ಅಧೀಕ್ಷಕರಾದ ಶ್ರೀಯುತ ವಿಶ್ವನಾಥ್ ಹಿರೇಮಠ್ ಹಾಗೂ ಜಿಲ್ಲೆಯ ಆಯುಷ್ ವೈದ್ಯಾಧಿಕಾರಿಗಳು ಕಾರ್ಯಕ್ರಮವನ್ನು ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಿದರು. ಡಾ.ನಾರದಮುನಿ ಜಿ.ಬಿ. ಪ್ರಸ್ತಾವಿಕ ಭಾಷಣದಲ್ಲಿ ಮಾತನಾಡಿ ರಾಷ್ಟ್ರೀಯ ಆಯುಷ್ ಮಿಷನ್ ಅಡಿಯಲ್ಲಿ ಆಯೋಜಿಸಿರುವ ಬೃಹತ್ ಆರೋಗ್ಯ ಶಿಬಿರದ ರೂಪು ರೇಷೆಗಳು ಉದ್ದೇಶ ಮತ್ತು ಇದರ ಪ್ರಯೋಜನವನ್ನು ವಿವರಿಸಿದರು ಮತ್ತು ಶಿಬಿರದ ಸದುಪಯೋಗವನ್ನು ಪಡೆದು ಮುಂದುವರೆದ ಚಿಕಿತ್ಸಾ ಸೌಲಭ್ಯಕ್ಕಾಗಿ ಜಿಲ್ಲಾ ಆಯುಷ್ ಆಸ್ಪತ್ರೆ ಚಿತ್ರದುರ್ಗ ಇಲ್ಲಿಗೆ ಭೇಟಿ ನೀಡಲು ತಿಳಿಸಿದರು. ಜಿಲ್ಲಾ ಆಯುಷ್ ಅಧಿಕಾರಿಗಳಾದ ಡಾ. ಚಂದ್ರಕಾಂತ್ ಎಸ್ ನಾಗಸಮುದ್ರ ಇವರುಗಳು ಮಾತನಾಡಿ ಆಧುನಿಕ ಜೀವನದಲ್ಲಿ ಎಲ್ಲರೂ ಒಂದಲ್ಲ ಒಂದು ರೀತಿಯ ಒತ್ತಡ ಬದುಕಿನಲ್ಲಿದ್ದೇವೆ ಅದರಲ್ಲೂ ರಾಜ್ಯ ರಸ್ತೆ ಸಾರಿಗೆ ನಿಗಮದ ಚಾಲಕರು,ನಿರ್ವಾಹಕರು, ಕಾರ್ಮಿಕರು ಮತ್ತು ಆಡಳಿತ ಸಿಬ್ಬಂದಿ ವರ್ಗದವರು ಆಧುನಿಕ ಜೀವನ ಶೈಲಿಯ ರೋಗಗಳಾದ ಸಕ್ಕರೆ ಕಾಯಿಲೆ ರಕ್ತದೊತ್ತಡ ಗ್ಯಾಸ್ಟ್ರಿಕ್ ಮೂಳೆ ಮತ್ತು ಕೀಲು ಸಂಧಿ ರೋಗಗಳಿಂದ ಬಳಲುತ್ತಿರುವುದು ಕಂಡು ಬರುತ್ತದೆ ಆದ ಕಾರಣ ಶಾರೀರಿಕ ಮತ್ತು ಮಾನಸಿಕ ಆರೋಗ್ಯಕ್ಕಾಗಿ ಆಯುಷ್ ಚಿಕಿತ್ಸಾ ಪದ್ಧತಿಗಳನ್ನು ಅನುಸರಿಸಲು ತಿಳಿಸಿದರು ಹಾಗೂ ಬೃಹತ್ ಆರೋಗ್ಯ ಶಿಬಿರದ ಪ್ರಯೋಜನವನ್ನು ಪಡೆದುಕೊಳ್ಳಲು ಕೋರಲಾಗಿದೆ.




## ಚೆಕ್‌ಡ್ಯಾಂ ನಿರ್ಮಿಸಿ, ನೀರು ಉಳಿಸಿ

**ಉದಯವಾಹಿನಿ, ಕುಷ್ಟಗಿ**

ತಾಲ್ಲೂಕಿನ ಶಾಖಾಪುರದಿಂದ ಮದಲಗಟ್ಟಿ ಬಳಿಯ ನಿಡಶೇಸಿ ಕೆರೆಯವರೆಗಿನ ಹಳ್ಳ ಮಳೆ ಇಲ್ಲದಿದ್ದರೂ ಕೆರೆ ತುಂಬಿಸುವ ಯೋಜನೆಯಲ್ಲಿ ಕೃಷ್ಣಾ ನದಿಯಿಂದ ನೀರು ಬಿಟ್ಟಾಗ ತುಂಬಿ ಹರಿಯುತ್ತದೆ. ಅದರ ಅಕ್ಕಪಕ್ಕದಲ್ಲಿನ ಪ್ರದೇಶ ಸರ್ಕಾರಕ್ಕೆ ಸೇರಿದೆ. ಜನರ ಸಹಭಾಗಿತ್ವದಲ್ಲಿ ಜಲಸಂರಕ್ಷಣೆ ಮತ್ತು ಪರಿಸರ ಬೆಳವಣಿಗೆ ವಿಷಯಕ್ಕೆ ಸಂಬಂಧಿಸಿದಂತೆ ಅಭಿವೃದ್ಧಿ ಕೆಲಸ ಕೈಗೊಂಡರೆ ವನ್ಯಪ್ರಾಣಿಗಳಿಗೆ ಮತ್ತು ಪರಿಸರಕ್ಕೆ ಹೆಚ್ಚಿನ ಅನುಕೂಲವಾಗಲಿದೆ.'ಶಾಖಾಪುರ ಬಳಿ ಪ್ರಾದೇಶಿಕ ಅರಣ್ಯ ಇಲಾಖೆಗೆ ಸೇರಿದ ಅರಣ್ಯ ಪ್ರದೇಶ ಇದೆ. ಆದರೆ ಅದು ಹೆಸರಿಗೆ ಮಾತ್ರ, ಯಾವ ಅಭಿವೃದ್ಧಿಯೂ ಇಲ್ಲ. ಕೆಲ ದಶಕಗಳ ಹಿಂದೆ ನೀಲಗಿರಿ ಮರಗಳನ್ನು ಬೆಳೆಸಿದ್ದನ್ನು ಬಿಟ್ಟರೆ ಇಲ್ಲಿ ಯಾವ ಗಿಡಮರಗಳೂ ಇಲ್ಲ. ಬರೀ ಮುಳ್ಳುಕಂಟಿ ಬೆಳೆದಿವೆ. ಹಳ್ಳದಗುಂಟ ನಿಡಶೇಸಿ ಕೆರೆವರೆಗೂ ನೀಲಗಿರಿ ಗಿಡಗಳನ್ನು ಬೆಳೆಸಲಾಗಿದೆ. ಈಗ ನೀಲಗಿರಿ ಗಿಡಗಳನ್ನು ಬೆಳೆಸುವುದಕ್ಕೆ ಅವಕಾಶ ಇಲ್ಲ. ಅವುಗಳನ್ನು ಹೊರತುಪಡಿಸಿ ಅರಣ್ಯ ಜಾತಿಯ ಮತ್ತು ಪಶುಪಕ್ಷಿಗಳ ಆಹಾರ ಸರಪಳಿಗೆ ಅನುಕೂಲ ಕಲ್ಪಿಸುವ ಹಣ್ಣಿನ ಜಾತಿಯ ಸಸಿಗಳನ್ನು ಬೆಳೆಸುವುದಕ್ಕೆ ವಿಪುಲ ಅವಕಾಶಗಳಿವೆ' ಎನ್ನುತ್ತಾರೆ ಸಾರ್ವಜನಿಕರು. ಅದೇ ರೀತಿ ಈ ಭಾಗದಲ್ಲಿ ಮುಂಗಾರು ಕೈಕೊಟ್ಟು ಬರ ಆವರಿಸಿದೆ. ಹನಿ ನೀರಿಗೆ ಪಶುಪಕ್ಷಿಗಳು, ಪ್ರಾಣಿಗಳು, ಜಾನುವಾರುಗಳು ಪರದಾಡುವಂತಾಗಿತ್ತು. ಪರಿಸ್ಥಿತಿ ಹೀಗಿದ್ದರೂ ಈ ಹಳ್ಳದಲ್ಲಿ ಮಾತ್ರ ಬಹಳಷ್ಟು ನೀರು ಹರಿಯುತ್ತಿರುವುದು ಕೌತುಕ ಎನಿಸಿದರೂ ವಾಸ್ತವ. ಕಾರಣ ಕೆರೆ ತುಂಬಿಸುವ ಯೋಜನೆಯಲ್ಲಿ ಆಲಮಟ್ಟಿ ಜಲಾಶಯದಿಂದ ನೀರು ಬಿಡಲಾಗಿದ್ದು ಶಾಖಾಪುರ ಕೆರೆಯಲ್ಲಿ ಬಿದ್ದ ನೀರು ಈ ಹಳ್ಳದ ಮೂಲಕ ನಿಡಶೇಸಿ ಕೆರೆ ತಲುಪುತ್ತದೆ. "ಹರಿಯೋ ನೀರಿಗೆ ಅಲ್ಲಲ್ಲಿ ಚೆಕ್‌ಡ್ಯಾಂ ನಿರ್ಮಿಸಿದ್ರ ಚೊಲೊ ನೀರು ಬಾಳ ದಿನ ನಿಂತು ದನಕರ ಪ್ರಾಣಿಗಳಿಗೆ ಅನುಕೂಲ ಆಕೈತಿ ನೋಡ್ರಿ' ಎಂದು ಸ್ಥಳದಲ್ಲಿದ್ದ ಕುರಿಗಾಹಿ ಹನುಮಂತ ಕಲಕೇರಿ ಹೇಳಿದರು.

# ಮಕ್ಕಳಿಗೆ ಉತ್ತಮ ಮೌಲ್ಯ ಬಿತ್ತುತ್ತಿರುವ ಶಿಕ್ಷಕರು

**ಉದಯವಾಹಿನಿ, ಚಿಂಚೋಳಿ**

ಶಿಕ್ಷಕರು ಕನ್ನಡ ಭಾಷೆಯನ್ನು ಉಳಿಸಿಕೊಂಡು ಶಾಲಾಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ಜೋತೆ ಮೌಲ್ಯಗಳನ್ನು ನೀಡುತ್ತಿರುವುದು ಶಿಕ್ಷಕರು ಮಾತ್ರ ಎಂದು ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ವಿಜಯಕುಮಾರ ತೇಗಲತೀಪ್ಪಿ ಹೇಳಿದರು. ಪಟ್ಟಣದ ಸಿ.ಬಿ.ಪಾಟೀಲ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ತಾಲ್ಲೂಕು ಕಸಾಪ ಹಾಗೂ ಸಿಬಿ ಪಾಟೀಲ ಕಾಲೇಜು ಸಂಯುಕ್ತ ಆಶ್ರಯದಲ್ಲಿ ಶಿಕ್ಷಕರ ದಿನಾಚರಣೆಯ ನಿಮಿತ್ಯ ಸಾರ್ಥಕ ಶಿಕ್ಷಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದಡಿದರು. ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ದೇವೀಂದ್ರಪ್ಪ ಹೋಳ್ಕರ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಸುರೇಶ ಕೊರವಿ,ಚೇತನರೆಡ್ಡಿ,ಸಿಬಿ ಪಾಟೀಲ ಕಾಲೇಜು ಪ್ರಾಂಶುಪಾಲ ಮಾಣಿಕಮ್ಮಾ ಸುಲ್ತಾನಪೂರ ಮಾತನಾಡಿದರು. ಕಸಾಪ ತಾಲ್ಲೂಕಾಧ್ಯಕ್ಷ ಸುರೇಶ ದೇಶಪಾಂಡೆ ಸ್ವಾಗತಿಸಿದರು,ಪೂಜಾ ಬಂಕಲಗಿ ನಿರೂಪಿಸಿ ವಂದಿಸಿದರು. ಈ ಸಂದರ್ಭದಲ್ಲಿ ಸಾರಿಗೆ ವ್ಯವಸ್ಥಾಪಕ ಸುರೇಶ ತೇಗಲತೀಪ್ಪಿ,ವನಿತಾ,ಸಂತೋಷ ಕುಡ್ಡಳ್ಳಿ,ವಿಧ್ಯಾಸಾಗರ ದೇಶಮುಖ,ಅನೇಕರಿದರು.




### ಸಾರ್ಥಕ ಪ್ರಶಸ್ತಿ ಪುರಸ್ಕೃತ ಶಿಕ್ಷಕರು

ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಸಾರ್ಥಕ ಶಿಕ್ಷಕ ಪ್ರಶಸ್ತಿ ಪಡೆದ ಫ್ರೌಡ ಶಾಲಾ ವಿಭಾಗದ ಶಿಕ್ಷಕರು ಸೋಮನಾಥರೆಡ್ಡಿ,ರೇವಣಸಿದ್ದಯ್ಯಸ್ವಾಮಿ,ಸಂಜುಕುಮಾರ,ಮಲ್ಲಿಕಾರ್ಜುನ ನೆಲ್ಲಿ,ವಿಜಯಲಕ್ಷ್ಮಿ,ಕವಿತಾ ಹಾಗೂ ಪ್ರಾಥಮಿಕ ಶಾಲಾ ವಿಭಾಗದ ಶಿಕ್ಷಕರು ಶರಣಬಸಪ್ಪ ಓಗೆ,ರವೀಂದ್ರ ಗೌನೂರ ಪೋಲಕಪಳ್ಳಿ,ದತ್ತಾತ್ರೇಯ ಬುಗ್ಗೆ,ಹಣಮಂತ ಸಿನ್ನೂರ,ಅನೀಲಕುಮಾರ ಪವ್ಹಾರ,ಸಂಗನಬಸಮ್ಮ,ನೀಲಮ್ಮ,ಫೀರ್ದೋಸ್ ತಹಸೀನ್ ಶಿಕ್ಷಕರು ಸಾರ್ಥಕ ಶಿಕ್ಷಕ ಪ್ರಶಸ್ತಿ ಪ್ರದಾನ ಮಾಡಲಾಯಿತು.

## ಆಲಮಟ್ಟಿ: ನೀರಿಗಾಗಿ ತೆಲಂಗಾಣ ಸರ್ಕಾರ ಮನವಿ

**ಉದಯವಾಹಿನಿ, ಬಿಜಾಪುರ**

ಆಲಮಟ್ಟಿ ಮತ್ತು ನಾರಾಯಣಪುರ ಜಲಾಶಯಗಳಿಂದ ನೀರು ಕೋರಿ ತೆಲಂಗಾಣ ಸರ್ಕಾರವು ಕರ್ನಾಟಕಕ್ಕೆ ಸಲ್ಲಿಸಿರುವ ಮನವಿಗೆ ರೈತರಿಂದ ವಿರೋಧ ವ್ಯಕ್ತವಾಗುತ್ತಿದೆ. ಈ ಪರಿಸ್ಥಿತಿಯ ಸೂಕ್ಷ್ಮತೆಯನ್ನು ಅರಿತ ಕಾಂಗ್ರೆಸ್ ಸರ್ಕಾರವು ಈ ವಿಷಯದಲ್ಲಿ ಎಚ್ಚರಿಕೆಯ ಹೆಜ್ಜೆ ಇಡುತ್ತಿದೆ. ಒಣಗುತ್ತಿರುವ ಬೆಳೆಗಳನ್ನು ಉಳಿಸಿಕೊಳ್ಳಲು ನೀರು ನೀಡುವಂತೆ ಕೋರಿ ತೆಲಂಗಾಣ ಸರ್ಕಾರದ ಪ್ರತಿನಿಧಿಗಳು ಇತ್ತೀಚೆಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಪತ್ರ ಬರೆದಿದ್ದರು. ಶಿವಕುಮಾರ್ ಅವರು ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ಈ ವಿಷಯವನ್ನು ತಮ್ಮ 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡಿದ್ದರು.

### ನೀರು ಬಿಡುವ ಸ್ಥಿತಿಯಲ್ಲಿ ನಾವಿಲ್ಲ

ಜಿಲ್ಲೆಯು ತೀವ್ರ ಬರಗಾಲವನ್ನು ಎದುರಿಸುತ್ತಿರುವಾಗ ಆಲಮಟ್ಟಿ ಅಣೆಕಟ್ಟಿನಿಂದ ತೆಲಂಗಾಣಕ್ಕೆ ಯಾವುದೇ ನೀರನ್ನು ಬಿಡುಗಡೆ ಮಾಡಬಾರದು. ನಮ್ಮ ರೈತರ ಹಿತಾಸಕ್ತಿಯನ್ನು ಬಲಿಕೊಟ್ಟು ಬೇರೆಯವರಿಗೆ ನೀರು ನೀಡುವ ಸ್ಥಿತಿಯಲ್ಲಿ ನಾವಿಲ್ಲ ಎಂದು ಕುಲಕರ್ಣಿ ಹೇಳಿದರು.

ಆದರೆ, ತೆಲಂಗಾಣ ಸರ್ಕಾರದ ಈ ಮನವಿಗೆ ಕರ್ನಾಟಕದ, ಅದರಲ್ಲೂ ಮುಖ್ಯವಾಗಿ ವಿಜಯಪುರ ಜಿಲ್ಲೆಯ ಹಲವು ರೈತ ಸಂಘಟನೆಗಳಿಂದ ವಿರೋಧ ವ್ಯಕ್ತವಾಗಿದೆ. ತೆಲಂಗಾಣಕ್ಕೆ ನೀರು ಬಿಡುಗಡೆ ಮಾಡದಂತೆ ಕರ್ನಾಟಕ ರಾಜ್ಯ ರೈತ ಸಂಘದ ಸದಸ್ಯರು ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ. ನೆರೆಯ ರಾಜ್ಯದ ಮನವಿಯನ್ನು ಒಪ್ಪಿಕೊಳ್ಳದಂತೆ ಸಂಘದ ಜಿಲ್ಲಾ ಅಧ್ಯಕ್ಷ ಸಂಗಮೇಶ್ ಸಾಗರ್ ಮತ್ತು ಅಖಂಡ ಕರ್ನಾಟಕ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಅರವಿಂದ ಕುಲಕರ್ಣಿ ಸರ್ಕಾರವನ್ನು ಒತ್ತಾಯಿಸಿದ್ದಾರೆ. ಆಲಮಟ್ಟಿ ಅಣೆಕಟ್ಟಿನ ಎತ್ತರವನ್ನು 519 ಮೀಟರ್‌ನಿಂದ 524 ಮೀಟರ್‌ಗೆ ಹೆಚ್ಚಿಸಲು ಅಗತ್ಯವಿರುವ ಗೆಜೆಟ್ ಅಧಿಸೂಚನೆ ಹೊರಡಿಸುವಲ್ಲಿ ತೆಲಂಗಾಣವು ಹೇಗೆ ಅಡೆತಡೆಗಳನ್ನು ಉಂಟುಮಾಡುತ್ತಿದೆ ಎಂಬುದನ್ನು ನೀರಾವರಿ ಹೋರಾಟಗಾರ ಪಂಚಪ್ಪ ಕಲಬುರ್ಗಿ ರಾಜ್ಯ ಸರ್ಕಾರಕ್ಕೆ ನೆನಪಿಸಿದ್ದಾರೆ.

## KSRTC ವಿರುದ್ಧ ವಿದ್ಯಾರ್ಥಿನಿಯರ ಪ್ರತಿಭಟನೆ

**ಉದಯವಾಹಿನಿ, ಕೊಪ್ಪಳ**

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಸಿಬ್ಬಂದಿ ಮತ್ತೊಂದು ಎಡವಟ್ಟು ಮಾಡಿಕೊಂಡಿದ್ದು, ನಿಲ್ದಾಣದಲ್ಲಿ ವಿದ್ಯಾರ್ಥಿಗಳು ಇದ್ದರೂ ಬಸ್ ನಿಲ್ಲಿಸದೇ ಹೋದ ಕಾರಣ ಆಕ್ರೋಶಗೊಂಡ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದ ಘಟನೆ ವರದಿಯಾಗಿದೆ.

ಹೌದು.. ಪರೀಕ್ಷೆಗೆ ತೆರಳಬೇಕಿದ್ದ ವಿದ್ಯಾರ್ಥಿಗಳಿದ್ದರೂ KSRTC ಬಸ್ ನಿಲ್ದಾಣದಲ್ಲಿ ನಿಲ್ಲಿಸದೆ ಮುಂದೆ ಸಾಗಿದ ಆರೋಪ ಕೇಳಿಬಂದಿದ್ದು, ಇದರಿಂದ ಆಕ್ರೋಶಗೊಂಡ ವಿದ್ಯಾರ್ಥಿನಿಯೊಬ್ಬಳು ಬಸ್‌ನ್ನು ಹಿಂಬಾಲಿಸಿ ಬಸ್ ತಡೆದು ಚಾಲಕ ಹಾಗೂ ನಿರ್ವಾಹಕರನ್ನು ಪ್ರಶ್ನಿಸಿದ ಘಟನೆ ಕೊಪ್ಪಳ ತಾಲ್ಲೂಕಿನ ಬಿ. ಹೊಸಹಳ್ಳಿ ಗ್ರಾಮದಲ್ಲಿ ನಡೆದಿದೆ. ಬಿ. ಹೊಸಹಳ್ಳಿ ಬಸ್ ನಿಲ್ದಾಣದಲ್ಲಿ ಹಲವು ವಿದ್ಯಾರ್ಥಿಗಳು ಹಟ್ಟಿ–ಮುಂಡರಗಿ ಕಡೆಯಿಂದ ಕೊಪ್ಪಳ ನಗರಕ್ಕೆ ತೆರಳುತ್ತಿದ್ದ KSRTC ಬಸ್‌ಗಾಗಿ ಕಾಯುತ್ತಿದ್ದರು. ಆದರೆ ಬಸ್ ನಿಲ್ದಾಣದಲ್ಲಿ ನಿಲ್ಲಿಸದೆ ಮುಂದೆ ಸಾಗಿತು ಎನ್ನಲಾಗಿದೆ.

ಇದೇ ವೇಳೆ ಶಾಲೆಯಲ್ಲಿ ಪರೀಕ್ಷೆ ಇದ್ದ ಕಾರಣ ಆತಂಕಗೊಂಡ ವಿದ್ಯಾರ್ಥಿನಿಯೊಬ್ಬಳು ಬಸ್‌ನ್ನು ಹಿಂಬಾಲಿಸಿಕೊಂಡು ಹೋಗಿ ಸ್ವಲ್ಪ ದೂರದಲ್ಲಿ ಅದನ್ನು ನಿಲ್ಲಿಸುವಲ್ಲಿ ಯಶಸ್ವಿಯಾಗಿದ್ದಾಳೆ. ಬಳಿಕ ಚಾಲಕ ಹಾಗೂ ನಿರ್ವಾಹಕರನ್ನು ಪ್ರಶ್ನಿಸಿ, ನಿಗದಿತ ಬಸ್ ನಿಲ್ದಾಣದಲ್ಲಿ ಬಸ್ ಏಕೆ ನಿಲ್ಲಿಸಲಿಲ್ಲ ಎಂದು ತರಾಟೆಗೆ ತೆಗೆದುಕೊಂಡಿದ್ದಾಳೆ.

**ಫ್ರೆಂಚ್ ವಿಜ್ಞಾನಿ ಲೂಯಿ ಪಾಶ್ಚರ್ ಅವರ ಪುಣ್ಯಸ್ಮರಣೆಯ ಅಂಗವಾಗಿ ರೇಬೀಸ್ ರೋಗ ತಡೆಗಟ್ಟುವಿಕೆ ಮತ್ತು ನಿಯಂತ್ರಣದ ಕುರಿತು ಜಾಗೃತಿ ಕಾರ್ಯಕ್ರಮ**

# ಪಶುವೈದ್ಯಕೀಯ ಮಹಾವಿದ್ಯಾಲಯದಲ್ಲಿ ವಿಶ್ವ ರೇಬೀಸ್ ದಿನಾಚರಣೆ

**ಉದಯವಾಹಿನಿ, ಬೀದರ್**

"ರೇಬೀಸ್ ರೋಗಮುಕ್ತ ಸಮಾಜ ನಿರ್ಮಾಣ ಮಾಡಲು ಸಾರ್ವಜನಿಕರಲ್ಲಿ ವ್ಯಾಪಕ ಜಾಗೃತಿ ಮೂಡಿಸುವುದು ಅತ್ಯಗತ್ಯ. ರೋಗ ಬಂದ ನಂತರ ಚಿಕಿತ್ಸೆ ಪಡೆಯುವುದಕ್ಕಿಂತ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವುದು ಹೆಚ್ಚು ಸೂಕ್ತ" ಎಂದು ಬೀದರ್‌ನ ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ವ್ಯವಸ್ಥಾಪಕ ಮಂಡಳಿಯ ಸದಸ್ಯರಾದ ಬಸವರಾಜ್ ಭತಮುರ್ಗೆ ಅವರು ಹೇಳಿದರು.

ಬೀದರ್ ಪಶುವೈದ್ಯಕೀಯ ಮಹಾವಿದ್ಯಾ ಲಯದ (ವಿ.ಸಿ.ಬಿ.) ಆರೋಗ್ಯ ಕೇಂದ್ರ, ಮಹಾವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ಸಂಘ (ಅಲುಮ್ನಿ ಅಸೋಸಿಯೇಷನ್) ಹಾಗೂ ಹೈದರಾಬಾದ್‌ನ ಇಂಡಿಯನ್ ಇಮ್ಯುನೊಲಾಜಿಕಲ್ಸ್ ಲಿಮಿಟೆಡ್ ಇವುಗಳ ಜಂಟಿ ಸಹಯೋಗದಲ್ಲಿ ಆಯೋಜಿಸಲಾಗಿದ್ದ 20ನೇ "ವಿಶ್ವ ರೇಬೀಸ್ ದಿನ" ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಫ್ರೆಂಚ್ ವಿಜ್ಞಾನಿ ಲೂಯಿ ಪಾಶ್ಚರ್ ಅವರ ಪುಣ್ಯಸ್ಮರಣೆಯ ಅಂಗವಾಗಿ ರೇಬೀಸ್ ರೋಗ ತಡೆಗಟ್ಟುವಿಕೆ ಮತ್ತು ನಿಯಂತ್ರಣದ ಕುರಿತು ವಿದ್ಯಾರ್ಥಿಗಳು, ವೃತ್ತಿಪರರು, ಬೋಧಕ ಸಿಬ್ಬಂದಿ, ಸಾಕುಪ್ರಾಣಿಗಳ ಮಾಲೀಕರು ಹಾಗೂ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಪ್ರಮುಖ ಮೂರು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು.

ರೇಬೀಸ್ ರೋಗ ತಡೆಗಟ್ಟುವ ಮುನ್ನೆಚ್ಚರಿಕಾ ಕ್ರಮವಾಗಿ ಹೆಚ್ಚಿನ ಅಪಾಯ ಎದುರಿಸುವ (ಹೈ–ರಿಸ್ಕ್) ಗುಂಪಿನಲ್ಲಿರುವ ವಿದ್ಯಾರ್ಥಿಗಳು ಮತ್ತು ಬೋಧಕ ಸಿಬ್ಬಂದಿಗೆ ಉಚಿತ ರೇಬೀಸ್ ಮುನ್ನೆಚ್ಚರಿಕಾ ಲಸಿಕೆಯನ್ನು ನೀಡಲಾಯಿತು.




1.ಫ್ರೆಂಚ್ ವಿಜ್ಞಾನಿ ಲೂಯಿ ಪಾಶ್ಚರ್
2.ರೇಬೀಸ್ ರೋಗ ತಡೆಗಟ್ಟುವಿಕೆ ಕುರಿತು
3.ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಮಹಾವಿದ್ಯಾಲಯದ ಡೀನ್ ಡಾ.ಎಂ.ಕೆ. ತಾಂಡಲೆ ಅವರು, "ಪ್ರಾಣಿಗಳಲ್ಲಿ ರೇಬೀಸ್ ರೋಗವನ್ನು ತಡೆಗಟ್ಟುವುದರ ಮೂಲಕ ಮಾತ್ರ ಮಾನವರಲ್ಲಿ ಈ ರೋಗ ಹರಡುವುದನ್ನು ತಡೆಯಲು ಸಾಧ್ಯ. ಇದಕ್ಕೆ ಪ್ರತಿಯೊಬ್ಬರ ಸಹಕಾರ ಮತ್ತು ಒಗ್ಗಟ್ಟಿನ ಕೆಲಸ ಅತ್ಯಗತ್ಯ" ಎಂದು ಒತ್ತು ನೀಡಿದರು.

### ಒಟ್ಟಾಗಿ ಶ್ರಮಿಸೋಣ, ರೇಬೀಸ್ ಗೆಲ್ಲೋಣ

ಕಾರ್ಯಕ್ರಮದ ಮುಖ್ಯ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದ ಎಸ್ ಆರ್‌ಡಿಐಎಲ್ ವಿಭಾಗದ ಪ್ರಾಧ್ಯಾಪಕ ಹಾಗೂ ಮುಖ್ಯಸ್ಥರಾದ ಡಾ. ಶಿವರಾಜ್ ಮುರಗ್ ಅವರು ಮಾತನಾಡಿ, ಪ್ರಸಕ್ತ ಸಾಲಿನ ವಿಶ್ವ ರೇಬೀಸ್ ದಿನದ ಘೋಷವಾಕ್ಯ (ಥೀಮ್) "ಒಟ್ಟಾಗಿ ಶ್ರಮಿಸೋಣ, ರೇಬೀಸ್ ಗೆಲ್ಲೋಣ" ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಕಾರ್ಯಕ್ರಮದ ಕೊನೆಯಲ್ಲಿ ಬೀದರ್ ಪಶುವೈದ್ಯಕೀಯ ಮಹಾವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ಸಂಘದ (Alumni Association) ವತಿಯಿಂದ ಸಂಪನ್ಮೂಲ ವಿಜ್ಞಾನಿ ಡಾ. ಶಿವರಾಜ್ ಮುರಗ್ ಅವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.

ಬೀದರ್ ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರಿನ ಐ.ಎ.ಹೆಚ್. ಮತ್ತು ವಿ.ಬಿ. (IAH&VB) ಹಾಗೂ ಹಳೆಯ ವಿದ್ಯಾರ್ಥಿಗಳ ಸಂಘದ ಜಂಟಿ ಆಶ್ರಯದಲ್ಲಿ ಸಾಕುಪ್ರಾಣಿಗಳಿಗೆ ಉಚಿತ ರೇಬೀಸ್ ನಿರೋಧಕ ಲಸಿಕಾ ಶಿಬಿರವನ್ನು ಯಶಸ್ವಿಯಾಗಿ ಆಯೋಜಿಸಲಾಯಿತು.

ಈ ಲಸಿಕಾ ಅಭಿಯಾನದಲ್ಲಿ ಒಟ್ಟು 111 ವಿದ್ಯಾರ್ಥಿಗಳು ಮತ್ತು ಬೋಧಕ ಸಿಬ್ಬಂದಿಗೆ 0, 7 ಮತ್ತು 21 ದಿನಗಳ ವೇಳಾಪಟ್ಟಿಯ ಅನುಸಾರ ನೀಡಲಾಗುವ ಲಸಿಕೆಯ ಮೊದಲ ಡೋಸ್ (1st Dose) ಅನ್ನು ಉಚಿತವಾಗಿ ನೀಡಲಾಯಿತು. ಅಲ್ಲದೆ, ಈ ಶಿಬಿರದಲ್ಲಿ ಸಾರ್ವಜನಿಕರ 40ಕ್ಕೂ ಹೆಚ್ಚು ಸಾಕುಪ್ರಾಣಿಗಳಿಗೂ ಉಚಿತವಾಗಿ ರೇಬೀಸ್ ನಿರೋಧಕ ಲಸಿಕೆಯನ್ನು ಹಾಕಲಾಯಿತು.

### ನಿರ್ದಿಷ್ಟ ಗುಪ್ತಚರ ಮಾಹಿತಿಯ ಆಧಾರದ ಮೇಲೆ ಕಾರ್ಯಾಚರಣೆ, ಐವರು ಪಾಕಿಸ್ತಾನಿಗಳ ಬಂಧನ

## 3,000 ಕೋಟಿ ಮೌಲ್ಯದ ಮಾದಕ ವಸ್ತು ಕಳ್ಳಸಾಗಣೆ ಜಾಲ ಭೇದಿಸಿದ ಕರಾವಳಿ ರಕ್ಷಣಾ ಪಡೆ



**ಎರ್ನಾಕುಲಂ (ಕೇರಳ):** ಲಕ್ಷದ್ವೀಪದ ಪಶ್ಚಿಮಕ್ಕೆ ಅರೇಬಿಯನ್ ಸಮುದ್ರದಲ್ಲಿ ಇರಾನ್‌ನ ದೋಣಿಯಲ್ಲಿ 3,000 ಕೋಟಿ ರೂ ಮೌಲ್ಯದ 526 ಕೆಜಿ ಮಾದಕವಸ್ತುಗಳನ್ನು ಭಾರತೀಯ ಕರಾವಳಿ ರಕ್ಷಕ ಪಡೆ ಮತ್ತು ಗುಜರಾತ್ ಭಯೋತ್ಪಾದನಾ ನಿಗ್ರಹ ದಳವು ಜಂಟಿಯಾಗಿ ವಶಪಡಿಸಿಕೊಂಡಿದೆ. ಅಲ್ಲದೇ ಈ ಪ್ರಕರಣದಲ್ಲಿ ಐವರು ಪಾಕಿಸ್ತಾನಿ ಪ್ರಜೆಗಳನ್ನು ಬಂಧಿಸಲಾಗಿದೆ.

ನಿರ್ದಿಷ್ಟ ಗುಪ್ತಚರ ಮಾಹಿತಿಯ ಆಧಾರದ ಮೇಲೆ, ಕರಾವಳಿ ರಕ್ಷಣಾ ಪಡೆಯು ತನ್ನ ವಾಯು ಮತ್ತು ನೌಕಾ ಕಣ್ಗಾವಲು ವ್ಯವಸ್ಥೆಗಳನ್ನು ಬಳಸಿಕೊಂಡು ವ್ಯಾಪಕ ಶೋಧ ಕಾರ್ಯಾಚರಣೆ ನಡೆಸಿತು. ಸೆಪ್ಟೆಂಬರ್ 25 ರಂದು, ಅಧಿಕಾರಿಗಳು ರೇಡಾರ್‌ಗಳು ಮತ್ತು ವಿಮಾನಗಳನ್ನು ಬಳಸಿ ಇರಾನ್ ಮೂಲದ ಅನುಮಾನಾಸ್ಪದ ದೋಣಿಯೊಂದರ ಚಲನವಲನಗಳನ್ನು ನಿಕಟವಾಗಿ ಗಮನಿಸಿದರು. ಭದ್ರತಾ ಪಡೆಗಳನ್ನು ಕಂಡ ಕೂಡಲೇ ದೋಣಿ ತಪ್ಪಿಸಿಕೊಳ್ಳಲು ವೇಗ ಹೆಚ್ಚಿಸಿತಾದರೂ, ಕರಾವಳಿ ರಕ್ಷಣಾ ಪಡೆಯ ಹಡಗುಗಳು ತಕ್ಷಣವೇ ಅದನ್ನು ಬೆನ್ನಟ್ಟಿ, ಸುತ್ತುವರಿದು ದೋಣಿಯನ್ನು ವಶಕ್ಕೆ ಪಡೆಯಿತು. ನಂತರ ನಡೆಸಿದ ಕೂಲಂಕಷ ಪರಿಶೀಲನೆಯಲ್ಲಿ, ಹೆರಾಯಿನ್ ಮತ್ತು ಮೆಥಾಂಫೆಟಮೈನ್‌ನಂತಹ ಮಾರಣಾಂತಿಕ ಮಾದಕವಸ್ತುಗಳು ಸೇರಿದಂತೆ ಉತ್ತಮ ಗುಣಮಟ್ಟದ ನಿಷೇಧಿತ ವಸ್ತುಗಳನ್ನು ವಶಪಡಿಸಿಕೊಳ್ಳಲಾಯಿತು.

1. ಕರಾವಳಿ ರಕ್ಷಣಾ ಪಡೆ ಸಿಬ್ಬಂದಿ
2. ವಾಯು,ನೌಕಾ ಕಣ್ಗಾವಲು ವ್ಯವಸ್ಥೆ
3. ವ್ಯಾಪಕ ಶೋಧ ಕಾರ್ಯಾಚರಣೆ

ಬಳಿಕ ಭದ್ರತಾ ಪಡೆಗಳು ಅಕ್ರಮವಾಗಿ ಪ್ರಯಾಣಿಸುತ್ತಿದ್ದ ಪಾಕಿಸ್ತಾನಿ ಪ್ರಜೆಗಳನ್ನು ಅಧಿಕೃತವಾಗಿ ವಶಕ್ಕೆ ತೆಗೆದುಕೊಂಡವು. ವಶಪಡಿಸಿಕೊಳ್ಳಲಾದ ದೋಣಿ, ಮಾದಕವಸ್ತುಗಳ ಸರಕು ಮತ್ತು ಆರೋಪಿಗಳನ್ನು ಸಶಸ್ತ್ರ ಸಿಬ್ಬಂದಿಯ ಬಿಗಿ ಭದ್ರತೆಯೊಂದಿಗೆ ಮುಂಬೈ ಬಂದರಿಗೆ ಕರೆತರಲಾಯಿತು. ಮುಂಬೈನಲ್ಲಿ ಭಯೋತ್ಪಾದನಾ ನಿಗ್ರಹ ದಳದ ಜೊತೆಗೆ ವಿವಿಧ ಕೇಂದ್ರ ಮತ್ತು ರಾಜ್ಯ ಭದ್ರತಾ ಸಂಸ್ಥೆಗಳ ನೇತೃತ್ವದಲ್ಲಿ ಸದ್ಯ ತೀವ್ರ ವಿಚಾರಣೆ ಮತ್ತು ಕಾನೂನು ಪ್ರಕ್ರಿಯೆಗಳು ನಡೆಸಿದ್ದಾರೆ.

ಈ ಮಹತ್ವದ ಸಾಧನೆಯು ಕರಾವಳಿ ಕಾವಲು ಪಡೆಯ ಬಲಿಷ್ಠ ಕಣ್ಗಾವಲು ಸಾಮರ್ಥ್ಯಗಳನ್ನು ಮತ್ತು ಭಾರತದ ಸಮುದ್ರ ಗಡಿಗಳು ಮತ್ತು ವಿಸ್ತೃತ ವಲಯಗಳಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಖಾತ್ರಿಪಡಿಸುವಲ್ಲಿ ಅದರ ರಾಜಿಯಾಗದ ನಿಲುವನ್ನು ಒತ್ತಿಹೇಳಿದೆ. ಈ ಕಾರ್ಯಾಚರಣೆ ಮೂಲಕ ಭಯೋತ್ಪಾದಕ ಸಂಘಟನೆಗಳ ಹಣಕಾಸು ಜಾಲಗಳನ್ನು ಯಶಸ್ವಿಯಾಗಿ ಮಟ್ಟ ಹಾಕಲಾಗಿದೆ. ಈ ಕಾರ್ಯಾಚರಣೆಯು ಕಡಲ ಮಾದಕವಸ್ತು ಕಳ್ಳಸಾಗಣೆ ತಡೆಯಲು ಕೇಂದ್ರ ಸಂಸ್ಥೆಗಳೊಂದಿಗೆ ಕರಾವಳಿ ಕಾವಲು ಪಡೆಯ ನಿರಂತರ ಸಹಯೋಗದ ಪ್ರಯತ್ನಗಳ ಭಾಗವಾಗಿದೆ. ಇದಕ್ಕೂ ಮೊದಲು, 2025ರ ಏಪ್ರಿಲ್‌ನಲ್ಲಿ ಕರಾವಳಿ ಕಾವಲು ಪಡೆ ಗುಜರಾತ್ ಕರಾವಳಿಯಲ್ಲಿ ಎಟಿಎಸ್ ಜೊತೆ ಇದೇ ರೀತಿಯ ಜಂಟಿ ಕಾರ್ಯಾಚರಣೆಯಲ್ಲಿ 307 ಕೆಜಿ ಮಾದಕವಸ್ತುಗಳನ್ನು ವಶಪಡಿಸಿಕೊಂಡಿತ್ತು. ಕೇರಳ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಕಾರ್ಯಾಚರಣೆ ನಡೆಸುತ್ತಿರುವ ಮಾದಕವಸ್ತು ಮಾಫಿಯಾ ಜಾಲಗಳು ಅಧಿಕೃತ ಅಂಕಿ – ಅಂಶಗಳು ಸೂಚಿಸುವುದಕ್ಕಿಂತಲೂ ಹೆಚ್ಚು ವ್ಯಾಪಕವಾಗಿವೆ ಎಂದು ವರದಿಗಳು ತಿಳಿಸುತ್ತವೆ. ಈ ಜಾಲಗಳು ಮಾದಕವಸ್ತುಗಳ ಕಳ್ಳಸಾಗಣೆಗೆ ಕ್ರಿಪ್ಟೋಕರೆನ್ಸಿ ವಹಿವಾಟುಗಳು ಮತ್ತು ಹವಾಲಾ ಮಾರ್ಗಗಳನ್ನು ಹೆಚ್ಚಾಗಿ ಅವಲಂಬಿಸಿವೆ. ಕೊಚ್ಚಿಯಂತಹ ನಗರಗಳ ಭೂಗತ ಜಗತ್ತಿನಲ್ಲಿ ಬೃಹತ್ ಜಾಲವೊಂದು ಸಕ್ರಿಯವಾಗಿದ್ದು, ಕೇರಳಕ್ಕೆ ಹೆಚ್ಚಿನ ಪ್ರಮಾಣದ ಮಾದಕವಸ್ತುಗಳನ್ನು ಪೂರೈಸಲು ವಿದೇಶಗಳಿಗೆ ಹಣವನ್ನು ವರ್ಗಾಯಿಸುತ್ತಿದೆ ಎಂದು ಗುಪ್ತಚರ ಮಾಹಿತಿಯು ಸೂಚಿಸಿದೆ.

### ಭದ್ರತೆ ಕಾಯ್ದುಕೊಳ್ಳಲು ಸನ್ನದ್ಧ

ಇಂತಹ ಬೆದರಿಕೆಗಳ ನಡುವೆಯೂ, ದೇಶದ ಕಡಲ ಗಡಿಗಳನ್ನು ಕ್ಷಣಮಾತ್ರದಲ್ಲಿ ರಕ್ಷಿಸಲು, ಯುವಜನತೆ ಹಾಗೂ ಮುಂದಿನ ಪೀಳಿಗೆಯನ್ನು ಮಾದಕವಸ್ತುಗಳ ಮಾರಕ ಪಿಡುಗಿನಿಂದ ಕಾಪಾಡಲು ಮತ್ತು ಕಡಲ ಪ್ರದೇಶದಲ್ಲಿ ಸಂಪೂರ್ಣ ಭದ್ರತೆ ಕಾಯ್ದುಕೊಳ್ಳಲು ಭಾರತೀಯ ಕರಾವಳಿ ರಕ್ಷಕ ಪಡೆ ಸಂಪೂರ್ಣ ಸನ್ನದ್ಧವಾಗಿದೆ ಎಂದು ಅಧಿಕಾರಿಗಳು ಪುನರುಚ್ಚರಿಸಿದ್ದಾರೆ.

## ಬಡ್ಗಾಮ್‌ನಲ್ಲಿ ಗುಂಡಿನ ಚಕಮಕಿ: LeT ಮೋಸ್ಟ್ ವಾಂಟೆಡ್ ಉಗ್ರ ಹಾಶಿಮ್ ಮೂಸಾ ಹೊಡೆದುರುಳಿಸಿದ ಸೇನೆ

**ಶ್ರೀನಗರ:** ಮಂಗಳವಾರ ಬಡ್ಗಾಮ್ ಜಿಲ್ಲೆಯ ಗುರ್ವತ್‌ಕಲನ್ ಪ್ರದೇಶದಲ್ಲಿ ಭದ್ರತಾ ಪಡೆಗಳು ಮತ್ತು ಉಗ್ರರ ನಡುವೆ ಗುಂಡಿನ ಚಕಮಕಿ ನಡೆದಿದೆ. ಈ ಗುಂಡಿನ ಚಕಮಕಿಯಲ್ಲಿ ಓರ್ವ ಉಗ್ರ ಹತನಾಗಿದ್ದಾನೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಗುರ್ವತ್ ಕಲನ್ ಪ್ರದೇಶದಲ್ಲಿ ಉಗ್ರರ ಇರುವಿಕೆ ಪತ್ತೆಯಾದ ನಂತರ ಭದ್ರತಾ ಪಡೆಗಳು ಜಂಟಿ ಕಾರ್ಯಾಚರಣೆ ಆರಂಭಿಸಿದವು ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಸಂಬಂಧಿತ ಪ್ರದೇಶವನ್ನು ಸುತ್ತುವರಿಯಲಾಗಿದ್ದು, ಹೆಚ್ಚುವರಿ ಭದ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಪ್ರಸ್ತುತ ಕಾರ್ಯಾಚರಣೆ ಮುಂದುವರಿದಿದೆ ಎಂದು ತಿಳಿದು ಬಂದಿದೆ. ಹತನಾದ ಉಗ್ರನನ್ನು ಮೊಹಮ್ಮದ್ ಆಸಿಫ್ ಅಲಿಯಾಸ್ ಹಾಶಿಮ್ ಮೂಸಾ ಎಂದು ಗುರುತಿಸಲಾಗಿದೆ ಎಂದು ಸೈನ್ಯದ ಕಾಶ್ಮೀರ ಮೂಲದ ಚಿನಾರ್ ಕಾರ್ಪ್ಸ್ ಹೇಳಿದೆ. ಮಧ್ಯ ಕಾಶ್ಮೀರದ ಯೂಸ್‌ಮಾರ್ಗ್‌ನ ಕೊರಾಗ್ ಪ್ರದೇಶದಲ್ಲಿ ಜಮ್ಮು ಮತ್ತು ಕಾಶ್ಮೀರ ಪೊಲೀಸ್ ಹಾಗೂ ಸಿಆರ್‌ಪಿಎಫ್ ಜೊತೆಗೂಡಿ ಜಂಟಿ ಶೋಧ ಕಾರ್ಯಾಚರಣೆಯನ್ನು ನಡೆಸಿದ್ದಾಗಿ ಸೇನೆ ತನ್ನ ಸೋಷಿಯಲ್ ಮೀಡಿಯಾ ಪೋಸ್ಟ್‌ನಲ್ಲಿ ತಿಳಿಸಿದೆ. 'ಆಪರೇಷನ್ ಕೊರಾಗ್' ಕಾರ್ಯಾಚರಣೆಯ ಭಾಗವಾಗಿ, ಪಾಲ್ಮೈದಾನ್ ಪ್ರದೇಶದಲ್ಲಿ ಇಂದು ಮುಂಜಾನೆ ನಡೆಸಿದ ಶೋಧದ ವೇಳೆ, ಪಾಕಿಸ್ತಾನ ಮೂಲದ ಲಷ್ಕರ್–ಎ–ತೈಬಾ ಉಗ್ರ ಮೊಹಮ್ಮದ್ ಆಸಿಫ್ ಅಲಿಯಾಸ್ ಹಾಶಿಮ್ ಮೂಸಾ ಮೃತದೇಹ ಹಾಗೂ ಯುದ್ಧೋಪಕರಣಗಳನ್ನು ವಶಪಡಿಸಿಕೊಳ್ಳಲಾಗಿದೆ. ಕಾರ್ಯಾಚರಣೆ ಮುಂದುವರಿದಿದೆ ಎಂದು ಚಿನಾರ್ ಕಾರ್ಪ್ಸ್ 'ಎಕ್ಸ್' ನಲ್ಲಿನ ಮತ್ತೊಂದು ಪೋಸ್ಟ್‌ನಲ್ಲಿ ತಿಳಿಸಿದೆ.

ಸೆಪ್ಟೆಂಬರ್ 5 ರಂದು ನಡೆದ ಆ ಚಕಮಕಿಯಲ್ಲಿ ಆತನ ಆಪ್ತ ಸಹಚರ ಯಾಸಿರ್ ಹತನಾಗಿದ್ದನು. ಮೂಸಾನ ಹತ್ಯೆಯು ಜಮ್ಮು ಮತ್ತು ಕಾಶ್ಮೀರದಲ್ಲಿ ಕಾರ್ಯನಿರ್ವಹಿಸುತ್ತಿರುವ ಲಷ್ಕರ್–ಎ–ತೈಬಾ ಸಂಘಟನೆಗೆ ದೊಡ್ಡ ಹಿನ್ನಡೆಯಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಏತನ್ಮಧ್ಯೆ, ಉಧಮ್‌ಪುರ ಜಿಲ್ಲೆಯಲ್ಲೂ ಶೋಧ ಕಾರ್ಯಾಚರಣೆ ನಡೆಯುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಜಿಲ್ಲೆಯ ಮಜಲ್ಟಾ ಪ್ರದೇಶದಲ್ಲಿ, ಈ ತಿಂಗಳ ಆರಂಭದಲ್ಲಿ ಭದ್ರತಾ ಪಡೆಗಳು ಜಂಟಿ ಭಯೋತ್ಪಾದನಾ ವಿರೋಧಿ ಕಾರ್ಯಾಚರಣೆಯ ವೇಳೆ ಪಾಕಿಸ್ತಾನದ ಇಬ್ಬರು ಜೈಶ್–ಎ–ಮೊಹಮ್ಮದ್ ಉಗ್ರರನ್ನು ಹೊಡೆದುರುಳಿಸಿದ್ದವು.

ಸೆಪ್ಟೆಂಬರ್ 27 ರಂದು ಕಾಶ್ಮೀರದ ಐಜಿಪಿ ಸುಜಿತ್ ಕುಮಾರ್ ಅವರು ಸೆಂಟ್ರಲ್ ಕಾಶ್ಮೀರ ರೇಂಜ್‌ನ ಡಿಐಜಿ ರಾಜೀವ್ ಓಂಪ್ರಕಾಶ್ ಪಾಂಡೆ ಅವರೊಂದಿಗೆ ಬಡ್ಗಾಮ್‌ಗೆ ಭೇಟಿ ನೀಡಿ ಅಲ್ಲಿನ ಡಿಪಿಎಚ್‌ಕ್ಯೂ ಕಚೇರಿಯಲ್ಲಿ ಭದ್ರತಾ ಪರಿಶೀಲನೆ ಮತ್ತು ಕಾರ್ಯಾಚರಣೆಯ ಸನ್ನದ್ಧತೆ ಬಗ್ಗೆ ಮೇಲ್ವಿಚಾರಣೆ ನಡೆಸಿದ್ದರು. ಬಡ್ಗಾಮ್‌ನ ಎಸ್‌ಎಸ್‌ಪಿ ಹರಿಪ್ರಸಾದ್ ಕೆ.ಕೆ. ಮತ್ತು ಇತರ ಹಿರಿಯ ಪೊಲೀಸ್ ಅಧಿಕಾರಿಗಳು ಈ ಸಭೆಯಲ್ಲಿ ಭಾಗವಹಿಸಿದ್ದರು.

### ಇಸ್ರೇಲ್‌ಗೆ ತೆರಳುತ್ತಿದ್ದ ವಿಮಾನ ಸೌದಿಯಲ್ಲಿ ತುರ್ತು ಲ್ಯಾಂಡಿಂಗ್

**ಟೆಲ್ ಅವಿವ್:** ಯುನೈಟೆಡ್ ಅರಬ್ ಎಮಿರೇಟ್ಸ್‌ನ ದುಬೈನಿಂದ ಇಸ್ರೇಲ್‌ಗೆ ಪ್ರಯಾಣಿಸುತ್ತಿದ್ದ ವಾಣಿಜ್ಯ ವಿಮಾನ ಬುಧವಾರ ಸೌದಿ ಅರೇಬಿಯಾದಲ್ಲಿ ತುರ್ತು ಭೂಸ್ಪರ್ಶ ಮಾಡಿದೆ. ಇದು ಹೈಜಾಕ್ ಭೀತಿ ಹುಟ್ಟುಹಾಕಿತ್ತು ಮತ್ತು ಇಸ್ರೇಲ್ ಯುದ್ಧವಿಮಾನಗಳನ್ನು ಓಡಿಸಲು ಪ್ರೇರೇಪಿಸಿತು. ವಿಮಾನದ ಇಬ್ಬರು ಪೈಲಟ್‌ಗಳ ನಡುವಿನ ಜಗಳದಿಂದ ಈ ಘಟನೆ ಸಂಭವಿಸಿದೆ ಮತ್ತು ವಿಮಾನದಲ್ಲಿದ್ದ ಎಲ್ಲ 180 ಪ್ರಯಾಣಿಕರು ಸುರಕ್ಷಿತವಾಗಿದ್ದಾರೆ ಎಂದು ಭದ್ರತಾ ಅಧಿಕಾರಿಗಳನ್ನು ಉಲ್ಲೇಖಿಸಿ ಇಸ್ರೇಲಿ ಮಾಧ್ಯಮಗಳು ವರದಿ ಮಾಡಿವೆ. ಈ ವಿಮಾನವು ರಾಜ್ಯದ ನಾಗರಿಕ ಮತ್ತು ಮಿಲಿಟರಿ ನೆಲೆಯಾದ ತಬುಕ್‌ನಲ್ಲಿ ಸುರಕ್ಷಿತವಾಗಿ ತುರ್ತು ಲ್ಯಾಂಡಿಂಗ್ ಮಾಡಿದೆ. ಸಾರ್ವಜನಿಕವಾಗಿ ಲಭ್ಯವಿರುವ ವಿಮಾನ ಟ್ರ್ಯಾಕಿಂಗ್ ಮಾಹಿತಿಯ ಪ್ರಕಾರ, ಫ್ಲೈ ದುಬೈ ವಿಮಾನವು ಟೇಕ್ ಆಫ್ ಆದ ಸ್ವಲ್ಪ ಸಮಯದ ನಂತರ ತುರ್ತು ಎಚ್ಚರಿಕೆಯನ್ನು ರವಾನಿಸಿದೆ. ವಿಮಾನ ಟೇಕಾಫ್ ಆದ ಸ್ವಲ್ಪ ಸಮಯದ ನಂತರ ಕಾಕ್‌ಪಿಟ್‌ನಲ್ಲಿ ಇಬ್ಬರು ಪೈಲಟ್‌ಗಳ ನಡುವೆ ಜಗಳ ಪ್ರಾರಂಭವಾಗಿದೆ. ಜಗಳ ವಿಕೋಪಕ್ಕೆ ಹೋಗಿ ಓರ್ವ ಪೈಲಟ್ ವಿಮಾನ ಹಾರಾಟದ ಸಂದರ್ಭದಲ್ಲಿ '7500' ಎಮರ್ಜೆನ್ಸಿ ಕೋಡ್ ಒತ್ತಿದ್ದಾರೆ ಎಂದು ಪ್ರಾದೇಶಿಕ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. '7500' ಕೋಡ್ ಹೈಜಾಕ್ ಸೂಚಿಸುವ ಅಂತಾರಾಷ್ಟ್ರೀಯ ಎಚ್ಚರಿಕೆಯಾಗಿದೆ. ಬಳಿಕ ವಿಮಾನ ಸೌದಿ ಅರೇಬಿಯಾ ವಾಯುಪ್ರದೇಶದತ್ತ ಡೈವರ್ಟ್ ಮಾಡಲಾಗಿದ್ದು, ಅಂತಿಮವಾಗಿ ವಿಮಾನ ಸುರಕ್ಷಿತವಾಗಿ ಸೌದಿಯಲ್ಲಿ ಲ್ಯಾಂಡ್ ಆಗಿದೆ. ಪೈಲಟ್‌ಗಳ ಜಗಳಕ್ಕೆ ಕಾರಣವೇನೆಂದು ತಕ್ಷಣ ಸ್ಪಷ್ಟವಾಗಿ ತಿಳಿದು ಬಂದಿಲ್ಲ ಎಂದು ಅಧಿಕಾರಿ ಹೇಳಿದ್ದಾರೆ. ವಿಮಾನವನ್ನು ಅದರ ನಿಗದಿತ ಮಾರ್ಗದಿಂದ ಬೇರೆಡೆಗೆ ತಿರುಗಿಸಿದ ನಂತರ, ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ಭದ್ರತಾ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿದ್ದಾರೆ.




ಪೈಲಟ್‌ಗಳ ನಡುವೆ ಜಗಳ, ಹೈಜಾಕ್ ಅಲರ್ಟ್

### ತನ್ನದೇ ನಾಗರೀಕರ ಮೇಲೆ ಬಾಂಬ್ ಮಳೆ ಸುರಿಸಿದ ಮ್ಯಾನ್ಮಾರ್ ಸೇನೆ; 50 ನಾಗರಿಕರು ದಾರುಣ ಸಾವು!

**ಕ್ಯೌಕ್ತಾವ್ (ಮ್ಯಾನ್ಮಾರ್):** ಮ್ಯಾನ್ಮಾರ್‌ನ ಪ್ರಭಾವಿ ಜನಾಂಗೀಯ ಸಶಸ್ತ್ರ ಗುಂಪಾದ ಅರಾಕನ್ ಆರ್ಮಿ ನಿಯಂತ್ರಣದಲ್ಲಿರುವ ರಖೈನ್ ರಾಜ್ಯದ ಕ್ಯೌಕ್ತಾವ್ ಟೌನ್‌ಶಿಪ್‌ನಲ್ಲಿ ಮ್ಯಾನ್ಮಾರ್ ಸೇನಾ ಪಡೆಗಳು ಭೀಕರ ವಾಯುದಾಳಿ ನಡೆಸಿದ್ದು, ದಾಳಿಯಲ್ಲಿ 50 ನಾಗರಿಕರು ಸಾವನ್ನಪ್ಪಿದ್ದಾರೆ. ಜೊತೆಗೆ 58 ಕ್ಕೂ ಹೆಚ್ಚು ಜನರು ತೀವ್ರವಾಗಿ ಗಾಯಗೊಂಡಿದ್ದಾರೆ.

**ಜನನಿಬಿಡ ಮಾರುಕಟ್ಟೆಯೇ ಟಾರ್ಗೆಟ್:** ಬಂಡುಕೋರರ ನಿಯಂತ್ರಣದಲ್ಲಿರುವ ಕ್ಯೌಕ್ತಾವ್ ಪಟ್ಟಣದ ಪ್ರಮುಖ ಸಗಟು ಮಾರುಕಟ್ಟೆ ಮತ್ತು ಅದರ ಪಕ್ಕದಲ್ಲಿರುವ ಕಿಸ್ಸಾಪನದಿ ಸೇತುವೆಯ ಬಳಿ ಜನರು ವ್ಯಾಪಾರದಲ್ಲಿ ತೊಡಗಿದ್ದಾಗ ಸೇನಾ ಫೈಟರ್ ಜೆಟ್ ಎರಡು ಶಕ್ತಿಶಾಲಿ ಬಾಂಬ್‌ಗಳನ್ನು ಸ್ಫೋಟಿಸಿದೆ. ಈ ಮಾರುಕಟ್ಟೆಯು ಭಾರತದೊಂದಿಗಿನ ನದಿ ವ್ಯಾಪಾರ ಮಾರ್ಗದ ಪ್ರಮುಖ ಕೊಂಡಿಯಾಗಿದ್ದು, ಸ್ಥಳೀಯರಿಗೆ ಜೀವನೋಪಾಯವಾಗಿತ್ತು.

**ಮೃತರ ಸಂಖ್ಯೆ ಏರಿಕೆ:** ಪ್ರಾಥಮಿಕ ವರದಿಗಳಲ್ಲಿ ಮೃತರ ಸಂಖ್ಯೆ 33 ಎಂದು ಹೇಳಲಾಗಿತ್ತಾದರೂ, ನಂತರದ ಪರಿಶೀಲನೆಗಳ ಬಳಿಕ ಕನಿಷ್ಠ 50 ಜನರು ಸಾವನ್ನಪ್ಪಿರುವುದು ದೃಢಪಟ್ಟಿದೆ. ಮೃತರಲ್ಲಿ ಮಾರುಕಟ್ಟೆಯ ವ್ಯಾಪಾರಿಗಳು, ಗ್ರಾಹಕರು, ಮಹಿಳೆಯರು ಮತ್ತು ಮಕ್ಕಳು ಸೇರಿದ್ದಾರೆ ಎನ್ನಲಾಗಿದೆ. ಅದರಲ್ಲೂ, ಗಾಯಗೊಂಡಿರುವ 58 ಜನರಲ್ಲಿ 22ಕ್ಕೂ ಹೆಚ್ಚು ಜನರ ಪರಿಸ್ಥಿತಿ ಅತ್ಯಂತ ಚಿಂತಾಜನಕವಾಗಿದೆ ಎಂದು ರಖೈನ್‌ನ ಹಿರಿಯ ರಕ್ಷಣಾ ಅಧಿಕಾರಿ ವಾಯ್ ಹುನ್ ಆಂಗ್ ತಿಳಿಸಿದ್ದಾರೆ. ಮುಂದುವರೆದು, ಈ ಪ್ರದೇಶವು ಮ್ಯಾನ್ಮಾರ್‌ನ ಪ್ರಭಾವಿ ಜನಾಂಗೀಯ ಸಶಸ್ತ್ರ ಗುಂಪಾದ ಅರಾಕನ್ ಆರ್ಮಿ ನಿಯಂತ್ರಣದಲ್ಲಿದ್ದು, ಯಾವುದೇ ಯಾವುದೇ ಸಕ್ರಿಯ ಯುದ್ಧ ಅಥವಾ ಸಂಘರ್ಷ ನಡೆಯದೇ ಇದ್ದರೂ, ಮಿಲಿಟರಿಯು ಉದ್ದೇಶಪೂರ್ವಕವಾಗಿ ನಾಗರಿಕರನ್ನು ಗುರಿಯಾಗಿಸಿಕೊಂಡು ಈ ಯುದ್ಧಾಪರಾಧ ಎಸಗಿದೆ ಎಂದು ಅರಾಕನ್ ಆರ್ಮಿ ಆರೋಪಿಸಿದ್ದು, ಇದಕ್ಕೆ ತಕ್ಕ ಪ್ರತೀಕಾರ ತೀರಿಸಿಕೊಳ್ಳುವುದಾಗಿ ಎಚ್ಚರಿಸಿದೆ. ಈ ದಾಳಿಯನ್ನು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್ ತೀವ್ರವಾಗಿ ಖಂಡಿಸಿದ್ದು, ನಾಗರಿಕರ ರಕ್ಷಣೆಗೆ ಒತ್ತು ನೀಡುವಂತೆ ಮತ್ತು ತಕ್ಷಣವೇ ಹಿಂಸಾಚಾರವನ್ನು ನಿಲ್ಲಿಸುವಂತೆ ಮ್ಯಾನ್ಮಾರ್ ಮಿಲಿಟರಿ ಆಡಳಿತಕ್ಕೆ ಆಗ್ರಹಿಸಿದ್ದಾರೆ. ಅದರಲ್ಲೂ, 2021ರ ಮಿಲಿಟರಿ ದಂಗೆಯ ನಂತರ ಮ್ಯಾನ್ಮಾರ್‌ನಲ್ಲಿ ನಡೆಯುತ್ತಿರುವ ಅಂತರ್ಯುದ್ಧದಲ್ಲಿ ರಖೈನ್ ಪ್ರಾಂತ್ಯದಲ್ಲಿ ನಡೆದ ಅತ್ಯಂತ ಭೀಕರ ವಾಯುದಾಳಿಗಳಲ್ಲಿ ಇದು ಒಂದಾಗಿದೆ.

### ರಷ್ಯಾಗೆ ಮರ್ಮಾಘಾತ; ಯುದ್ಧವಿಮಾನ ಬೆಂಕಿಗಾಹುತಿ, 6 ಮಂದಿ ಸಜೀವ ದಹನ, ಓರ್ವ ಪಾರು!

**ಮಾಸ್ಕೋ:** ರಷ್ಯಾದಲ್ಲಿ ಭೀಕರ ವಿಮಾನ ಅಪಘಾತ ಸಂಭವಿಸಿದ್ದು, ತರಬೇತಿ ಹಾರಾಟ ನಡೆಸುತ್ತಿದ್ದ ಪರಮಾಣು ಸಾಮರ್ಥ್ಯದ Tu-95MS ತಂತ್ರಾತ್ಮಕ ಬಾಂಬರ್ ವಿಮಾನ ಟೇಕಾಫ್ ಆದ ಕೆಲವೇ ನಿಮಿಷಗಳಲ್ಲಿ ಪತನಗೊಂಡಿದೆ. ಮಂಗಳವಾರ ರಷ್ಯಾದ ದೂರ ಪೂರ್ವದ ಅಮುರ್ ಪ್ರದೇಶದಲ್ಲಿ ಈ ದುರಂತ ಸಂಭವಿಸಿದೆ. ತರಬೇತಿ ಹಾರಾಟದ ವೇಳೆ ವಿಮಾನವು ಜನವಸತಿ ಇಲ್ಲದ ಪ್ರದೇಶದಲ್ಲಿ ಪತನಗೊಂಡಿದೆ. ವಿಮಾನದಲ್ಲಿದ್ದ ಏಳು ಸಿಬ್ಬಂದಿಯಲ್ಲಿ ಆರು ಮಂದಿ ಮೃತಪಟ್ಟಿದ್ದಾರೆ ಎಂದು ರಷ್ಯಾದ ರಕ್ಷಣಾ ಸಚಿವಾಲಯ ತಿಳಿಸಿದೆ. "ಸೆಪ್ಟೆಂಬರ್ 29ರಂದು ತರಬೇತಿ ಹಾರಾಟದ ವೇಳೆ Tu-95 ವಿಮಾನ ಅಮುರ್ ಪ್ರದೇಶದಲ್ಲಿ ಪತನಗೊಂಡಿದೆ. ವಿಮಾನವು ಜನವಸತಿ ಇಲ್ಲದ ಪ್ರದೇಶದಲ್ಲಿ ನೆಲಕ್ಕಪ್ಪಳಿಸಿದೆ" ಎಂದು ರಕ್ಷಣಾ ಸಚಿವಾಲಯ ಹೇಳಿದೆ.

**ಆರು ಮಂದಿ ಸಜೀವ ದಹನ:** ವಿಮಾನದಲ್ಲಿದ್ದ ಏಳು ಸಿಬ್ಬಂದಿಯಲ್ಲಿ ಆರು ಮಂದಿ ಮೃತಪಟ್ಟಿದ್ದು, ಓರ್ವ ಸಿಬ್ಬಂದಿ ಬದುಕುಳಿದಿದ್ದಾರೆ. ಗಾಯಗೊಂಡಿರುವ ಅವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಮಿನಿ ನ್ಯೂಸ್

### ಲಿಂಗ ತಾರತಮ್ಯ; ಐಫೆಲ್ ಟವರ್ ಮುಖ್ಯಸ್ಥ ವಜಾ

**ಪ್ಯಾರಿಸ್ (ಫ್ರಾನ್ಸ್):** ಪ್ಯಾರಿಸ್‌ನ ಐಫೆಲ್ ಟವರ್ ಹಿಂದೂ ಧಾರ್ಮಿಕ ಗುಂಪೊಂದು ಭೇಟಿ ನೀಡಿದ ಸಂದರ್ಭದಲ್ಲಿ ಅಲ್ಲಿಂದ ಮಹಿಳಾ ಸಿಬ್ಬಂದಿಯನ್ನು ಹೊರಗಿಡಲಾಗಿದ್ದ ಘಟನೆಗೆ ಸಂಬಂಧಿಸಿದ ಪ್ರಕರಣದಲ್ಲಿ ಐಫೆಲ್ ನಿರ್ವಹಣಾ ಕಂಪನಿಯ ಮುಖ್ಯಸ್ಥರನ್ನು ಹುದ್ದೆಯಿಂದ ಕೆಳಗಿಳಿಸಲು ಆಡಳಿತ ಮಂಡಳಿ ನಿರ್ಧರಿಸಿದೆ. ಸೆಪ್ಟೆಂಬರ್ 5 ರಂದು ನಡೆದ ಈ ಘಟನೆ ಸಂಬಂಧಿಸಿದಂತೆ ಹಲವು ಲೋಪಗಳನ್ನು ಸ್ವತಂತ್ರ ಸಂಸ್ಥೆಯೊಂದು ನಡೆಸಿದ ತನಿಖೆಯಲ್ಲಿ ಬಯಲಾಗಿತ್ತು. ಸೊಸೈಟಿ ಡಿ ಎಕ್ಸ್‌ಪ್ಲೋಯಿಟೇಷನ್ ಡಿ ಲಾ ಟೂರ್ ಐಫೆಲ್‌ನ ಮಹಾ ನಿರ್ದೇಶಕರಾದ ಪ್ಯಾಟ್ರಿಕ್ ಬ್ರಾಂಕೊ ರುಯಿವೋ ಅವರನ್ನು ಹುದ್ದೆಯಿಂದ ವಜಾಗೊಳಿಸಲು ನಿರ್ಧರಿಸಲಾಗಿದೆ. 2018ರ ಅಂತ್ಯದಲ್ಲಿ ರುಯಿವೋ ಅವರನ್ನು ಐಫೆಲ್‌ನ ಮಹಾ ನಿರ್ದೇಶಕರಾಗಿ ನೇಮಕ ಮಾಡಲಾಗಿತ್ತು. ಪ್ಯಾರಿಸ್‌ನ ಐಕಾನಿಕ್ ಕಟ್ಟಡಕ್ಕೆ ವಾರ್ಷಿಕವಾಗಿ ಸುಮಾರು 7 ಮಿಲಿಯನ್ ಪ್ರವಾಸಿಗರು ಆಗಮಿಸುತ್ತಾರೆ. ಇಂತಹ ಸ್ಥಳದಲ್ಲಿ ಲಿಂಗ ತಾರತಾಮ್ಯದ ನೀತಿ ಸ್ವೀಕರಾರ್ಹವಲ್ಲ ಎಂದು ಆಡಳಿತ ಮಂಡಳಿ ನಡೆ ವಿರೋಧಿಸಿ ಸಿಬ್ಬಂದಿ ಸೆಪ್ಟೆಂಬರ್ 7ರಂದು ಪ್ರತಿಭಟನೆ ನಡೆಸಿದ್ದರಿಂದ ಟವರ್ ಪ್ರವೇಶವನ್ನು ಒಂದು ದಿನ ಮುಚ್ಚಲಾಗಿತ್ತು. ಪ್ಯಾರಿಸ್‌ನಲ್ಲಿ ಸಾಂಪ್ರದಾಯಿಕ ಹಿಂದೂ ದೇವಾಲಯದ ಉದ್ಘಾಟನೆಗಾಗಿ ಬೋಚಾಸನವಾಸಿ ಶ್ರೀ ಅಕ್ಷರ ಪುರುಷೋತ್ತಮ ಸ್ವಾಮಿನಾರಾಯಣ ಸಂಸ್ಥೆಯ ತಂಡ ಪ್ಯಾರಿಸ್‌ಗೆ ಭೇಟಿ ನೀಡಿತ್ತು. ಸೆಪ್ಟೆಂಬರ್ 5ರಂದು ಈ ನಿಯೋಗ ಐಫೆಲ್ ಟವರ್‌ಗೆ ಭೇಟಿ ನೀಡಿದಾಗ, ಅವರು ಮಹಿಳೆಯರೊಂದಿಗಿನ ಸಂಪರ್ಕವನ್ನು ಮಿತಿಗೊಳಿಸುವಂತೆ ಕೋರಿದ್ದರು. ಇದಕ್ಕೆ ಒಪ್ಪಿ, ಐಫೆಲ್ ಟವರ್ ಆಡಳಿತ ಮಂಡಳಿ ಮಹಿಳಾ ಸಿಬ್ಬಂದಿಗೆ ಆ ಸಮಯದಲ್ಲಿ ಅವರೊಂದಿಗೆ ಸಂಪರ್ಕ ಹೊಂದದಂತೆ ಸೂಚನೆ ನೀಡಿತ್ತು. ಈ ಬೆಳವಣಿಗೆ ಕುರಿತು ತಿಳಿಸಿದ ಶ್ರೀ ಅಕ್ಷರ ಪುರುಷೋತ್ತಮ ಸ್ವಾಮಿನಾರಾಯಣ ಸಂಸ್ಥೆ, ಟವರ್‌ನ ಉದ್ಯೋಗಿಗಳಿಗೆ ಅಥವಾ ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ದೊಡ್ಡ ಗುಂಪಿನ ಭೇಟಿಯನ್ನು ಸುಗಮವಾಗಿ ನಡೆಸಿಕೊಡುವ ಉದ್ದೇಶದಿಂದ, ಕೇವಲ ಕಾರ್ಯಾಚರಣೆಯ ಸೌಜನ್ಯ ಮತ್ತು ವ್ಯವಸ್ಥಾಪನಾ ದೃಷ್ಟಿಯಿಂದ ಈ ಸಮನ್ವಯವನ್ನು ಮಾಡಿಕೊಳ್ಳಲಾಗಿತ್ತು. ಇದು ಯಾವುದೇ ಹಂತದಲ್ಲಿ ಲಿಂಗಭೇದದ ಆಧಾರದ ಮೇಲಿನ ಮನವಿಯಾಗಿರಲಿಲ್ಲ ಎಂದು ತಿಳಿಸಿದ್ದರು ಎಂದು ದಿ ಅಸೋಸಿಯೇಟ್ ಪ್ರೆಸ್ ವರದಿ ಮಾಡಿದೆ.

### ಅಮೆರಿಕದ ರಾಯಭಾರಿಗಳ ಸಭೆ ಉದ್ದೇಶಿಸಿ ರುಬಿಯೊ ಮಾತು

**ವಾಷಿಂಗ್ಟನ್:** ನವದೆಹಲಿಯಲ್ಲಿ ನಡೆದ ದಕ್ಷಿಣ ಮತ್ತು ಮಧ್ಯ ಏಷ್ಯಾದ ಅಮೆರಿಕದ ರಾಯಭಾರಿಗಳ ಸಮ್ಮೇಳನವನ್ನು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ವರ್ಚುಯಲ್ ಆಗಿ ಉದ್ದೇಶಿಸಿ ಮಾತನಾಡಿದರು. ನವದೆಹಲಿಯಲ್ಲಿ ಭಾರತಕ್ಕೆ ಅಮೆರಿಕದ ರಾಯಭಾರಿ ಸೆರ್ಗಿಯೊ ಗೋರ್ ಅವರು ರಾಯಭಾರಿಗಳ ಪ್ರಾದೇಶಿಕ ಸಮ್ಮೇಳನವನ್ನು ಆಯೋಜಿಸಿದ್ದರು. ಇಂದು ಮುಂಜಾನೆ, ನಾನು ರಾಯಭಾರಿ ಸೆರ್ಗಿಯೊ ಗೋರ್ ಅವರು ಆಯೋಜಿಸಿದ್ದ ಭಾರತದಲ್ಲಿ ನಮ್ಮ ರಾಯಭಾರಿಗಳ ಪ್ರಾದೇಶಿಕ ಸಮ್ಮೇಳನದಲ್ಲಿ ಮಾತನಾಡಿದೆ ಎಂದು ರುಬಿಯೊ ಎಕ್ಸ್ ಪೋಸ್ಟ್‌ನಲ್ಲಿ ಹೇಳಿದ್ದಾರೆ. ಕಜಕಿಸ್ತಾನ್, ಕಿರ್ಗಿಸ್ತಾನ್, ತಜಿಕಿಸ್ತಾನ್, ತುರ್ಕಮೆನಿಸ್ತಾನ್, ಉಜ್ಬೇಕಿಸ್ತಾನ್, ಬಾಂಗ್ಲಾದೇಶ, ಭಾರತ, ಮಾಲ್ಡೀವ್ಸ್, ನೇಪಾಳ, ಪಾಕಿಸ್ತಾನ ಮತ್ತು ಶ್ರೀಲಂಕಾದ ಅಮೆರಿಕದ ರಾಯಭಾರಿಗಳು ಮತ್ತು ಮಿಷನ್ ಮುಖ್ಯಸ್ಥರೊಂದಿಗೆ ಮಾತನಾಡುವುದು ಒಂದು ಅದ್ಭುತ ಅನುಭವವಾಗಿದೆ ಎಂದು ಅವರು ಹೇಳಿದ್ದಾರೆ. ನಮ್ಮ ರಾಯಭಾರಿಗಳು ಅಮೆರಿಕವನ್ನು ಸುರಕ್ಷಿತ, ಬಲಯುತ ಮತ್ತು ಹೆಚ್ಚು ಸಮೃದ್ಧವಾಗಿಸುತ್ತಿದ್ದಾರೆ ಎಂದು ರುಬಿಯೊ ಬಣ್ಣಿಸಿದ್ದಾರೆ.

### ಯುನೆಸ್ಕೊ ವಿಶ್ವ ಪರಂಪರೆ ಪಟ್ಟಿಯಲ್ಲಿ ಭಾರತದ 5 ತಾಣಗಳು

**ನವದೆಹಲಿ:** ಯುನೆಸ್ಕೋದ ವಿಶ್ವ ಪರಂಪರೆಯ ತಾಣಗಳ ಪಟ್ಟಿಗೆ ಭಾರತದ ಹೊಸ ಐದು ತಾಣಗಳು ಸೇರಲು ಸಜ್ಜಾಗಿದೆ. ಮಧ್ಯಪ್ರದೇಶದ ಉದಯಗಿರಿ ಗುಹೆಗಳು ಸೇರಿದಂತೆ ನಾಲ್ಕು ತಾಣಗಳು ಹಾಗೂ ಭಾರತ ಮತ್ತು ದಕ್ಷಿಣ ಆಫ್ರಿಕಾ ಎರಡರಲ್ಲೂ ಸತ್ಯಾಗ್ರಹಕ್ಕೆ ಸಂಬಂಧಿಸಿದ ಸ್ಥಳಗಳನ್ನು ತಾತ್ಕಾಲಿಕ ಪಟ್ಟಿಗಳಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಕುರಿತು ಎಕ್ಸ್ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿರುವ ಪಿಐಬಿ, ಯುನೆಸ್ಕೋ ತಾತ್ಕಾಲಿಕ ಪಟ್ಟಿಗೆ ಇದೀಗ ಭಾರತದ 5 ಹೊಸ ತಾಣಗಳು ಸೇರ್ಪಡೆಯಾಗಿದ್ದು, ದೇಶದ ಒಟ್ಟು ತಾಣಗಳ ಸಂಖ್ಯೆ 78ಕ್ಕೇರಿದೆ. ಹೊಸದಾಗಿ ಸೇರಿದ ತಾಣಗಳು ಬಾಗ್ ಗುಹೆಗಳ ವರ್ಣಚಿತ್ರಗಳು, ಚಂಬಲ್ ಕಣಿವೆಯ ದೇವಾಲಯಗಳ ಸಮೂಹ, ಉದಯಗಿರಿ ಗುಹೆಗಳು, ಗಿನ್ನೋರ್‌ಗಢ್ ಮತ್ತು ಭಾರತ – ದಕ್ಷಿಣ ಆಫ್ರಿಕಾ ನಡುವಿನ ಜಂಟಿ ಅಂತಾರಾಷ್ಟ್ರೀಯ ಪ್ರಸ್ತಾವನೆಯಾದ ಸತ್ಯಾಗ್ರಹದ ತಾಣಗಳು. ಇದು ಭಾರತದ ಶ್ರೀಮಂತ ಪರಂಪರೆಗೆ ಒಂದು ಹೆಮ್ಮೆಯ ಮೈಲಿಗಲ್ಲಾಗಿದೆ ಎಂದಿದ್ದಾರೆ. ಮಧ್ಯಪ್ರದೇಶದ ಉದಯ ಗಿರಿ ಬೆಟ್ಟ, ಬಾಗ್ ಗುಹೆ, ಗಿನ್ನೋರ್‌ಗಢ್ ಕೋಟೆ, ಸತ್ಯಾಗ್ರಹದ ತಾಣಗಳು ಒಳಗೊಂಡಿದೆ.



### ಗುಂಡಿನ ದಾಳಿ: ಸ.ಕಮಾಂಡೆಂಟ್ ಸೇರಿ ನಾಲ್ವರ ಸಾವು

**ಜಮ್ಮು/ನವದೆಹಲಿ:** ಜಮ್ಮು ಮತ್ತು ಕಾಶ್ಮೀರದ ಕಥುವಾ ಜಿಲ್ಲೆಯ ಬಶೋಲಿ ಪ್ರದೇಶದಲ್ಲಿರುವ 'ಸೇವಾ' ವಿದ್ಯುತ್ ಯೋಜನೆಯಲ್ಲಿ, ಕೇಂದ್ರ ಕೈಗಾರಿಕಾ ಭದ್ರತಾ ಪಡೆಯ ಸಿಬ್ಬಂದಿಯೊಬ್ಬರು ನಡೆಸಿದ ಗುಂಡಿನ ದಾಳಿಯಲ್ಲಿ ಸಹಾಯಕ ಕಮಾಂಡೆಂಟ್ ಸೇರಿದಂತೆ ನಾಲ್ವರು ಸಿಐಎಸ್‌ಎಫ್ ಸಿಬ್ಬಂದಿ ಸಾವನ್ನಪ್ಪಿದ್ದಾರೆ. ರಂಜಿತ್ ಸಾಗರ್ ಅಣೆಕಟ್ಟಿನ ಬಳಿಯಿರುವ ಸೇವಾ ವಿದ್ಯುತ್ ಯೋಜನೆಯ ಆವರಣದಲ್ಲಿ ಗುಂಡಿನ ದಾಳಿ ನಡೆದಿದೆ ಎಂಬ ಮಾಹಿತಿ ಲಭ್ಯವಾದ ತಕ್ಷಣವೇ ಪೊಲೀಸ್ ತಂಡವೊಂದು ಸ್ಥಳಕ್ಕೆ ಧಾವಿಸಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. "ಪ್ರಾಥಮಿಕ ತನಿಖೆಯ ಪ್ರಕಾರ, ಗುಂಡಿನ ದಾಳಿಯಲ್ಲಿ ಸಹಾಯಕ ಕಮಾಂಡೆಂಟ್ ಸೇರಿದಂತೆ ನಾಲ್ವರು ಸಿಐಎಸ್‌ಎಫ್ ಸಿಬ್ಬಂದಿ ಸಾವನ್ನಪ್ಪಿರುವ ಬಗ್ಗೆ ತಿಳಿದುಬಂದಿದೆ," ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಈ ಪ್ರದೇಶವು ಜಮ್ಮು ಮತ್ತು ಕಾಶ್ಮೀರ ಹಾಗೂ ಹಿಮಾಚಲ ಪ್ರದೇಶದ ಗಡಿಯಲ್ಲಿದ್ದು, ಈ ವಿದ್ಯುತ್ ಯೋಜನೆಯು ಜಮ್ಮು ಮತ್ತು ಕಾಶ್ಮೀರದ ವ್ಯಾಪ್ತಿಯಲ್ಲಿದೆ. "ಮಾಶ್ಕಾದಲ್ಲಿರುವ ಸೇವಾ ಯೋಜನೆಯಲ್ಲಿ ನಿಯೋಜನೆಗೊಂಡಿದ್ದ ಸಿಐಎಸ್‌ಎಫ್ ಸಿಬ್ಬಂದಿಯ ನಡುವೆ ನಡೆದ ವಾಗ್ವಾದದ ನಂತರ ಈ ಗುಂಡಿನ ದಾಳಿ ಸಂಭವಿಸಿದೆ. ಘಟನೆಯಲ್ಲಿ ನಾಲ್ವರು ಸಿಐಎಸ್‌ಎಫ್ ಸಿಬ್ಬಂದಿ ಗಾಯಗೊಂಡಿದ್ದರು ಮತ್ತು ಅವರನ್ನು ಹಿಮಾಚಲ ಪ್ರದೇಶದ ಎನ್‌ಹೆಚ್‌ಪಿಸಿ ಆಸ್ಪತ್ರೆಗೆ ಸ್ಥಳಾಂತರಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಅವರು ಮೃತಪಟ್ಟಿದ್ದಾರೆ," ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮೃತಪಟ್ಟ ಸಿಬ್ಬಂದಿಯನ್ನು ಸಹಾಯಕ ಕಮಾಂಡೆಂಟ್ ಅಂಕಿತ್ ಕುಮಾರ್ ಪಾಂಡೆ, ಸಬ್ ಇನ್ಸ್‌ಪೆಕ್ಟರ್ ಲಕ್ಷ್ಮಣ್ ಸಿಂಗ್, ಕಾನ್‌ಸ್ಟೇಬಲ್ ರಫೀಕ್ ಅಹ್ಮದ್ ಮತ್ತು ಕಾನ್‌ಸ್ಟೇಬಲ್ ಸಂದೀಪ್ ಕುಮಾರ್ ಎಂದು ಗುರುತಿಸಲಾಗಿದೆ. ಆರೋಪಿ ಎಂದು ಶಂಕಿಸಲಾದ ಸಿಐಎಸ್‌ಎಫ್ ಸಿಬ್ಬಂದಿ ಅಭಿದೇಶ್ ಸಿಂಗ್ ಅವರನ್ನು ಜಮ್ಮು ಮತ್ತು ಕಾಶ್ಮೀರ ಪೊಲೀಸರು ಬಂಧಿಸಿದ್ದಾರೆ. ಘಟನೆಗೆ ಕಾರಣವೇನೆಂಬುದನ್ನು ಪತ್ತೆಹಚ್ಚಲು ಪೊಲೀಸರು ತನಿಖೆ ಕೈಗೊಂಡಿದ್ದಾರೆ. ಈ ಕುರಿತು ತನಿಖೆಗೆ ಆದೇಶಿಸಲಾಗಿದೆ ಎಂದು ಸಿಐಎಸ್‌ಎಫ್ ಮೂಲಗಳು ತಿಳಿಸಿವೆ.



### ಇದನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳದಿದ್ದರೆ, ಅದು ದ್ವಿಪಕ್ಷೀಯ ಸಂಬಂಧಗಳ ಮೇಲೆ ಪರಿಣಾಮ ಬೀರಲಿದೆ: ಜೈಶಂಕರ್

## ನೆರೆ ದೇಶದಿಂದ ಉದ್ಭವಿಸುವ ಭಯೋತ್ಪಾದನೆ ಭಾರತದ ಪ್ರಮುಖ ಕಳವಳಗಳಲ್ಲಿ ಒಂದು

**ನ್ಯೂಯಾರ್ಕ್:** ನೆರೆಯ ದೇಶದಿಂದ ಉದ್ಭವಿಸುವ ಭಯೋತ್ಪಾದನೆಯು ಭಾರತದ ಪ್ರಮುಖ ಕಳವಳಗಳಲ್ಲಿ ಒಂದಾಗಿದೆ. ನವದೆಹಲಿಯ ಪಾಲುದಾರರು ಇದನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳದಿದ್ದರೆ, ಅದು ದ್ವಿಪಕ್ಷೀಯ ಸಂಬಂಧಗಳ ಮೇಲೆ ಪರಿಣಾಮ ಬೀರುತ್ತದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಹೇಳಿದ್ದಾರೆ.

ವಾಷಿಂಗ್ಟನ್ ಮತ್ತು ಇಸ್ಲಾಮಾಬಾದ್ ನಡುವಿನ ಸಂಬಂಧಗಳು ಸುಧಾರಿಸುತ್ತಿರುವ ಹಿನ್ನೆಲೆಯಲ್ಲಿ ಅವರು ಭಾರತ – ಅಮೆರಿಕ ಸಂಬಂಧಗಳ ಕುರಿತು ಈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ 81ನೇ ಅಧಿವೇಶನದ ಉನ್ನತ ಮಟ್ಟದ ಸಭೆಗಳ ಸರಣಿ ಸೋಮವಾರ ಮುಕ್ತಾಯಗೊಂಡ ಸಂದರ್ಭದಲ್ಲಿ 'ಏಷ್ಯಾ ಸೊಸೈಟಿ' ಆಯೋಜಿಸಿದ್ದ ವಿಶೇಷ ಸಂವಾದದಲ್ಲಿ ವಿದೇಶಾಂಗ ಸಚಿವರು ಪಾಲ್ಗೊಂಡರು. ಭಾರತೀಯ–ಅಮೆರಿಕನ್ ಸಮುದಾಯದ ಪ್ರಮುಖ ಸದಸ್ಯರು ಹಾಗೂ ನೀತಿ ನಿರೂಪಣಾ ತಜ್ಞರನ್ನು ಉದ್ದೇಶಿಸಿ ಅವರು ಮಾತನಾಡಿದರು.

ಏಷ್ಯಾ ಸೊಸೈಟಿ ಪಾಲಿಸಿ ಇನ್‌ಸ್ಟಿಟ್ಯೂಟ್‌ನ ಹಿರಿಯ ಸಹವರ್ತಿ ಮತ್ತು ಮಾಜಿ ಅಮೆರಿಕನ್ ರಾಜತಾಂತ್ರಿಕ ಡೇನಿಯಲ್ ರಸ್ಸೆಲ್ ಸಂವಾದ ನಡೆಸಿಕೊಟ್ಟರು. ಈ ವೇಳೆ, ವಿದೇಶಾಂಗ ಸಚಿವ ಜೈಶಂಕರ್ ಅವರನ್ನು ಅಮೆರಿಕ – ಭಾರತ ಸಂಬಂಧಗಳ ಕುರಿತು ಪ್ರಶ್ನಿಸಲಾಯಿತು. ವಿಶೇಷವಾಗಿ ಕಳೆದ ಒಂದು ವರ್ಷದಲ್ಲಿ ವ್ಯಾಪಾರ ಮತ್ತು ಸುಂಕಗಳಿಗೆ ಸಂಬಂಧಿಸಿದ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಹಾಗೂ ದ್ವಿಪಕ್ಷೀಯ ಸಂಬಂಧವನ್ನು ಉತ್ತಮ ಹಾದಿಗೆ ತರಲು ಏನು ಆಗಬೇಕೆಂಬುದರ ಕುರಿತು ಅವರನ್ನು ಕೇಳಲಾಯಿತು.

ಅಮೆರಿಕ ಮತ್ತು ಪಾಕಿಸ್ತಾನದ ನಡುವಿನ ಸಂಬಂಧಗಳ ಬಗ್ಗೆ ಪ್ರಸ್ತಾಪಿಸಿದರು. ವಿಶೇಷವಾಗಿ ಜನವರಿ 2025ರಲ್ಲಿ ಡೊನಾಲ್ಡ್ ಟ್ರಂಪ್ ಆಡಳಿತದ ಎರಡನೇ ಅವಧಿ ಪ್ರಾರಂಭವಾದ ಕೆಲವೇ ತಿಂಗಳುಗಳಲ್ಲಿ ಈ ಸಂಬಂಧಗಳಲ್ಲಿ ಸುಧಾರಣೆ ಕಂಡುಬಂದಿದೆ. ಅದರಲ್ಲೂ ಒಂದು ವಿಷಯವು ಪ್ರತಿ ದೇಶದ ಸೂಕ್ಷ್ಮತೆಗಳಿಗೆ ಸಂಬಂಧಿಸಿದೆ ಎಂದು ಜೈಶಂಕರ್ ಮಾರ್ಮಿಕವಾಗಿ ಹೇಳಿದರು. ಭಾರತದಲ್ಲಿ ನಮಗೆ ವಿಶೇಷವಾಗಿ ಮುಖ್ಯವಾದ ವಿಷಯವೆಂದರೆ ಭಯೋತ್ಪಾದನೆ. ನೆರೆಯ ದೇಶವೊಂದು ದಶಕಗಳ ಕಾಲ ಉದ್ದೇಶಪೂರ್ವಕ ಮತ್ತು ಪ್ರಜ್ಞಾಪೂರ್ವಕ ನೀತಿಯ ಭಾಗವಾಗಿ ನಮ್ಮ ಮೇಲೆ ಹೇರಿದಂತಹ ಭಯೋತ್ಪಾದನೆಗೆ ಒಳಗಾದ ದೇಶಗಳು ಜಗತ್ತಿನಲ್ಲಿ ಬಹಳ ಕಡಿಮೆ ಇವೆ ಎಂದು ನಮಗೆ ಅನ್ನಿಸುತ್ತದೆ ಎಂದು ಜೈಶಂಕರ್ ಪಾಕಿಸ್ತಾನವನ್ನು ಉಲ್ಲೇಖಿಸಿ ಹೇಳಿದರು.



1. ಏಷ್ಯಾ ಸೊಸೈಟಿ' ಆಯೋಜಿ ಸಿದ್ದ ವಿಶೇಷ ಸಂವಾದ
2. ದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅಭಿಮತ
3. ಮಾಜಿ ರಾಜತಾಂತ್ರಿಕ ಡೇನಿಯಲ್ ರಸ್ಸೆಲ್ ಭಾಗಿ

> ಜಗತ್ತಿನ ಬಹುತೇಕ ದೇಶಗಳು ಅಮೆರಿಕದೊಂದಿಗೆ ತುಸು ಕಠಿಣವಾದ ಸಂಬಂಧವನ್ನು ಹೊಂದಿವೆ ಎಂಬುದನ್ನು ಗಮನಿಸುತ್ತೇನೆ. ಇದು ಸಮಾಧಾನಕರ ಸಂಗತಿಯಲ್ಲದಿರಬಹುದು, ಆದರೆ ಇದೇ ವಾಸ್ತವ.
>
> – ಜೈಶಂಕರ್, ವಿದೇಶಾಂಗ ವ್ಯವಹಾರಗಳ ಸಚಿವ

ನಮಗೆ ಅತ್ಯಂತ ಮಹತ್ವದ ವಿಷಯವೊಂದರ ಬಗ್ಗೆ ಸಾಕಷ್ಟು ತಿಳಿವಳಿಕೆ, ಮೌಲ್ಯಮಾಪನ ಅಥವಾ ಸಹಾನುಭೂತಿ ಇಲ್ಲದಿದ್ದಾಗ, ಅದು ಸಮಸ್ಯೆಯನ್ನು ಸೃಷ್ಟಿಸುತ್ತದೆ ಎಂದು ನಾನು ಭಾವಿಸುತ್ತೇನೆ. ನನ್ನ ಪ್ರಮುಖ ಕಾಳಜಿಗಳಲ್ಲಿ ಒಂದನ್ನು ನನ್ನ ಸಂಗಾತಿಯು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳದಿದ್ದರೆ ಅಥವಾ ಗೌರವಿಸದಿದ್ದರೆ, ಅದು ಸಹಜವಾಗಿಯೇ ನಮ್ಮ ಸಂಬಂಧದ ಮೇಲೆ ಪರಿಣಾಮ ಬೀರುತ್ತದೆ ಎಂದು ಅವರು ಭಾರತ ಮತ್ತು ಅಮೆರಿಕ ನಡುವಿನ ಸಂಬಂಧಗಳ ಕುರಿತು ಮಾತನಾಡುತ್ತಾ ಹೇಳಿದರು.

ಇತ್ತ ನವದೆಹಲಿಯಲ್ಲಿ ನಡೆದ ಪಾಕ್ಷಿಕ ಮಾಧ್ಯಮಗೋಷ್ಠಿಯಲ್ಲಿ, ಗಡಿಯಾಚೆಗಿನ ಭಯೋತ್ಪಾದನೆಯ ಕುರಿತು ಜೈಶಂಕರ್ ನೀಡಿದ ಹೇಳಿಕೆಗಳ ಬಗ್ಗೆ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಅವರನ್ನು ಪ್ರಶ್ನಿಸಲಾಯಿತು.

ಇದಕ್ಕೆ ಉತ್ತರಿಸಿದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರರು, ಗಡಿಯಾಚೆಗಿನ ಭಯೋತ್ಪಾದನೆಯು ತೀವ್ರ ಕಳವಳಕಾರಿ ವಿಷಯವಾಗಿದೆ ಮತ್ತು ಈ ಜಾಗತಿಕ ಪಿಡುಗಿನ ವಿರುದ್ಧ ಹೋರಾಡಲು ದೇಶಗಳು ಒಗ್ಗೂಡಬೇಕಾಗಿದೆ ಎಂಬುದನ್ನು ವಿದೇಶಾಂಗ ಸಚಿವರು ಮತ್ತೊಮ್ಮೆ ಒತ್ತಿಹೇಳಿದ್ದಾರೆ ಎಂದು ಸಮರ್ಥಿಸಿಕೊಂಡರು.

ಕಳೆದ ವರ್ಷದ ಮೇ ತಿಂಗಳಲ್ಲಿ ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಏಪ್ರಿಲ್ 22 ರಂದು ನಡೆದ ಹೇಯ ಭಯೋತ್ಪಾದಕ ದಾಳಿಗೆ ಪ್ರತೀಕಾರವಾಗಿ ಭಾರತವು 'ಆಪರೇಷನ್ ಸಿಂಧೂರ್' ಪ್ರಾರಂಭಿಸಿತ್ತು. ಪಾಕಿಸ್ತಾನ ಮೂಲದ ಭಯೋತ್ಪಾದಕ ಸಂಘಟನೆ ಲಷ್ಕರ್–ಎ–ತೈಬಾದ ಬಾಲಸಂಸ್ಥೆಯಾದ 'ದಿ ರೆಸಿಸ್ಟೆನ್ಸ್ ಫ್ರಂಟ್' ನಡೆಸಿದ ಈ ದಾಳಿಯಲ್ಲಿ ಪ್ರವಾಸಿಗರೇ ಹೆಚ್ಚಾಗಿದ್ದ 26 ನಾಗರಿಕರು ಸಾವನ್ನಪ್ಪಿದ್ದರು. ಈ ಕಾರ್ಯಾಚರಣೆಯು ಪಾಕಿಸ್ತಾನ ಮತ್ತು ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿರುವ ಭಯೋತ್ಪಾದಕ ಮೂಲಸೌಕರ್ಯಗಳನ್ನು ಗುರಿಯಾಗಿಸಿಕೊಂಡಿತ್ತು.

ಕಳೆದ ವರ್ಷದುದ್ದಕ್ಕೂ ಹಾಗೂ ಕಳೆದ ವಾರ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಮಾಡಿದ ಭಾಷಣದಲ್ಲಿಯೂ ಭಾರತ ಮತ್ತು ಪಾಕಿಸ್ತಾನದ ನಡುವಿನ ಸಂಘರ್ಷವನ್ನು ತಾನೇ ನಿಲ್ಲಿಸಿದ್ದೇನೆ ಎಂದು ಟ್ರಂಪ್ ಹೇಳಿಕೊಂಡಿದ್ದಾರೆ. ಆದರೆ, ಯಾವುದೇ ಮೂರನೇ ಪಕ್ಷದ ಮಧ್ಯಸ್ಥಿಕೆಯನ್ನು ಭಾರತವು ಸತತವಾಗಿ ನಿರಾಕರಿಸುತ್ತಾ ಬಂದಿದೆ.

ಭಾರತ–ಅಮೆರಿಕ ಸಂಬಂಧವು ಪ್ರಗತಿಯ ಹಾದಿಯಲ್ಲಿ ಸಾಗಲಿದೆ ಎಂದು ನಾವು ಖಂಡಿತವಾಗಿಯೂ ಆಶಿಸುತ್ತೇವೆ ಮತ್ತು ನಿರೀಕ್ಷಿಸುತ್ತೇವೆ ಎಂದು ಹೇಳಿರುವ ಭಾರತದ ವಿದೇಶಾಂಗ ಸಚಿವ ಜೈಶಂಕರ್, ಆದರೆ ನಾವು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ವಾಸ್ತವಿಕವಾಗಿರಬೇಕಾಗುತ್ತದೆ. ಈ ಕೆಲವು ವಿಷಯಗಳಲ್ಲಿ ನಾವು ಎಷ್ಟರಮಟ್ಟಿಗೆ ಮುನ್ನಡೆಯಲು ಸಾಧ್ಯವಾಗುತ್ತದೆಯೋ, ಅಷ್ಟರಮಟ್ಟಿಗೆ ನಮ್ಮ ಸಂಬಂಧವು ಉತ್ತಮಗೊಳ್ಳುತ್ತದೆ ಎಂದು ನಾನು ಭಾವಿಸುತ್ತೇನೆ ಎಂದೂ ಹೇಳಿದ್ದಾರೆ.

# ಆರ್ಚರಿಯಲ್ಲಿ ಭಾರತಕ್ಕೆ ಡಬಲ್ ಗೋಲ್ಡ್

ಏಷ್ಯನ್ ಕ್ರೀಡಾಕೂಟದಲ್ಲಿ ಭಾರತ ಇಂದು ಮತ್ತೆರಡು ಚಿನ್ನದ ಪದಕವನ್ನು ಗೆದ್ದುಕೊಂಡಿದೆ. ಮಹಿಳಾ ಕಾಂಪೌಂಡ್ ಆರ್ಚರಿ ಟೀಮ್ ಈವೆಂಟ್ ಫೈನಲ್‌ನಲ್ಲಿ ಜ್ಯೋತಿ ಸುರೇಖಾ, ಚಿಕಿತಾ ತನಿಪರ್ತಿ ಮತ್ತು ಪ್ರೀತಿಕಾ ಪ್ರದೀಪ್ ಅವರನ್ನೊಳಗೊಂಡ ತಂಡ ಚೀನಾವನ್ನು 238–234 ಅಂಕಗಳಿಂದ ಸೋಲಿಸಿ ಚಿನ್ನವನ್ನು ಗೆದ್ದುಕೊಂಡಿತು. ಏತನ್ಮಧ್ಯೆ, ಮಿಶ್ರ ಆರ್ಚರಿಯಲ್ಲೂ ಭಾರತೀಯ ಜೋಡಿ ಫೈನಲ್‌ನಲ್ಲಿ ಥಾಯ್ಲೆಂಡ್ ಮಣಿಸಿ ಚಿನ್ನ ಗೆದ್ದುಕೊಂಡಿದೆ. ಮೊದಲ ಸುತ್ತಿನಿಂದಲೇ ಪ್ರಾಬಲ್ಯ ಸಾಧಿಸಿದ ಭಾರತ: ಈ ಪಂದ್ಯದ ಮೊದಲ ಹಂತದಲ್ಲಿ ಚೀನಾ ಸತತ ಮೂರು ಸುತ್ತುಗಳಲ್ಲಿ 9 ಅಂಕಗಳನ್ನು ಗಳಿಸಿತು. ಇದಕ್ಕೆ ಉತ್ತರವಾಗಿ, ಚಿಖಿತಾ, ಪ್ರೀತಿಕಾ ಮತ್ತು ಜ್ಯೋತಿ ತಲಾ 10 ಅಂಕಗಳನ್ನು ಗಳಿಸಿ ಭಾರತಕ್ಕೆ ಆರಂಭಿಕ ಮುನ್ನಡೆ ಒದಗಿಸಿದರು. ಮೊದಲ ಸುತ್ತಿನಲ್ಲಿ ಭಾರತ ತಂಡ ಒಟ್ಟು 60 ಅಂಕಗಳನ್ನು ಗಳಿಸಿದರೆ, ಚೀನಾ 58 ಅಂಕಗಳನ್ನು ಪಡೆದುಕೊಂಡಿತು. ನಂತರ ಭಾರತ ತನ್ನ ಮುನ್ನಡೆಯನ್ನು ಕಾಯ್ದುಕೊಂಡಿತು. ನಾಲ್ಕು ಸುತ್ತುಗಳಲ್ಲಿ, ಭಾರತ ತಂಡ ಒಟ್ಟು 238 ಅಂಕಗಳನ್ನು ಗಳಿಸಿತು. ಆದರೆ ಚೀನಾ 234 ಅಂಕ ಕಲೆಹಾಕಿ ನಾಲ್ಕು ಅಂಕಗಳ ಅಂತರದಿಂದ ಸೋಲನ್ನು ಕಂಡಿತು. ಇದರೊಂದಿಗೆ ಬೆಳ್ಳಿಗೆ ತೃಪ್ತಿ ಪಡೆದುಕೊಂಡಿತು.




**ಆರ್ಚರಿ ಕಾಂಪೌಂಡ್ ಮಿಶ್ರ ಸ್ಪರ್ಧೆಯಲ್ಲೂ ಭಾರತಕ್ಕೆ ಚಿನ್ನ:** ಆರ್ಚರಿ ಕಾಂಪೌಂಡ್ ಮಿಶ್ರ ಸ್ಪರ್ಧೆಯಲ್ಲಿ ಭಾರತ ಚಿನ್ನದ ಪದಕ ಗೆದ್ದುಕೊಂಡಿತು, ಸಾಹಿಲ್ ಜಾಧವ್ ಮತ್ತು ಚಿಕಿತಾ ತನಿಪರ್ತಿ ಫೈನಲ್‌ನಲ್ಲಿ ದಕ್ಷಿಣ ಕೊರಿಯಾದ ಜೋಡಿಯನ್ನು ಮಣಿಸಿದರು. ಈ ಗೆಲುವಿನೊಂದಿಗೆ 2028ರಲ್ಲಿ ನಡೆಯಲಿರುವ ಲಾಸ್ ಏಂಜಲೀಸ್ ಒಲಿಂಪಿಕ್ಸ್ ಮಿಶ್ರ ತಂಡ ಸ್ಪರ್ಧೆಗೆ ಭಾರತ ನೇರವಾಗಿ ಅರ್ಹತೆ ಪಡೆದುಕೊಂಡಿತು. ದಕ್ಷಿಣ ಕೊರಿಯಾ ವಿರುದ್ಧದ ಫೈನಲ್‌ನಲ್ಲಿ ಭಾರತ ಆರಂಭದಿಂದಲೂ ಪ್ರಾಬಲ್ಯ ಸಾಧಿಸಿತು. ಚಿಕಿತಾ ತನಿಪರ್ತಿ ಮತ್ತು ಸಾಹಿಲ್ ರಾಜೇಶ್ ಜಾಧವ್ ಜೋಡಿ ಮೊದಲ ಎರಡು ಸೆಟ್‌ಗಳಲ್ಲಿ ಎಲ್ಲಾ 10 ಶಾಟ್‌ಗಳನ್ನು ಹೊಡೆದು ಮುನ್ನಡೆ ಸಾಧಿಸಿದರು. ಮೊದಲಾರ್ಧದಲ್ಲಿ ಬಲವಾದ ಪ್ರದರ್ಶನ ನೀಡಿದ ಭಾರತ, ಕೊರಿಯಾ ವಿರುದ್ಧ 80–78 ಅಂಕಗಳಿಂದ ಎರಡು ಪಾಯಿಂಟ್‌ಗಳ ಮುನ್ನಡೆ ಸಾಧಿಸಿತು. ಅಂತಿಮವಾಗಿ, ಭಾರತ ಮತ್ತು ದಕ್ಷಿಣ ಕೊರಿಯಾ ತಂಡಗಳು 157–157 ಅಂಕಗಳಿಂದ ಸಮಬಲ ಸಾಧಿಸಿದ ನಂತರ, ಪಂದ್ಯವು ಶೂಟ್–ಆಫ್‌ಗೆ ಹೋಯಿತು. ಭಾರತೀಯ ಆರ್ಚರಿಗಳು ಕೊರಿಯಾ ತಂಡದ ವಿರುದ್ಧ ಅದ್ಭುತ ಪ್ರದರ್ಶನ ನೀಡುವ ಮೂಲಕ 20–19 ರಿಂದ ಗೆಲ್ಲುವ ಮೂಲಕ ಭಾರತಕ್ಕೆ ಎಂಟನೇ ಚಿನ್ನದ ಪದಕವನ್ನು ತಂದುಕೊಟ್ಟರು. ಇದಕ್ಕೂ ಮೊದಲು ಸೆಮಿಫೈನಲ್‌ನಲ್ಲಿ, ಚಿಕಿತಾ ತನಿಪರ್ತಿ ಮತ್ತು ಸಾಹಿಲ್ (ರಾಜೇಶ್) ಜಾಧವ್ ಜೋಡಿ ಥೈಲ್ಯಾಂಡ್ ವಿರುದ್ಧ ರೋಚಕ ಪಂದ್ಯದಲ್ಲಿ ಭರ್ಜರಿ ಗೆಲುವು ಸಾಧಿಸಿತು. ನಿಕಟ ಪೈಪೋಟಿಯ ಪಂದ್ಯದಲ್ಲಿ, ಭಾರತೀಯ ಜೋಡಿ ಗಮನಾರ್ಹ ಪ್ರದರ್ಶನ ನೀಡಿ ಮತ್ತು ಥೈಲ್ಯಾಂಡ್ ಅನ್ನು 156–155 ಅಂತರದಿಂದ ಸೋಲಿಸಿ ಫೈನಲ್‌ಗೆ ಸ್ಥಾನ ಪಡೆಯಿತು. ಪಂದ್ಯದ ಆರಂಭದಿಂದಲೂ ಭಾರತೀಯ ಬಿಲ್ಲುಗಾರರು ಆಕ್ರಮಣಕಾರಿಯಾಗಿ ಆಡಿದರು. ಮೊದಲಾರ್ಧದಲ್ಲಿ 39–37 ಮುನ್ನಡೆ ಸಾಧಿಸಿದ ನಂತರ ಭಾರತೀಯ ಜೋಡಿ ತಮ್ಮ ಅತ್ಯುತ್ತಮ ಶೂಟಿಂಗ್ ಅನ್ನು ಮುಂದುವರಿಸಿತು. ಥಾಯ್ ತಂಡವು ಮತ್ತೆ ಅಂಕಗಳಿಸಲು ಅತ್ಯುತ್ತಮ ಪ್ರಯತ್ನ ಮಾಡಿದರೂ, ಅಂತಿಮ ಕ್ಷಣಗಳಲ್ಲಿ ಚಿಕಿತಾ ಮತ್ತು ಸಾಹಿಲ್ ಅವರ ನಿಖರವಾದ ಹೊಡೆತಗಳು ಭಾರತದ ಗೆಲುವನ್ನು ಖಚಿತಪಡಿಸಿದವು.

## ಮಹಿಳಾ 4x400 ರಿಲೇಯಲ್ಲಿ ಚಿನ್ನ



2026ರ ಏಷ್ಯನ್ ಕ್ರೀಡಾಕೂಟದಲ್ಲಿ ಭಾರತ ಮತ್ತೊಂದು ಚಿನ್ನದ ಪದಕ ಗೆದ್ದುಕೊಂಡಿದೆ. ಭಾರತೀಯ ಮಹಿಳಾ ತಂಡವು 4x100 ಮೀಟರ್ ರಿಲೇ ಓಟದಲ್ಲಿ ಚೊಚ್ಚಲ ಚಿನ್ನ ಗೆಲ್ಲುವ ಮೂಲಕ ಇತಿಹಾಸ ಸೃಷ್ಟಿಸಿದೆ. ಈ ಆವೃತ್ತಿಯಲ್ಲಿ ಭಾರತಕ್ಕೆ ಸಿಕ್ಕ ಆರನೇ ಚಿನ್ನದ ಪದಕ ಇದಾಗಿದೆ.

ನಗೋಯಾದಲ್ಲಿ ಭಾರತೀಯ ಮಹಿಳಾ ಅಥ್ಲೆಟಿಕ್ಸ್ ತಂಡವು ರಿಲೇ ಟ್ರ್ಯಾಕ್‌ನಲ್ಲಿ ಅದ್ಭುತ ಪ್ರದರ್ಶನ ನೀಡಿತು, ತೀವ್ರ ಪೈಪೋಟಿಯ ನಡುವೆಯೂ ಕಿರಣ್ ಪಹಲ್, ಕನ್ನಡತಿ ಪೂವಮ್ಮ ಎಂಆರ್, ಪ್ರಾಚಿ ಮತ್ತು ವಿತ್ಯ ರಾಮರಾಜ್ ಅವರ ಶರವೇಗದ ಓಟ ಭಾರತಕ್ಕೆ ಚಿನ್ನದ ಪದಕವನ್ನು ತಂದುಕೊಟ್ಟಿತು. ಈ ಪಂದ್ಯದಲ್ಲಿ ಭಾರತ 3:29.69 ನಿಮಿಷದಲ್ಲಿ ಗುರಿಯನ್ನು ತಲುಪಿದರೆ, 3:30.21 ನಿಮಿಷಗಳೊಂದಿಗೆ ಬಹ್ರೇನ್ ಬೆಳ್ಳಿ ಗೆದ್ದುಕೊಂಡಿತು. ಚೀನಾ 3:31.02 ರೊಂದಿಗೆ ಕಂಚಿನ ಪದಕಕ್ಕೆ ತೃಪ್ತಿಪಟ್ಟಿತು. ಆದಾಗ್ಯೂ ಬಹ್ರೇನ್ ಭಾರತಕ್ಕಿಂತ 0.52 ಮಿಲಿ ಸೆಕೆಂಡುಗಳಷ್ಟು ಮಾತ್ರ ಹಿಂದಿತ್ತು.

### ಭಾರತ ನಿಧಾನಗತಿಯ ಆರಂಭ

ಈ ಪಂದ್ಯದಲ್ಲಿ ಭಾರತ ನಿಧಾನಗತಿಯ ಆರಂಭ ಪಡೆಯಿತು. ಆರಂಭಿಕ ಆಟಗಾರ್ತಿ ಕಿರಣ್ ಪಹಲ್ ಹಿನ್ನಡೆ ಅನುಭವಿಸಿದರು ಮತ್ತು ಅವರು ಪೂವಮ್ಮ ಎಂಆರ್‌ಗೆ ಬ್ಯಾಟನ್ ಹಸ್ತಾಂತರಿಸುವಾಗ, ಭಾರತ ತಂಡ ಮೂರನೇ ಸ್ಥಾನದಲ್ಲಿತ್ತು. ಆದರೆ, ಅನುಭವಿ ಪೂವಮ್ಮ ಜವಾಬ್ದಾರಿ ವಹಿಸಿಕೊಂಡು ಶರವೇಗದೊಂದಿಗೆ ಭಾರತವನ್ನು ಮುನ್ನಡೆಗೆ ತಂದರು. ನಂತರ ಪ್ರಾಚಿ ಬ್ಯಾಟನ್ ತೆಗೆದುಕೊಂಡು ಭಾರತವನ್ನು ಮತ್ತಷ್ಟು ಮುಂದಕ್ಕೆ ಕೊಂಡೊಯ್ದು ಅಂತಿಮ ಹಂತದಲ್ಲಿ ವಿತ್ಯ ರಾಮರಾಜ್ ಎಲ್ಲರನ್ನೂ ಹಿಂದಿಕ್ಕಿ ಮೊದಲ ಸ್ಥಾನ ಪಡೆಯುವಲ್ಲಿ ಯಶಸ್ವಿ ಆದರು.

**ಮಹಿಳೆಯರ 4x400 ರಿಲೇಯಲ್ಲಿ ಮುಂದುವರೆದ ಭಾರತದ ಪ್ರಾಬಲ್ಯ**

ಏಷ್ಯನ್ ಕ್ರೀಡಾಕೂಟದಲ್ಲಿ ಮಹಿಳೆಯರ 4x400 ಮೀಟರ್ ರಿಲೇ ಓಟದಲ್ಲಿ ಭಾರತ ಪ್ರಾಬಲ್ಯ ಸಾಧಿಸಿದೆ. 2002 ರಿಂದ ನಡೆದ ಏಳು ಏಷ್ಯನ್ ಕ್ರೀಡಾಕೂಟಗಳಲ್ಲಿ ಇದು ಭಾರತದ ಆರನೇ ಪದಕವಾಗಿದೆ. 2023ರಲ್ಲಿ ಹ್ಯಾಂಗ್ಝೌನಲ್ಲಿ ನಡೆದ ಈ ಕ್ರೀಡಾಕೂಟದಲ್ಲಿ ಬಹ್ರೇನ್ ಚಿನ್ನ ಗೆದ್ದರೆ, ಭಾರತ ಬೆಳ್ಳಿ ಪದಕ ಗೆದ್ದಿತ್ತು. ಈಗ ಮತ್ತೊಮ್ಮೆ, ಭಾರತೀಯ ಮಹಿಳಾ ತಂಡ ಏಷ್ಯನ್ ಕ್ರೀಡಾಕೂಟದಲ್ಲಿ 4ಥ400 ಮೀಟರ್ ರಿಲೇ ಓಟದಲ್ಲಿ ಚಾಂಪಿಯನ್ ಆಗಿದೆ.

**ವಿತ್ಯಗೆ ಮೂರನೇ ಪದಕ:** ಈ ಏಷ್ಯನ್ ಕ್ರೀಡಾಕೂಟವು ವಿತ್ಯಗೆ ಬಹಳ ವಿಶೇಷವಾಗಿದೆ. ನಿನ್ನೆ ಅವರು ಪಿ.ಟಿ. ಉಷಾ ಅವರ 400 ಮೀ ಹರ್ಡಲ್ಸ್ ದಾಖಲೆಯನ್ನು ಮುರಿದು ಸುದ್ದಿಯಾಗಿದ್ದರು. ಈಗ, 4x400 ಮೀ ರಿಲೇಯಲ್ಲಿ ಚಿನ್ನ ಗೆಲ್ಲುವ ಮೂಲಕ, ಅವರು ಈ ಕ್ರೀಡಾಕೂಟದಲ್ಲಿ ತಮ್ಮ ಮೂರನೇ ಪದಕವನ್ನು ಗೆದ್ದಿದ್ದಾರೆ. ಭಾರತೀಯ ಮಹಿಳಾ ತಂಡದ ಕೊನೆಯ ಏಷ್ಯನ್ ಕ್ರೀಡಾಕೂಟದ ಅಭಿಯಾನವು ಬೆಳ್ಳಿ ಪದಕದೊಂದಿಗೆ ಕೊನೆಗೊಂಡಿತು. ಆದರೆ ಈ ಬಾರಿ, ತಂಡವು ಒಂದು ಹೆಜ್ಜೆ ಮುಂದೆ ಹೋಗಿ ಚಿನ್ನ ವಶಪಡಿಸಿಕೊಂಡಿತು. ಇದಕ್ಕೂ ಮೊದಲು, ಗುಲ್ವೀರ್ 2026 ರ ಏಷ್ಯನ್ ಕ್ರೀಡಾಕೂಟದಲ್ಲಿ ತಮ್ಮ ಮೂರನೇ ಪದಕವನ್ನು ಗೆಲ್ಲುವ ಮೂಲಕ ಸಂಚಲನವನ್ನು ಸೃಷ್ಟಿಸಿದರು .

**ಪುರುಷರ ತಂಡಕ್ಕೆ ಕಂಚು:** ಮತ್ತೊಂದೆಡೆ, ಪುರುಷರ 4x400 ಮೀ ರಿಲೇಯಲ್ಲಿ ಭಾರತ ಕಂಚಿನ ಪದಕ ಗೆದ್ದಿತು. ಎರಡನೇ ಮತ್ತು ನಾಲ್ಕನೇ ಓಟಗಾರರಾದ ಮನು ಟಿ ಮತ್ತು ವಿಶಾಲ್ ಟಿಕೆ ಅದ್ಭುತವಾಗಿ ಓಡಿದರು, ಆದರೆ ಜಪಾನ್ ಮತ್ತು ಕತಾರ್ ಅನ್ನು ಮೀರಿಸಲು ಸಾಧ್ಯವಾಗಲಿಲ್ಲ. ಜಪಾನ್ ಚಿನ್ನದ ಪದಕ ಗೆದ್ದರೆ, ಕತಾರ್ ಬೆಳ್ಳಿ ಗೆದ್ದಿತು. 4ಥ400 ಮೀ ಮಿಶ್ರ ರಿಲೇಯಲ್ಲಿ ಭಾರತೀಯ ತಂಡವು ಮೂರನೇ ಸ್ಥಾನ ಪಡೆದು ಕಂಚಿನ ಪದಕವನ್ನು ತನ್ನದಾಗಿಸಿಕೊಂಡಿತು. ಈ ಪಂದ್ಯದಲ್ಲಿ ಜಪಾನ್ 3:00.75 ಸಮಯದಲ್ಲಿ ಗುರಿ ತಲುಪಿ ಚಿನ್ನ ಗೆದ್ದರೆ, ಕತಾರ್ 3:00.93 ಸಮಯದೊಂದಿಗೆ ಬೆಳ್ಳಿ ಮತ್ತು 3:01.61 ಸಮಯದೊಂದಿಗೆ ಭಾರತ ಕಂಚು ವಶಪಡಿಸಿಕೊಂಡಿತು.

ಇದರೊಂದಿಗೆ ಇಂದು ಒಂದೇ ದಿನ ಭಾರತ 2 ಚಿನ್ನ ಸಹಿತ 6 ಪದಗಳನ್ನು ಗೆದ್ದುಕೊಂಡಿದೆ. ಇದಕ್ಕೂ ಮುನ್ನ ಮಹಿಳಾ ಟ್ರ್ಯಾಪ್ ಶೂಟಿಂಗ್‌ನಲ್ಲಿ ನೀರು ಧಂದಾ ಚಿನ್ನ ಗೆದ್ದುಕೊಂಡಿದ್ದರು ಎಂಬುದು ಗಮನಾರ್ಹ.

### ಚಿನ್ನ ಗೆದ್ದ ಕನ್ನಡತಿ ಪೂವಮ್ಮ

**ಮಂಗಳೂರು:** ಏಷ್ಯನ್ ಗೇಮ್ಸ್ ಕ್ರೀಡಾಕೂಟದ ಮಹಿಳೆಯರ 4x400 ಮೀಟರ್ ರಿಲೇಯಲ್ಲಿ ಮಿಂಚಿನ ಓಟ ಪ್ರದರ್ಶಿಸಿ ದೇಶಕ್ಕೆ ಚಿನ್ನದ ಪದಕ ತಂದುಕೊಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ ಕರ್ನಾಟಕದ ಹೆಮ್ಮೆಯ ಅಥ್ಲೀಟ್ ಎಂ.ಆರ್. ಪೂವಮ್ಮ. ಅವರ ಈ ಐತಿಹಾಸಿಕ ಸಾಧನೆಗೆ ಹೆತ್ತವರು ಸಂಭ್ರಮ ವ್ಯಕ್ತಪಡಿಸಿದ್ದಾರೆ. ಆದರೆ, ಅಂತಾರಾಷ್ಟ್ರೀಯ ಮಟ್ಟದಲ್ಲಿ ದೇಶ ಮತ್ತು ರಾಜ್ಯದ ಕೀರ್ತಿ ಪತಾಕೆ ಹಾರಿಸುತ್ತಿರುವ ಕ್ರೀಡಾಪಟುವಿಗೆ ಕರ್ನಾಟಕ ರಾಜ್ಯ ಸರ್ಕಾರದಿಂದ ಯಾವುದೇ ಕನಿಷ್ಠ ಮನ್ನಣೆ, ನೈತಿಕ ಬೆಂಬಲವಾಗಲಿ ಅಥವಾ ಸೂಕ್ತ ನಗದು ಪ್ರೋತ್ಸಾಹವಾಗಲಿ ಸಿಗುತ್ತಿಲ್ಲ ಎಂದು ಪೂವಮ್ಮ ಅವರ ತಂದೆ ಎಂ.ಜಿ. ರಾಜು ಹಾಗೂ ತಾಯಿ ಜಾಜಿ ಸುಬ್ಬಯ್ಯ ತೀವ್ರ ಬೇಸರ ಮತ್ತು ಆಕ್ರೋಶ ಹೊರಹಾಕಿದ್ದಾರೆ.



ಏಷ್ಯನ್ ಗೇಮ್ಸ್‌ನಲ್ಲಿ ಪೂವಮ್ಮ ಅದ್ಭುತ ಪ್ರದರ್ಶನ: ಮಂಗಳವಾರ ನಡೆದ ಮಹಿಳೆಯರ 4x400 ಮೀಟರ್ ರಿಲೇ ಫೈನಲ್‌ನಲ್ಲಿ ಭಾರತ ತಂಡವು 3 ನಿಮಿಷ 29.69 ಸೆಕೆಂಡ್‌ಗಳಲ್ಲಿ ಗುರಿ ಮುಟ್ಟಿ ಚಿನ್ನದ ಪದಕ ಜಯಿಸಿದೆ. ಮೊದಲ ಲೆಗ್‌ನಲ್ಲಿ ಕಿರಣ್ ಮಚೆತ್ತಿರ 3ನೇ ಸ್ಥಾನದಲ್ಲಿದ್ದಾಗ ಬ್ಯಾಟನ್ ಸ್ವೀಕರಿಸಿದ ಹಿರಿಯ ಓಟಗಾರ್ತಿ ಎಂ. ಆರ್. ಪೂವಮ್ಮ, ತಮ್ಮ ಅದ್ಭುತ ವೇಗ ಹಾಗೂ ಅನುಭವದ ಮೂಲಕ ಭಾರತವನ್ನು ಮುಂಚೂಣಿಗೆ ತಂದು ನಿಲ್ಲಿಸಿದರು. ನಂತರ ಪ್ರಾಚಿ ರಾಮರಾಜ್ ಹಾಗೂ ಕೊನೆಯ ಲೆಗ್‌ನಲ್ಲಿ ವಿತ್ಯಾ ರಾಮರಾಜ್ ಗೆಲುವಿನ ಗೆರೆ ತಲುಪಿಸಿದರು. ಈ ಕೂಟದ 4x400 ಮೀಟರ್ ಮಿಕ್ಸ್‌ಡ್ ರಿಲೇಯಲ್ಲೂ ಪೂವಮ್ಮ ಬೆಳ್ಳಿ ಪದಕ ಗೆದ್ದುಕೊಂಡಿದ್ದು, ಇದುವರೆಗೂ ಮೂರು ಒಲಿಂಪಿಕ್ ಹಾಗೂ ಸತತ ಏಷ್ಯನ್ ಗೇಮ್ಸ್‌ಗಳಲ್ಲಿ (2014, 2018 ಹಾಗೂ 2026) ಪದಕಗಳ ಬೇಟೆಯಾಡಿ ದೇಶದ ಕ್ರೀಡಾ ಇತಿಹಾಸದಲ್ಲೇ ಅಚ್ಚಳಿಯದ ದಾಖಲೆ ಬರೆದಿದ್ದಾರೆ. ಮಗಳ ಈ ಸಾಧನೆಗೆ ಸಂತಸ ವ್ಯಕ್ತಪಡಿಸುತ್ತಲೇ, ರಾಜ್ಯ ಸರ್ಕಾರದ ದಿವ್ಯ ನಿರ್ಲಕ್ಷ್ಯದ ವಿರುದ್ಧ ಪೂವಮ್ಮ ಅವರ ತಂದೆ ಎಂ.ಜಿ. ರಾಜು ಹಾಗೂ ತಾಯಿ ಜಾಜಿ ಸುಬ್ಬಯ್ಯ ಮಾಧ್ಯಮಗಳ ಮುಂದೆ ಅಳಲು ತೋಡಿಕೊಂಡಿದ್ದಾರೆ.

# ಆರ್ಚರಿಯಲ್ಲಿ ಪುರುಷರ ತಂಡಕ್ಕೂ ಒಲಿದ ಚಿನ್ನ

ಏಷ್ಯನ್ ಗೇಮ್ಸ್‌ನಲ್ಲಿ ಬುಧವಾರ ಭಾರತದ ಪಾಲಿಗೆ ಸುವರ್ಣ ದಿನವಾಗಿದೆ. ಒಂದು ಒಂದೇ ದಿನ ಬರೋಬ್ಬರಿ 4 ಚಿನ್ನದ ಪದಕಗಳನ್ನು ಬೇಟೆಯಾಡಿದೆ. ಇದರೊಂದಿಗೆ ಅಂಕ ಪಟ್ಟಿಯಲ್ಲೂ ಏರಿಕೆ ಕಂಡಿದೆ. ಪುರುಷರ ಆರ್ಚರಿ ಕಾಂಪೌಂಡ್ ಟೀಮ್ ಇವೆಂಟ್‌ನಲಿ ಭಾರತ ಚಿನ್ನದ ಪದಕವನ್ನು ಗೆದ್ದುಕೊಂಡಿತು, ಇದರಿಂದಾಗಿ ಭಾರತದ ಒಟ್ಟು ಚಿನ್ನದ ಪದಕಗಳ ಸಂಖ್ಯೆ 10ಕ್ಕೆ ಏರಿತು. ಸಾಹಿಲ್ ಜಾಧವ್, ಕುಶಾಲ್ ತಲಾಲ ಮತ್ತು ಗಣೇಶ್ ಮಣಿರತ್ನಂ ಅವರನ್ನೊಳಗೊಂಡ ಭಾರತ ತಂಡ ಫೈನಲ್ ಪಂದ್ಯದಲ್ಲಿ, ಬಲಿಷ್ಠ ಚೀನಾ ವಿರುದ್ಧ ಆರಂಭದಲ್ಲಿ ಹಿನ್ನಡೆ ಸಾಧಿಸಿದ್ದರು ಕೊನೆಯಲ್ಲಿ ಚೀನಾದ ಕ್ಸಿಯಾವೊ ಲಿಯಾವೊ, ಕ್ಸಿನ್ಯಿ ಲಿಯು ಮತ್ತು ಜಿಂಗ್ಯು ಶಿ ಅವರನ್ನೊಳಗೊಂಡ ತಂಡವನ್ನು 238–237 ಅಂತರದಿಂದ ಮಣಿಸಿ ಚಿನ್ನದ ಪದಕ ಗೆದ್ದುಕೊಂಡಿತು.



ಈ ಪಂದ್ಯ ರೋಚಕವಾಗಿತ್ತು ಭಾರತ ಆರಂಭದಲ್ಲಿ ಎರಡು ಅಂಕಗಳಿಂದ ಹಿಂದುಳಿದಿತ್ತು ಪಂದ್ಯ ಗೆಲ್ಲಲು ಬಲವಾದ ಮುಕ್ತಾಯದ ಅಗತ್ಯವಿತ್ತು. ಆರಂಭಿಕ ಸುತ್ತಿನ ಅಂತ್ಯದವೇಳೆ 58–60 ಅಂಕಗಳನ್ನು ಹೊಂದಿತ್ತು. ಮುಂದಿನ ಸುತ್ತಿನಲ್ಲಿ ಭಾರತೀಯ ಬಿಲ್ಲುಗಾರರು ಎಲ್ಲಾ ಆರು ಶಾಟ್‌ಗಳಲ್ಲಿ 10 ಅಂಕ ಪಡೆದು ಬಲಿಷ್ಠ ಕಮ್‌ಬ್ಯಾಕ್ ಮಾಡಿದರು. ಆದಾಗ್ಯೂ 118–120 ರಿಂದ ಕೇವಲ 2 ಅಂಕದಿಂದ ಹಿಂದುಳಿದಿತ್ತು. ಮೂರನೇ ಅಂತ್ಯದ ನಂತರ ಚೀನ ಒಂದು ಪಾಯಿಂಟ್‌ಗೆ ಕಳೆದುಕೊಂಡಿತು. ನಂತರ ಚೀನಾದ ಕ್ಸಿಯಾವೊ ಲಿಯಾವೊ 8 ಅಂಕ ಗಳಿಸಿದ ಕಾರಣ ಭಾರತ ಮುನ್ನಡೆ ಸಾಧಿಸಿತು. ಕೊನೆಯ ಆರು ಶಾಟ್‌ಗಳಲ್ಲಿ ಭಾರತೀಯ ದೋಷರಹಿತ 238 ಪಾಯಿಂಟ್ ಗಳಿಸಿ ಒಂದು ಪಾಯಿಂಟ್ ಅಂತರದಿಂದ ಚಿನ್ನದ ಪದಕವನ್ನು ಖಚಿತಪಡಿಸಿಕೊಂಡಿತು. ಭಾರತ ತಂಡ ಸೆಮಿಫೈನಲ್‌ನಲ್ಲಿ ಕೊರಿಯಾವನ್ನು 236–229 ಅಂತರದಿಂದ ಸೋಲಿಸಿತ್ತು. ಈ ಗೆಲುವಿನೊಂದಿಗೆ 2028ರ ಒಲಿಂಪಿಕ್ ನಲ್ಲೂ ಭಾರತ ಸ್ಥಾನವನ್ನು ಖಚಿತಪಡಿಸಿಕೊಂಡಿತು. ಏತನ್ಮಧ್ಯೆ ಭಾರತವು ಮೂರು ಕಾಂಪೌಂಡ್ ಆರ್ಚರಿ ಟೀಮ್ ಈವೆಂಟ್‌ನಲ್ಲಿ ಚಿನ್ನದ ಪದಕಗಳನ್ನು ಗೆಲ್ಲುವ ಮೂಲಕ ಏಷ್ಯನ್ ಕ್ರೀಡಾಕೂಟದಲ್ಲಿ ಕ್ಲೀನ್ ಸ್ವೀಪ್ ಮಾಡಿತು. ಪುರುಷರ ತಂಡ 2023ರ ಹ್ಯಾಂಗ್‌ಝೌನಲ್ಲಿ ನಡೆದ ಏಷ್ಯನ್ ಕ್ರೀಡಾಕೂಟದಲ್ಲೂ ಚಿನ್ನ ಗೆದ್ದುಕೊಂಡಿತ್ತು ಎಂಬುದು ಗಮನಾರ್ಹ.

# ಮಿಶ್ರ ಟ್ರ್ಯಾಪ್ ಶೂಟಿಂಗ್: ನೀರುಗೆ ಡಬಲ್ ಗೋಲ್ಡ್

ಭಾರತದ ಜೋಡಿ ನೀರು ಧಂಡಾ ಮತ್ತು ಕೈನಾನ್ ಚೆನೈ ಶೂಟಿಂಗ್ ಮಿಶ್ರ ಟ್ರ್ಯಾಪ್ ಸ್ಪರ್ಧೆಯಲ್ಲಿ ಚಿನ್ನ ಗೆದ್ದಿದ್ದಾರೆ. ಇದರೊಂದಿಗೆ ಇಂದು ಭಾರತಕ್ಕೆ ಸಿಕ್ಕ ಮೂರನೇ ಚಿನ್ನದ ಪದಕ ಇದಾಗಿದೆ. ಭಾರತೀಯ ಮಹಿಳಾ ತಂಡವು ಕಾಂಪೌಂಡ್ ಆರ್ಚರಿ ಸ್ಪರ್ಧೆಯಲ್ಲಿ ದಿನದ ಮೊದಲ ಚಿನ್ನದ ಪದಕವನ್ನು ಗೆದ್ದುಕೊಂಡಿತು.

ಇದಾದ ನಂತರ ಚಿಕಿತಾ ತನಿಪತಿ ಮತ್ತು ಸಾಹಿಲ್ ರಾಜೇಶ್ ಜಾಧವ್ ಮಿಶ್ರ ಆರ್ಚರಿಯಲ್ಲಿ ಮೊದಲ ಸ್ಥಾನ ಪಡೆದು ಚಿನ್ನ ವಶಪಡಿಸಿಕೊಂಡರು, ಇದೀಗ ನೀರು ಧಂಡಾ ಮತ್ತು ಕೈನಾನ್ ಚೆನೈ ಮಿಶ್ರ ಟ್ರ್ಯಾಪ್ ಶೂಟಿಂಗ್ ಸ್ಪರ್ಧೆಯಲ್ಲಿ ಚಿನ್ನದ ಪದಕವನ್ನು ಕೊರಳಿಗೇರಿಸಿಕೊಂಡಿದ್ದಾರೆ. ಏತನ್ಮಧ್ಯೆ ನೀರು ಸತತ ಎರಡನೇ ದಿನವೂ ಚಿನ್ನದ ಪದಕ ಗೆದ್ದುಕೊಂಡರು.



**ಫೈನಲ್ ಪಂದ್ಯ ಹೀಗಿತ್ತು:** ಮೊದಲ ಸುತ್ತಿನಲ್ಲಿ ಭಾರತ 10 ರಲ್ಲಿ ಆರು ಗುರಿಗಳನ್ನು ಹೊಡೆದು ಕೊನೆಯ ಸ್ಥಾನದಲ್ಲಿತ್ತು. ನಂತರ ನೀರು ಮತ್ತು ಕೈನಾನ್ ಮುಂದಿನ ಸುತ್ತಿನಲ್ಲಿ ಒಂದೇ ಒಂದು ಗುರಿಯನ್ನು ಕಳೆದುಕೊಳ್ಳದೆ ಅದ್ಭುತ ಪ್ರದರ್ಶನ ನೀಡಿ ಎಲ್ಲಾ 10 ಅಂಕಗಳನ್ನು ಕಲೆಹಾಕಿ ಚಿನ್ನದ ಪದಕ ಗೆದ್ದುಕೊಂಡರು. ನೀರು ಮತ್ತು ಕೈನಾನ್ ಜೋಡಿ ಫೈನಲ್‌ನಲ್ಲಿ 40 ರಲ್ಲಿ 34 ಅಂಕಗಳನ್ನು ಗಳಿಸಿತು ಏಷ್ಯನ್ ದಾಖಲೆ ನಿರ್ಮಿಸಿತು. ಇದಕ್ಕೂ ಮೊದಲು, ಈ ವರ್ಷದ ಜನವರಿಯಲ್ಲಿ ISSF ಕ್ರೀಡಾಕೂಡದ ಫೈನಲ್‌ನಲ್ಲಿ 30 ಅಂಕಗಳನ್ನು ಗಳಿಸಿದ್ದ ಕತಾರ್ ಹೆಸರಿನಲ್ಲಿ ಏಷ್ಯನ್ ದಾಖಲೆ ಇತ್ತು. ಏತನ್ಮಧ್ಯೆ ಈ ಪಂದ್ಯದಲ್ಲಿ ಕತಾರ್‌ನ ಮೊಹಮ್ಮದ್ ಅಲ್–ರುಮಾಹಿ ಮತ್ತು ರೇ ಬಾಸಿಲ್ 32 ಅಂಕಗಳೊಂದಿಗೆ ಬೆಳ್ಳಿ ಪದಕವನ್ನು ಗೆದ್ದರೆ, ಚೀನಾದ ಚಿ ಯಿಂಗ್ ಮತ್ತು ಸನ್ ಯಿನಾಂಗ್ ಒಟ್ಟು 23 ಅಂಕಗಳೊಂದಿಗೆ ಕಂಚಿನ ಪದಕವನ್ನು ಗೆದ್ದುಕೊಂಡರು.

**9 ಚಿನ್ನದ ಪದಕಗಳಲ್ಲಿ 5 ಮಹಿಳೆಯರದ್ದೆ:** ಭಾರತ ಇಲ್ಲಿಯವರೆಗೆ ಗೆದ್ದಿರುವ ಒಂಬತ್ತು ಚಿನ್ನದ ಪದಕಗಳಲ್ಲಿ ಐದು ಪದಕಗಳನ್ನು ಮಹಿಳೆಯರು ಗೆದ್ದಿದ್ದಾರೆ. ಪಿಸ್ತೂಲ್, ಶಾಟ್‌ಗನ್ ಮತ್ತು ಆರ್ಚರಿ ಮಿಶ್ರ ತಂಡ ಸ್ಪರ್ಧೆಗಳಲ್ಲಿ ತಲಾ ಮೂರು ಚಿನ್ನದ ಪದಕಗಳು ಬಂದಿವೆ. ಪುರುಷರ ಕಬಡ್ಡಿ ತಂಡವೂ ಒಂದು ಚಿನ್ನ ಗೆದ್ದಿದೆ. ಆರ್ಚರಿ ಕಾಂಪೌಂಡ್ ಸ್ಪರ್ಧೆಯಲ್ಲಿ ಭಾರತೀಯ ಮಹಿಳಾ ತಂಡ ಸತತ ಎರಡನೇ ಚಿನ್ನದ ಪದಕ ಗೆದ್ದಿದೆ. ಈ ಆವೃತ್ತಿಯಲ್ಲಿ ಚಿಕಿತಾ ತನಿಪತಿ ಮತ್ತು ನೀರು ಧಂಡಾ ತಲಾ ಎರಡು ಚಿನ್ನದ ಪದಕಗಳನ್ನು ಗೆದ್ದಿದ್ದಾರೆ.

**8ನೇ ಸ್ಥಾನಕ್ಕೆ ತಲುಪಿದ ಭಾರತ:** ಶೂಟಿಂಗನ್‌ಲ್ಲಿ ಪದಕ ಗೆಲ್ಲುತ್ತಿದ್ದಂತೆ ಭಾರತ ಏಷ್ಯನ್ ಗೇಮ್ಸ್ ಪದಕ ಪಟ್ಟಿಯಲ್ಲಿ 8ನೇ ಸ್ಥಾನಕ್ಕೆ ತಲುಪಿದೆ. ಇದುವರೆಗೆ 9 ಚಿನ್ನ, 21 ಬೆಳ್ಳಿ ಮತ್ತು 27 ಕಂಚಿನ ಪದಕಗಳೊಂದಿಗೆ ಭಾರತದ ಖಾತೆಗೆ ಒಟ್ಟು 57 ಪದಕಗಳು ಸೇರ್ಪಡೆಗೊಂಡಿವೆ. ಇದಲ್ಲದೆ ಭಾರತ ಇತರ ಸ್ಪರ್ಧೆಗಳಲ್ಲೂ ಪದಕಗಳನ್ನು ಗೆಲ್ಲುವ ಅವಕಾಶವನ್ನು ಹೊಂದಿದೆ. ಅದೇ ರೀತಿ, ಆರ್ಚರಿಯಲ್ಲಿ ಭಾರತೀಯ ಪುರುಷರ ತಂಡವು ಫೈನಲ್ ಪಂದ್ಯಕ್ಕೆ ಮುನ್ನಡೆದಿದ್ದು ಇಲ್ಲಿಯೂ ಚಿನ್ನದ ನಿರೀಕ್ಷೆಯಲ್ಲಿದೆ.

# ನಾನು ಕೊನೆಯ ಹಂತದ ಕೀಮೋಥೆರಪಿಗೆ ಒಳಗಾಗುತ್ತಿದ್ದ ಸಂದರ್ಭದಲ್ಲಿ ಒಪ್ಪಿಕೊಂಡ ಸಿನಿಮಾ 'ಬೇಲ್': ಹ್ಯಾಟ್ರಿಕ್ ಹೀರೋ

ಟ್ರೈಲರ್ ಹಾಗೂ ಹ್ಯಾಟ್ರಿಕ್ ಹೀರೋ ಮಾಸ್ ಲುಕ್ ನಿಂದಲೇ ಸ್ಯಾಂಡಲ್ ವುಡ್‌ನಲ್ಲಿ ದೊಡ್ಡ ನಿರೀಕ್ಷೆ ಹುಟ್ಟಿಸಿರುವ ಸಿನಿಮಾ ಬೇಲ್. ಈ ಚಿತ್ರ ಬಿಡುಗಡೆಗೆ ಎರಡು ದಿನ ಮಾತ್ರ ಉಳಿದಿದ್ದು, 'ಬೇಲ್' ಚಿತ್ರದ 'ಶಿವಣ್ಣ ಆಂಥೆಮ್' ಲಿರಿಕಲ್ ಸಾಂಗ್ ಅದ್ಧೂರಿಯಾಗಿ ಬಿಡುಗಡೆಯಾಗಿದೆ. ಸಾಂಗ್ ರಿಲೀಸ್ ಸಮಾರಂಭ ಇತ್ತೀಚಿಗೆ ಖಾಸಗಿ ಮಾಲ್‌ವೊಂದರಲ್ಲಿ ನಡೆಯಿತು. ಈ ಸಂಧರ್ಭದಲ್ಲಿ ನಟ ಶಿವರಾಜ್‌ಕುಮಾರ್ ಹಾಗೂ ನಿರ್ದೇಶಕ ಪವನ್ ಒಡೆಯರ್ ತಮ್ಮ ವೈಯಕ್ತಿಕ ಬದುಕಿನ ನೋವು–ಸವಾಲು ಹಾಗೂ ಚಿತ್ರೀಕರಣದ ದಿನಗಳ ಭಾವನಾತ್ಮಕ ಅನುಭವಗಳನ್ನು ಹಂಚಿಕೊಂಡಿದ್ದಾರೆ.

**ಅವರ ನಂಬಿಕೆ ಕಂಡು ನಾವು ಕಣ್ಣೀರಿಟ್ಟಿದ್ದೆವು:** ವೇದಿಕೆಯಲ್ಲಿ ಮಾತನಾಡಿದ ಶಿವರಾಜ್‌ಕುಮಾರ್, ತಾವು ಚಿಕಿತ್ಸೆ ಪಡೆಯುತ್ತಿದ್ದ ಕಠಿಣ ದಿನಗಳನ್ನು ಮೆಲುಕು ಹಾಕಿದರು. ನಾನು ಕೊನೆಯ ಹಂತದ ಕೀಮೋಥೆರಪಿಗೆ ಒಳಗಾಗುತ್ತಿದ್ದ ಸಂದರ್ಭದಲ್ಲಿ ನಿರ್ದೇಶಕ ಪವನ್ ಒಡೆಯರ್ ಹಾಗೂ ಅವರ ಪತ್ನಿ ಅಪೇಕ್ಷಾ ಭೇಟಿ ನೀಡಿ ಕಥೆ ಹೇಳಿದ್ದರು. ಕೀಮೋಥೆರಪಿ ವೇಳೆ ಸಾಮಾನ್ಯವಾಗಿ ಕೂದಲು ಉದುರುತ್ತದೆ, ಅಷ್ಟು ಪ್ರಬಲ ಡೋಸ್ ನೀಡಿದ್ದರೂ ದೇವರ ದಯೆಯಿಂದ ನನಗೆ ಒಂದೇ ಒಂದು ಕೂದಲು ಕೂಡ ಉದುರಲಿಲ್ಲ. 64 ವರ್ಷದವರೆಗೆ ಜೋಪಾನವಾಗಿ ಕಾಪಾಡಿಕೊಂಡು ಬಂದಿದ್ದ ಕೂದಲನ್ನು ನೋಡಿ ಬೇರೆಯವರು ಮರುಗಬಾರದು ಎಂಬ ಆತಂಕವಿತ್ತು. ಚಿಕಿತ್ಸೆಯ ಆ ಕಷ್ಟದ ವೇಳೆಯಲ್ಲೂ ಪವನ್ ದಂಪತಿ ಬಂದು ಪ್ರೀತಿಯಿಂದ ಅಡ್ವಾನ್ಸ್ ನೀಡಿ ಸಿನಿಮಾ ಒಪ್ಪಿಸಿದರು. ಅವರ ನಂಬಿಕೆ ಕಂಡು ನಾನು ಹಾಗೂ ಪತ್ನಿ ಗೀತಾ ಭಾವುಕರಾಗಿ ಕಣ್ಣೀರಿಟ್ಟಿದ್ದೆವು ಎಂದು ಶಿವಣ್ಣ ಹೇಳಿದರು.

**ವಯಸ್ಸಾಗುವುದನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳಬೇಕು:** ಚಿತ್ರದ ಪಾತ್ರವರ್ಗದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಶಿವಣ್ಣ, "ಇದು ಕೇವಲ ಒಬ್ಬ ವ್ಯಕ್ತಿಯ ಶೋ ಅಲ್ಲ. ಎಲ್ಲಾ ಪಾತ್ರಗಳು ಚಿತ್ರಕಥೆಗೆ ಜೀವ ತುಂಬಿವೆ. ದೀಕ್ಷಿತ್ ಅತ್ಯುತ್ತಮ ಡ್ಯಾನ್ಸರ್ ಮತ್ತು ಹ್ಯಾಂಡ್‌ಸಮ್ ನಟ. ಸಂಜನಾ ಉತ್ತಮ ಅಭಿನಯ ನೀಡಿದ್ದಾರೆ. ಇನ್ನು 'ದುನಿಯಾ' ಚಿತ್ರದಿಂದಲೂ ನಾನು ಲೂಸ್ ಮಾದ ಯೋಗಿಗೆ ದೊಡ್ಡ ಅಭಿಮಾನಿಯಾಗಿದ್ದು, ಅವರೊಂದಿಗೆ ತೆರೆ ಹಂಚಿಕೊಂಡಿದ್ದು ಖುಷಿ ನೀಡಿದೆ. ವಯಸ್ಸಾಗುವುದನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳಬೇಕು, 64 ವರ್ಷವಾದರೂ ಕೆಲಸ ಮಾಡುವ ಸಕಾರಾತ್ಮಕ ಮನೋಭಾವ ನಮ್ಮಲ್ಲಿರಬೇಕು. ಇದೊಂದು ಉತ್ತಮ ಸಿನಿಮಾ ಎಂದು ಹೇಳಿದರು.

**'ಹಿಟ್–ಫ್ಲಾಪ್ ಮೀರಿ ನಿಂತಿರುವ ಶಿವಣ್ಣನಿಗೆ ಏನೂ ಆಗಲ್ಲ':** ನಿರ್ದೇಶಕ ಪವನ್ ಒಡೆಯರ್ ಮಾತನಾಡಿ, "ಕ್ರಿಕೆಟ್ ಟೂರ್ನಮೆಂಟ್ ಆಕ್ಷನ್ ವೇಳೆ ಶಿವಣ್ಣನಿಗೆ ಕ್ಯಾನ್ಸರ್




ಆಗಿದೆ ಎಂಬ ಸುದ್ದಿ ಕೇಳಿ ದಿಗ್ಭ್ರಮೆಗೊಂಡಿದ್ದೆ. ಆದರೆ ಚಿತ್ರರಂಗದ ಕಾರ್ಮಿಕರ ಬದುಕಿಗೆ ನಿರಂತರವಾಗಿ ಆಸರೆಯಾಗಿರುವ, ಹಿಟ್–ಫ್ಲಾಪ್ ಮೀರಿ ನಿಂತಿರುವ ಶಿವಣ್ಣನಿಗೆ ಏನೂ ಆಗಲ್ಲ ಎಂಬ ನಂಬಿಕೆಯಿತ್ತು. ಚಿಕಿತ್ಸೆ ಮುಗಿಸಿ ಗುಣಮುಖರಾಗಿ ಬಂದ ತಕ್ಷಣವೇ ಅವರು ನಮಗೆ ಕರೆ ಮಾಡಿ ಚಿತ್ರೀಕರಣಕ್ಕೆ ಡೇಟ್ಸ್ ನೀಡಿದರು. ಇದಕ್ಕೆ ಬೆನ್ನೆಲುಬಾಗಿ ನಿಂತ ಗೀತಕ್ಕ ಹಾಗೂ ನಿವೇದಿತಾ ಶಿವರಾಜ್‌ಕುಮಾರ್ ಅವರಿಗೆ ಧನ್ಯವಾದಗಳು. ಈ ಚಿತ್ರವನ್ನು ನಾವೇ ನಿರ್ಮಿಸಲು ಹೊರಟಿದ್ದಾಗ, ಕಥೆ ಮೆಚ್ಚಿದ ಕೆವಿಎನ್ ಪ್ರೊಡಕ್ಷನ್ಸ್‌ನ ವೆಂಕಟ್ ಕೆ. ನಾರಾಯಣ ಅವರು ಬೆಂಬಲವಾಗಿ ನಿಂತರು" ಎಂದರು.

ತಮ್ಮ ತಾಯಿಯ ನೆನಪಿನಲ್ಲಿ ಭಾವುಕರಾದ ಪವನ್, "ಎರಡನೇ ಶೆಡ್ಯೂಲ್ ಚಿತ್ರೀಕರಣದ ವೇಳೆ ನನ್ನ ತಾಯಿಗೂ ಕ್ಯಾನ್ಸರ್ ಇರುವುದು ಪತ್ತೆಯಾಯಿತು. ಅವರು ಶಿವಣ್ಣ ಅವರ ಅಪ್ಪಟ ಅಭಿಮಾನಿ. ತಮಗೆ ನೋವಿದ್ದರೂ, 'ಚಿತ್ರ ಚೆನ್ನಾಗಿ ಮೂಡಿಬರಬೇಕು, ಸದಾ ಕೆಲಸ ಮಾಡು' ಎಂದೇ ಹುರಿದುಂಬಿಸುತ್ತಿದ್ದರು. ತಾಯಿ ತೀರಿಕೊಂಡ ಸೂತಕದ ದಿನದಲ್ಲೂ ನಾನು ಈ ಸಿನಿಮಾಗಾಗಿ ಶ್ರಮಿಸಿದ್ದೇನೆ" ಎಂದು ಕಣ್ಣೀರಾದರು.

ಕೆವಿಎನ್ ಪ್ರೊಡಕ್ಷನ್ಸ್ ಲಾಂಛನದಲ್ಲಿ ವೆಂಕಟ್ ಕೆ. ನಾರಾಯಣ ನಿರ್ಮಿಸಿರುವ, ಪವನ್ ಒಡೆಯರ್ ನಿರ್ದೇಶನದ ಅಜನೀಶ್ ಲೋಕನಾಥ್ ಅವರ ಸಂಗೀತ, ವೈದಿ ಎಸ್ ಅವರ ಛಾಯಾಗ್ರಹಣ ಹಾಗೂ ಮುರಳಿ ಮಾಸ್ಟರ್ ಅವರ ನೃತ್ಯ ಸಂಯೋಜನೆ ಹೊಂದಿರುವ 'ಬೇಲ್' ಚಿತ್ರವು ಅಕ್ಟೋಬರ್ 2 ರಂದು ರಾಜ್ಯಾದ್ಯಂತ ತೆರೆಕಾಣಲು ಸಜ್ಜಾಗಿದೆ. ಈ ಸುಂದರ ವೇದಿಕೆ ಮೇಲೆ ನಟ ಶಿವರಾಜ್ ಕುಮಾರ್ ಜೊತೆ ನಿವೇದಿತಾ, ಡ್ಯಾನ್ಸ್ ಮಾಸ್ಟರ್ ಮುರಳಿ, ಯುವ ನಟ ದೀಕ್ಷಿತ್ ಶೆಟ್ಟಿ ಸೇರಿದಂತೆ ಇಡೀ ಬೇಲ್ ಚಿತ್ರತಂಡ ಕುಮಾರಿ ಹಾಡಿಗೆ ಸಖತ್ ಸ್ಟೆಪ್ ಹಾಕಿದರು.

# ರಾಮರಸ ಚಿತ್ರತಂಡದಿಂದ ನಟ ಕೋಮಲ್ ಪೋಸ್ಟರ್ ರಿಲೀಸ್



ಬಹುನಿರೀಕ್ಷಿತ ಮಿಥಿಕಲ್ ಫ್ಯಾಂಟಸಿ ಡ್ರಾಮಾ 'ರಾಮರಸ' ಚಿತ್ರದ ನಿರ್ಮಾಪಕರು ಸ್ಯಾಂಡಲ್‌ವುಡ್‌ನ ನೆಚ್ಚಿನ "ಸೆನ್ಸೇಷನಲ್ ಸ್ಟಾರ್" ಕೋಮಲ್ ಕುಮಾರ್ ಅವರ ಪಾತ್ರದ ಫಸ್ಟ್ ಲುಕ್ ಪೋಸ್ಟರ್ ಅನ್ನು ಅಧಿಕೃತವಾಗಿ ಬಿಡುಗಡೆ ಮಾಡಿದ್ದಾರೆ. ಖ್ಯಾತ ಚಿತ್ರ ನಿರ್ಮಾಪಕ ಗುರು ದೇಶಪಾಂಡೆ ಅವರ ಜಿ ಸಿನಿಮಾಸ್ ಬ್ಯಾನರ್ ಅಡಿಯಲ್ಲಿ ಮೂಡಿಬರುತ್ತಿರುವ ಈ ಚಿತ್ರವು ತನ್ನ ಬೃಹತ್ ತಾರಾಬಳಗ ಮತ್ತು ಆಳವಾಗಿ ಬೇರೂರಿದ ಸಾಂಸ್ಕೃತಿಕ ವಿಷಯಗಳಿಂದ ಅಪಾರ ಕುತೂಹಲ ಮೂಡಿಸುತ್ತಿದೆ. ತಮ್ಮ ಐಕಾನಿಕ್ ಹಾಸ್ಯ ಟೈಮಿಂಗ್ ಮತ್ತು ಬಹುಮುಖ ನಟನೆಗೆ ಹೆಸರುವಾಸಿಯಾಗಿರುವ ಕೋಮಲ್ ಕುಮಾರ್ ಅವರು ರಾಮರಸ ಚಿತ್ರದಲ್ಲಿ ತಮ್ಮದೇ ಹೆಸರಿನ ಪಾತ್ರದಲ್ಲಿ ವಿಶಿಷ್ಟ ಅವತಾರದಲ್ಲಿ ಕಾಣಿಸಿಕೊಂಡಿದ್ದಾರೆ. ಹೊಸದಾಗಿ ಅನಾವರಣಗೊಂಡ ಪೋಸ್ಟರ್ ನಟನನ್ನು ನಿಗೂಢತೆ ಮತ್ತು ನಾಟಕೀಯತೆಯ ಆಕರ್ಷಕ ಮಿಶ್ರಣದಲ್ಲಿ ತೋರಿಸುತ್ತದೆ. ಇದು ಅವರ ಸಾಮಾನ್ಯ ಹಾಸ್ಯ ಪಾತ್ರಗಳಿಂದ ವಿಭಿನ್ನವಾಗಿ ಪ್ರೇಕ್ಷಕರನ್ನು ಅಚ್ಚರಿಗೊಳಿಸುವ ಅಭಿನಯದ ಸುಳಿವನ್ನು ನೀಡುತ್ತದೆ.

ರಾಷ್ಟ್ರ ಪ್ರಶಸ್ತಿ ವಿಜೇತ ಚಿತ್ರ ನಿರ್ಮಾಪಕ ಬಿ.ಎಂ. ಗಿರಿರಾಜ್ ನಿರ್ದೇಶನದ ರಾಮರಸವು ಫ್ಯಾಂಟಸಿ, ಜಾನಪದ ಮತ್ತು ಬೇರೂರಿದ ಸಂಪ್ರದಾಯಗಳ ಅಂಶಗಳನ್ನು ಸಂಯೋಜಿಸುವ ವಿಸ್ತಾರವಾದ ಕಥಾಹಂದರವನ್ನು ಹೊಂದಿದೆ. ಈ ಚಿತ್ರದಲ್ಲಿ ಬಿಗ್ ಬಾಸ್ ಕನ್ನಡ ವಿನ್ನರ್ ಕಾರ್ತಿಕ್ ಮಹೇಶ್, ಪ್ರಜ್ವಲ್ ದೇವರಾಜ್, ಅದಾ ಶರ್ಮಾ ಮತ್ತು ಹೆಬಾ ಪಟೇಲ್ ಸೇರಿದಂತೆ ಬೃಹತ್ ತಾರಾಬಳಗವಿದೆ.

ಪಾತ್ರದ ಅನಾವರಣದ ಬಗ್ಗೆ ಮಾತನಾಡಿದ ನಿರ್ಮಾಪಕ ಗುರು ದೇಶಪಾಂಡೆ, ಈ ಸೇರ್ಪಡೆಯು ಚಿತ್ರದ ಸಂಕೀರ್ಣ ವಿಶ್ವಕ್ಕೆ ಆಕರ್ಷಕವಾದ ಕ್ರಿಯಾತ್ಮಕತೆಯನ್ನು ತರುತ್ತದೆ. ರಾಮರಸವು ಸಾಂಪ್ರದಾಯಿಕ ಜಾನಪದ ಮತ್ತು ಸ್ಥಳೀಯ ಆಧ್ಯಾತ್ಮಿಕ ಆಚರಣೆಗಳಿಂದ ಸ್ಫೂರ್ತಿ ಪಡೆದ, ಬೇರೂರಿದ ಫ್ಯಾಂಟಸಿ ಚಿತ್ರವಾಗಿದ್ದು, ಪರಾಶಕ್ತಿಯ ದೈವಿಕ ಆಟವನ್ನು ಅನ್ವೇಷಿಸುತ್ತದೆ ಎಂದರು.

ಇನ್ನು ರಾಮರಸ ಚಿತ್ರದ ತಾರಾಗಣ ನೋಡುವುದಾದರೆ ಡೈನಾಮಿಕ್ ಪ್ರಿನ್ಸ್ ಪ್ರಜ್ವಲ್ ದೇವರಾಜ್, ಕೋಮಲ್ ಕುಮಾರ್ ಬಿಗ್ ಬಾಸ್ ವಿನ್ನರ್ ಕಾರ್ತಿಕ್ ಮಹೇಶ್, ಅದಾ ಶರ್ಮಾ, ಕಾಮಿಡಿ ಕಿಂಗ್ ಶರಣ್, ಹೆಬಾ ಪಟೇಲ್, ಬಾಲಾಜಿ ಮನೋಹರ್, ವೈಶಾಲಿ ನಟ ಆದಿತ್ಯಾ ಹೀಗೆ ಇನ್ನೂ ಅನೇಕ ಪ್ರಮುಖ ತಾರೆಯರ ಹೆಸರುಗಳನ್ನು ಶೀಘ್ರದಲ್ಲೇ ಘೋಷಿಸಲಾಗುವುದು ಎಂದು ಚಿತ್ರತಂಡ ತಿಳಿಸಿದೆ.

ಚಿತ್ರಕ್ಕೆ ಜಟ್ಟಾ ಹಾಗೂ ಮೈತ್ರಿ ಅಂತಹ ಸಿನಿಮಾಗಳನ್ನು ನಿರ್ದೇಶನ ಮಾಡಿರೋ ಬಿ.ಎಂ. ಗಿರಿರಾಜ್ ನಿರ್ದೇಶನವಿದ್ದು, ಗುರು ದೇಶಪಾಂಡೆ ಮತ್ತು ವಿಕ್ರಂ ಆರ್ಯ ನಿರ್ಮಾಣ ಮಾಡಿದ್ದಾರೆ. ಕ್ರಿಯೇಟಿವ್ ಹೆಡ್ ಆಗಿ ಗುರು ದೇಶಪಾಂಡೆ, ಕೆಕೆ ಕೃಷ್ಣ ಕುಮಾರ್ ಕ್ಯಾಮರಾ ವರ್ಕ್ , ಬಿ.ಜೆ ಭರತ್ ಸಂಗೀತ ನಿರ್ದೇಶನ, ಅರ್ಜುನ್ ಕಿಟ್ಟು ಸಂಕಲನ, ಹೊಸ್ಮನೆ ಮೂರ್ತಿ, ಕಲಾ ನಿರ್ದೇಶನ ಮತ್ತು ಡಾ. ವಿ. ನಾಗೇಂದ್ರ ಪ್ರಸಾದ್, ನಾಗಾರ್ಜುನ್ ಶರ್ಮಾ, ಪುನೀತ್ ರಂಗಸ್ವಾಮಿ ಅವರ ಸಾಹಿತ್ಯವಿದೆ.

ಸದ್ಯ ಈ ಚಿತ್ರಕ್ಕೆ ಹೈ–ಎಂಡ್ ಸ್ಟುಡಿಯೋಗಳಲ್ಲಿ ಉನ್ನತ ಮಟ್ಟದ ಎಡಿಟಿಂಗ್, ಗ್ರಾಫಿಕ್ಸ್ ಮತ್ತು ಸೌಂಡ್ ಡಿಸೈನಿಂಗ್ ಕೆಲಸಗಳು ಭರದಿಂದ ಸಾಗಿವೆ. ಪ್ರೇಕ್ಷಕರಿಗೆ ದೃಶ್ಯ ವೈಭವದ ಅನುಭವ ನೀಡಲು ತಂಡವು ಹಗಲಿರುಳು ಶ್ರಮಿಸುತ್ತಿದೆ. ಮುಂಬರುವ ದಿನಗಳಲ್ಲಿ ಒಂದೊಂದಾಗಿ ಪರಿಚಯಿಸಲಾಗುವುದು. ತಂಡವು ಶೀಘ್ರದಲ್ಲೇ ಅಧಿಕೃತ ಟೀಸರ್ ಬಿಡುಗಡೆ ಮಾಡಿ, ಸದ್ಯದಲ್ಲೇ ಅದ್ಧೂರಿಯಾಗಿ ಪ್ಯಾನ್–ಇಂಡಿಯಾ ಮಟ್ಟದಲ್ಲಿ ಬಿಡುಗಡೆ ಆಗಲಿದೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper. udayavahini.in www.udayavahini.in Udaya vahini news Udaya vahini news